Bennett & Coleman
THE TIMES OF INDIA
ಭಾನುವಾರ,17 ಮೇ 2026 | ಪುಟಗಳು: 15+4 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
www.vijaykarnataka.com C
ಸಂಪುಟ: 27 | ಸಂಚಿಕೆ: 136

VK ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಗೃಹ, ಸಾರ್ವಜನಿಕ ಆಡಳಿತ ಖಾತೆ ಉಳಿಸಿಕೊಂಡು ಸಚಿವರಿಗೆ 10 ಖಾತೆಗಳನ್ನು ಹಂಚಿದ ಸಿಎಂ ವಿಜಯ್

ಮನೆಯೇ ಕಾರ್ಯಾಲಯ



»ಲವಲVK ನೋಡಿ

ಪ. ಬಂಗಾಳ ಚುನಾವಣೆ ವೇಳೆ ಪ್ರಚೋದನಕಾರಿ ಹೇಳಿಕೆ, ಅಭಿಷೇಕ್ ಬ್ಯಾನರ್ಜಿ ವಿರುದ್ಧ ಎಫ್ಐಆರ್

ಕೇರಳದಲ್ಲಿ ಕಾಂಗ್ರೆಸ್ ಪ್ರಬುದ್ಧ ನಡೆ

ರಾಜ್ಯಕಾರಣ
ಶಶಿಧರ ಹೆಗಡೆ
shashidhar.nandikal@timesofindia.com

ಕೇರಳದ ನಾಯಕನ ಆಯ್ಕೆಯಲ್ಲಿ ಕಾಂಗ್ರೆಸ್ ತನ್ನ ಮಿದುಳನ್ನು ಸರಿಯಾಗಿ ಉಪಯೋಗಿಸಿದೆ. ನಾನಾ ರಾಜ್ಯಗಳಲ್ಲಿ ತನ್ನದೇ ನಿರ್ಣಯದಿಂದ ಗೊಂದಲಕ್ಕೆ ದಾರಿಮಾಡಿದ್ದ ಹೈಕಮಾಂಡ್ ಕೇರಳದಲ್ಲಿ ಎಚ್ಚೆತ್ತುಕೊಂಡಿದೆ. ಪ್ರಮುಖವಾಗಿ ಮಾಸ್ ಲೀಡರ್‌ಗಳಿಂದ ಪಕ್ಷದ ಭವಿಷ್ಯ ನಿರ್ಮಾಣವೆಂದು ಅರಿತುಕೊಂಡಿದೆ.

ಕೇರಳದ ನಾಯಕನ ಆಯ್ಕೆಯಲ್ಲಿ ಕಾಂಗ್ರೆಸ್ ಅತ್ಯಂತ ಪ್ರಬುದ್ಧ ಮತ್ತು ಪ್ರಜಾಸತ್ತಾತ್ಮಕ ನಡೆ ಅನುಸರಿಸಿದೆ. ಜನಾಭಿಪ್ರಾಯಕ್ಕೆ ಮನ್ನಣೆ ನೀಡುವ ಕಾಂಗ್ರೆಸ್‌ನ ಈ ಸಕಾರಾತ್ಮಕ ಧೋರಣೆ ಭವಿಷ್ಯದಲ್ಲಿ ಪಕ್ಷವನ್ನು ಬಲಯುತಗೊಳಿಸುವ ಆಶಯಕ್ಕೆ ಪೂರಕವಾಗಬಲ್ಲದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಸ್ ಲೀಡರ್‌ಗಳಿಗಷ್ಟೆ ಬಾಳಿಕೆ ಎನ್ನುವುದು ಕೇರಳದ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೈಗೊಂಡ ನಿರ್ಧಾರದಿಂದ ವೇದ್ಯ.

ಚುನಾವಣೆಗೆ ತೆರಳುವ ಮೊದಲೇ ಸಂಸದರಿಗೆ ಸ್ಪರ್ಧಾವಕಾಶ ಇಲ್ಲ ಎಂಬ ನಿರ್ಣಯವನ್ನು ಕಾಂಗ್ರೆಸ್ ಪಾಸು ಮಾಡಿತ್ತು. ಸಂಸದರಲ್ಲಿ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿದ್ದವರು ಕೆ.ಸಿ. ವೇಣುಗೋಪಾಲ್ ಮತ್ತು ಕೆ. ಸುಧಾಕರನ್. ತಿರುವನಂತಪುರ ಸಂಸದ ಶಶಿ ತರೂರ್ ಹೆಸರೂ ಚರ್ಚೆಯಲ್ಲಿತ್ತು. ಚುನಾವಣೆ ಘೋಷಣೆಗೆ ಮುನ್ನ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದ್ದ ಶಶಿ ತರೂರ್ ಸೌಹಾರ್ದ ಮಾತುಕತೆ ನಡೆಸಿದ್ದರು. ಅಲ್ಲಿಯವರೆಗೆ ಅಂತರ ಕಾಯ್ದುಕೊಂಡು ಪ್ರಶ್ನಾರ್ಥಕವಾಗಿದ್ದ ತರೂರ್ ಚುನಾವಣೆಗೆ ಹತ್ತಿರವಿರುವಾಗ ಕದನ ವಿರಾಮ ಘೋಷಿಸಿದ್ದರು. ಬಳಿಕ ಚುನಾವಣಾ ಪ್ರಕ್ರಿಯೆಯಲ್ಲೂ ಪಕ್ಷದ ಪರವಾಗಿ ತೊಡಗಿಸಿಕೊಂಡಿದ್ದರು. ಹಾಗಾಗಿ ಈ ಸಂಸದರುಗಳು ಚುನಾವಣೆಯ ನಂತರ ದಾಳ ಉರುಳಿಸಬಹುದು ಎಂಬ ಮಾತಿತ್ತು. ಈ ಮೂವರಲ್ಲಿ ಕಣ್ಣೂರು ಸಂಸದ ಕೆ.ಸುಧಾಕರನ್ ಹೈಕಮಾಂಡ್ ಮೇಲೆ ಒತ್ತಡ ಹೇರುವಷ್ಟು ಪ್ರಭಾವಿಯಲ್ಲ, ಶಶಿ ತರೂರ್ ರೇಸಿಗಿಳಿಯುವ ಮನಸ್ಸು ಮಾಡಲಿಲ್ಲ, ಅಥವಾ ಅವರು ವಾಸ್ತವ ಪ್ರಪಂಚದಲ್ಲಿ ಬದುಕುವುದನ್ನು ಸ್ವೀಕರಿಸಿದರು ಎನ್ನಬಹುದು. ಇನ್ನು ಉಳಿದವರು ಕೆ.ಸಿ.ವೇಣುಗೋಪಾಲ್! ಇವರು ರಾಹುಲ್ ಗಾಂಧಿ ಅವರಿಗೆ ಆಪ್ತ. ಎಐಸಿಸಿ ಪ್ರಧಾನ ಕಾರ್ಯದರ್ಶಿಯ(ಸಂಘಟನೆ) ಸ್ಥಾನಬಲದಿಂದ ಕೇರಳದಲ್ಲೂ ಹಿಡಿತ ಹೊಂದಿದ್ದಾರೆ. ಆದ್ದರಿಂದ ಚುನಾವಣೆ ವೇಳೆ ಮತ್ತು ಫಲಿತಾಂಶದ ನಂತರವೂ ಸಿಎಂ ಹುದ್ದೆಯ ಪ್ರಬಲ ಆಕಾಂಕ್ಷಿಯಾಗಿ ಕೆಸಿವಿ ತಮ್ಮನ್ನು ಪ್ರೊಜೆಕ್ಟ್ ಮಾಡಿಕೊಂಡರು.

ವಿ.ಡಿ.ಸತೀಶನ್ ಕೇರಳದಲ್ಲಿ ಪಕ್ಷದ ಜನಪ್ರಿಯ ನಾಯಕ. ಕಳೆದ 5 ವರ್ಷದಿಂದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರದ ವಿರುದ್ಧ ಮುಂಚೂಣಿಯಲ್ಲಿದ್ದು ಜನಾಭಿಪ್ರಾಯ ರೂಪಿಸಿದವರು ಇದೇ ಸತೀಶನ್. ಈ ಬಾರಿ ಯುಡಿಎಫ್ ಅಧಿಕಾರಕ್ಕೆ ಬಂದರೆ ಆಡಳಿತದ ಸೂತ್ರವನ್ನು ಸತೀಶನ್ ಹಿಡಿಯುವ ನಿರೀಕ್ಷೆಯೂ ಇತ್ತು. ವೇಣುಗೋಪಾಲ್ ಅದಕ್ಕೆ ಅಡ್ಡಿಯಾಗುತ್ತಾರೆ ಎಂಬ ಸುಳಿವಂತೂ ಇದ್ದೇ ಇತ್ತು. ಕೇರಳ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಮೇಶ್ ಚೆನ್ನಿತ್ತಲ ಅವರಿಗೂ ಅಪೇಕ್ಷೆಯಿತ್ತು. ಆದರೆ, ಸತೀಶನ್ ಪರ ವಾತಾವರಣ ಇರುವುದರಿಂದ ಚೆನ್ನಿತ್ತಲ ಹೆಸರು ಅಷ್ಟಾಗಿ ಓಡಲಿಲ್ಲ, ಇಷ್ಟೆಲ್ಲದರ ನಡುವೆ ಶುಕ್ರದೆಸೆ ಬಂದದ್ದು ಮಾತ್ರ ವೇಣುಗೋಪಾಲ್ ಹೆಸರಿಗೆ. ಅದಲ್ಲದಿದ್ದರೆ ಸಂಸದರಿಗೆ ರಾಜ್ಯದಲ್ಲಿ ಸ್ಥಾನವಿಲ್ಲ ಎಂಬ ನಿರ್ಬಂಧದ ಕೋಟೆಯನ್ನು ಭೇದಿಸಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಚಲಾವಣೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ, ದಿಲ್ಲಿಯ ಸ್ಥಾನಬಲದಿಂದ ಪಕ್ಷದ ಶಾಸಕರ ಮೇಲೆ ಕೆಸಿವಿ ಪ್ರಭಾವ ಬೀರಿದ್ದು ನಿಶ್ಚಿತ. ಹೆಚ್ಚಿನ ಶಾಸಕರು ವೇಣುಗೋಪಾಲ್‌ಗೆ ಮತ ಹಾಕಿದ್ದರ ಬಗ್ಗೆಯೂ ವರದಿಯಾಗಿದೆ. ಶಾಸಕಾಂಗ ಪಕ್ಷದ ಸಭೆಯ ಮತಗಳ ಆಧಾರದಲ್ಲೇ ನಾಯಕನ ಆಯ್ಕೆಯಾಗುತ್ತಿದ್ದರೆ ಕೆಸಿವಿಗೆ ಸಿಎಂ ಪಟ್ಟ ಒಲಿಯಬೇಕಿತ್ತು. ಆದರೆ, ಹೈಕಮಾಂಡ್ ಜನರ ನಾಡಿಮಿಡಿತ ಅರಿತು ನಿರ್ಣಯ ಕೈಗೊಂಡಿದೆ. ಇನ್ನೊಂದೆಡೆ ಯುಡಿಎಫ್‌ನ ಪಾಲುದಾರ ಪಕ್ಷ ಮುಸ್ಲಿಂ ಲೀಗ್(ಐಯುಎಂಎಲ್) ಸತೀಶನ್ ಪರ ನಿಂತಿತು. ಮುಸ್ಲಿಂ ಲೀಗ್‌ನ ಎಲ್ಲ 22 ಶಾಸಕರು ಸತೀಶನ್ ಅವರನ್ನು ಸಿಎಂ ಮಾಡುವಂತೆ ಕಾಂಗ್ರೆಸ್ ಹೈಕಮಾಂಡ್‌ಗೆ ಸಂದೇಶ ಕಳುಹಿಸಿದ್ದರು. ಹಾಗೆಯೇ ಕೇರಳ ಕಾಂಗ್ರೆಸ್‌ನ ನಾನಾ ಘಟಕಗಳಿಂದಲೂ ಸತೀಶನ್ ಅವರಿಗೆ ಸ್ಥಾನ ನೀಡುವಂತೆ ಆಗ್ರಹ ಬಂತು. ಸೋಷಿಯಲ್ ಮೀಡಿಯಾಗಳಲ್ಲೂ ಸತೀಶನ್‌ಗೆ ಬೆಂಬಲಿಸಿ ಚರ್ಚೆಗಳಾದವು. ಹಾಗಾಗಿ ಹೈಕಮಾಂಡ್ ತುಸು ಸಮಯ ಖರೀದಿ ಮಾಡಿತು. ಎಲ್ಲ ಬೆಳವಣಿಗೆಯನ್ನು ನಿಕಷಕ್ಕೆ ಒಡ್ಡಿತು. ಎ.ಕೆ.ಆಂಟನಿ ಸೇರಿದಂತೆ ಕೇರಳ ಕಾಂಗ್ರೆಸ್‌ನ ಹಿರಿತಲೆಗಳ ಸಲಹೆ ಪಡೆಯಲಾಯಿತು. ಅಂತಿಮವಾಗಿ ಸತೀಶನ್ ಆಯ್ಕೆ ಬಗ್ಗೆ ಅಧಿಕೃತ ಘೋಷಣೆ ಹೊರಡಿಸುವಂತೆ ರಾಹುಲ್ ಗಾಂಧಿ ಸೂಚನೆ ಕೊಟ್ಟರು.

ಕೇರಳ ಚುನಾವಣೆ ಯಶಸ್ಸಿನಲ್ಲಿ ವೇಣುಗೋಪಾಲ್ ಪಾತ್ರ ಇಲ್ಲವೆಂದಲ್ಲ, ಖಂಡಿತವಾಗಿಯೂ ಪಕ್ಷದ ವಾರ್ ರೂಮ್ ನಿರ್ವಹಣೆಯಿಂದ ಹಿಡಿದು ಎಲ್‌ಡಿಎಫ್ ವಿರುದ್ಧದ ಆಡಳಿತ ವಿರೋಧಿ ಅಲೆಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಕೆಸಿವಿ ತಂತ್ರಗಾರಿಕೆ ಮಾಡಿದ್ದರು. ಚುನಾವಣೆಗೆ ಸಂಪನ್ಮೂಲ ಹೊಂದಿಸುವುದಕ್ಕೂ ಪ್ರಧಾನ ಪಾತ್ರ ವಹಿಸಿದ್ದರು. ಕರ್ನಾಟಕದಲ್ಲಿ ಪಕ್ಷದ ಸರಕಾರ ಇರುವುದರಿಂದ ಇಲ್ಲಿನ ಹಲವು ನಾಯಕರನ್ನು ಕೇರಳ ಚುನಾವಣೆ ಕೆಲಸಕ್ಕೆ ಕೆಸಿವಿ ಅವರೇ ನಿಯೋಜಿಸಿದ್ದರು. ಜತೆಗೆ ಕರ್ನಾಟಕ ಕಾಂಗ್ರೆಸ್ ಎಲ್ಲ ರೀತಿಯಿಂದ ಸಹಕರಿಸಿತು ಎಂದು ಹೇಳಲಾಗುತ್ತದೆ. ಆದರೆ, ಕೈಗೆ ಬಂದ ತುತ್ತು ಬಾಯಿಗೆ ಬಂದಿಲ್ಲ ಎಂಬ ಸ್ಥಿತಿ ವೇಣುಗೋಪಾಲ್‌ರದ್ದು. ಹಿಂದಿನ ಅನೇಕ ತಪ್ಪುಗಳನ್ನು ಸರಿಪಡಿಸಿಕೊಳ್ಳುವತ್ತ ಪಕ್ಷ ಹೆಜ್ಜೆಯಿಟ್ಟದ್ದರಿಂದ ವೈಯಕ್ತಿಕವಾಗಿ ವೇಣುಗೋಪಾಲ್‌ಗೆ ನಿರಾಶೆಯಾಗಿದೆಯಷ್ಟೆ. ಅದೇನಿದ್ದರೂ ಪಕ್ಷದ ಭವಿಷ್ಯದ ದೃಷ್ಟಿಯಿಂದ ಹೈಕಮಾಂಡ್ ಯಥಾಯೋಗ್ಯವಾಗಿ ವ್ಯವಹರಿಸಿದೆ ಎಂದೇ ಕೇರಳದ ನಾಯಕನ ಆಯ್ಕೆಯ ಸೂತ್ರದ ಬಗ್ಗೆ ಸಮರ್ಥಿಸಿಕೊಳ್ಳಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ನಾನಾ ರಾಜ್ಯಗಳ ಸರಕಾರ ರಚನೆ ವೇಳೆ ಒತ್ತಡಕ್ಕೆ ಸಿಲುಕಿದ ಕಾಂಗ್ರೆಸ್ ಪೆಟ್ಟು ತಿಂದಿದೆ. ಅದಕ್ಕೆ ಪಂಜಾಬ್, ರಾಜಸ್ಥಾನ, ಛತ್ತೀಸ್‌ಗಢದಲ್ಲಿ ಪಕ್ಷ ಹಿನ್ನಡೆ ಅನುಭವಿಸಿರುವುದು ಸಾಕ್ಷಿಗಲ್ಲುಗಳು. ಮಧ್ಯ ಪ್ರದೇಶದಲ್ಲಿ ಜ್ಯೋತಿರಾದಿತ್ಯ ಸಿಂಧಿಯಾ, ಅಸ್ಸಾಮ್‌ನಲ್ಲಿ ಹಿಮಂತ ಬಿಸ್ವಾ ಶರ್ಮಾರಂಥ ನಾಯಕರನ್ನೇ ಕಾಂಗ್ರೆಸ್ ಬಿಟ್ಟುಕೊಟ್ಟಿದೆ. ಪಂಜಾಬ್‌ನಲ್ಲಿ ಚುನಾವಣೆಗೆ 6 ತಿಂಗಳು ಬಾಕಿಯಿರುವಾಗ ಅಲ್ಲಿನ ವರ್ಚಸ್ವಿ ನಾಯಕ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಪದಚ್ಯುತಗೊಳಿಸಿದ್ದರಿಂದ ಮುಖಭಂಗವಾಗಿತ್ತು. ರಾಜಸ್ಥಾನ, ಛತ್ತೀಸ್‌ಗಢದಲ್ಲಿ ಎರಡೂವರೆ ವರ್ಷದ ಒಪ್ಪಂದವೆಂಬ ಗೋಜಲೇ ಪಕ್ಷವನ್ನು ಗುಡಿಸಿ ಹಾಕಿದೆ. ಕರ್ನಾಟಕದಲ್ಲೂ ಇಂಥದೇ ಗೊಂದಲದಿಂದ ಏನಾಗುತ್ತಿದೆ ಎಂಬುದನ್ನು ಬಾಳೆಹಣ್ಣಿನ ಸಿಪ್ಪೆ ಸುಲಿದಂತೆ ಬಿಡಿಸಿ ಬಿಡಿಸಿ ಹೇಳಬೇಕಾಗಿಲ್ಲ, ಅರ್ಥವಾಗುವವರಿಗೆ ಅದು ಅರ್ಥವಾಗುತ್ತದೆ.

ಕೇರಳದಲ್ಲಿ ಎರಡೂವರೆ ವರ್ಷದ ಒಡಂಬಡಿಕೆ ಎಂಬ ವದಂತಿಗಳಿಗೆ ಕಾಂಗ್ರೆಸ್ ಹೈಕಮಾಂಡ್ ಆಸ್ಪದವನ್ನೇ ನೀಡಿಲ್ಲ, ಹೈಕಮಾಂಡ್ ಈ ಹಿಂದಿನ ಪ್ರಮಾದಗಳಿಂದ ಹೊರಬರಲು ಯೋಚಿಸುತ್ತಿದೆ ಎಂಬುದೇ ಇದರ ಅರ್ಥ. ಒಂದು ವೇಳೆ ಕೇರಳದಲ್ಲೂ ಅಧಿಕಾರ ಹಂಚಿಕೆಯ ಆಯ್ಕೆಯನ್ನು ಮುಕ್ತವಾಗಿ ಇಟ್ಟುಕೊಂಡಿದ್ದರೆ ಶೈಶವದಲ್ಲೇ ಅಲ್ಲಿನ ಸರಕಾರ ತೊಂದರೆಗೆ ಸಿಲುಕುತ್ತಿತ್ತು. ನಾಯಕತ್ವದ ಸಂಘರ್ಷವನ್ನು ಚಾಲ್ತಿಯಲ್ಲಿ ಇಟ್ಟಂತಾಗುತ್ತಿತ್ತು. ಈಗ ಅಷ್ಟರ ಮಟ್ಟಿಗೆ ಕಾಂಗ್ರೆಸ್ ಹೈಕಮಾಂಡ್ ಎಚ್ಚೆತ್ತುಕೊಂಡಿದೆ ಎನ್ನಬಹುದು.

ಮಾಸ್ ಲೀಡರ್‌ಗಳು ವೋಟ್‌ಬ್ಯಾಂಕನ್ನು ಪ್ರಭಾವಿಸುತ್ತಾರೆ. ಅಂಥವರನ್ನು ನೆಚ್ಚಿಕೊಳ್ಳುವುದು ಮತ್ತು ಅಪ್ಪಿಕೊಳ್ಳುವುದು ರಾಜಕೀಯ ಪಕ್ಷಗಳಿಗೆ ಅವಶ್ಯಕ. ಪಕ್ಷದ ಗೆಲುವಿಗೆ ನೀಲನಕ್ಷೆ ತಯಾರಿಸುವವರು, ಅಂಗೈನಲ್ಲಿ ಧನರೇಖೆ ಹೊಂದಿರುವವರೂ ಅಗತ್ಯ. ಅದೇನೇ ಇದ್ದರೂ ಅಂತಿಮವಾಗಿ ಜನಮತಗಣನೆಗೇ ಮೌಲ್ಯ ಎಂಬ ಮಹತ್ವದ ಸಂದೇಶವನ್ನು ಕೇರಳದ ಉದಾಹರಣೆ ಮೂಲಕ ಕಾಂಗ್ರೆಸ್ ಸಾರಿದೆ. ■

ತೆರೆದ ಕಿಟಕಿಯಾಚೆಗೆ ಬುದ್ಧನ ಕಿರುನಗೆ

ವಿಸ್ಮಯ ದೋಣಿ
ಕೀರ್ತಿ ಕೋಲ್ಗಾರ್
keerthi.ks@timesofindia.com

ಅಪಾರ್ಟ್‌ಮೆಂಟಿನ ಹನ್ನೆರಡನೇ ಮಹಡಿಯ ಆ ಗಾಜಿನ ಕಿಟಕಿ ಯಾವತ್ತೂ ಮುಚ್ಚಿಯೇ ಇರುತ್ತಿತ್ತು. ಆದರ ಆಚೆ ಬಿಸಿಲಿರಲಿ, ಮಳೆಯಿರಲಿ... ಒಳಗಿನ ಎಸಿ ಗಾಳಿ ಮಾತ್ರ ಸದಾ ಸ್ವಿಟ್ಜರ್ಲೆಂಡಿನ ಹದದಲ್ಲಿರುತ್ತಿತ್ತು. ಅಲ್ಲಿ ಕಾಲ ಬದಲಾಗುವುದರ ಗುರುತೇ ಸಿಗುತ್ತಿರಲಿಲ್ಲ. ಗೋಡೆಗಳಿಗೆ ಬಳಿದ ದುಬಾರಿ ಎಮಲ್ಷನ್ ಬಣ್ಣದ ವಾಸನೆ; ದಿನಕ್ಕೆ ಮೂರು ಬಾರಿ ನೆಲವೊರೆಸಿದರೂ ಮೂಗು ಮುರಿಯದ ರೊಬೊ ವ್ಯಾಕ್ಯೂಮ್ ಕ್ಲೀನರಿನ 'ಜಿಂಯ್'ಗುಟ್ಟುವ ಸದ್ದು; ಅಡುಗೆಮನೆಯಲ್ಲಿ ಮೈಕ್ರೊ ಓವನ್ನಿನ 'ಬೀಪ್' ಸದ್ದಿನ ನಡುವೆ ಒಂಬತ್ತು ವರುಷದ, 'ಆಧುನಿಕ ಸಿದ್ಧಾರ್ಥ' ಬೆಳೆಯುತ್ತಿದ್ದ.

ಅವನ ತಂದೆ ಶುದ್ಧೋದನ, ತಾಯಿ ಮಾಯಾ ಇಬ್ಬರೂ ಬೆಳ್ಳಂಬೆಳಗ್ಗೆ ಕಣ್ರೆಪ್ಪೆ ತೆರೆಯುವ ಮುನ್ನವೇ ಲಾಗಿನ್ ಆಗುವ ಸಾಫ್ಟ್‌ವೇರ್ ಲೋಕದ ದೊರೆಗಳು. ಎಷ್ಟೇ ಹಣ ಸುರಿದಾದರೂ ಸರಿ, ಮಗನಿಗೆ ಜಗತ್ತಿನ ಯಾವ ಕೊರತೆಯೂ ಕಾಡಬಾರದು, ತಾವು ಬಾಲ್ಯದಲ್ಲಿ ಪಟ್ಟ ಕಷ್ಟದ ಕಿಂಚಿತ್ ನೆರಳೂ ಅವನ 'ಬ್ರಾಂಡೆಡ್' ಬದುಕಿನ ಮೇಲೆ ಬೀಳಬಾರದು ಎಂಬುದೇ ಇವರ ಜೀವಿತದ ಹಠ. ಹೀಗಾಗಿ, ಸಿದ್ಧಾರ್ಥನಿಗೆ ಜಗತ್ತೆಂದರೆ ಅಮೆಜಾನ್, ಫ್ಲಿಪ್‌ಕಾರ್ಟಿನ ಬಾಕ್ಸುಗಳಲ್ಲಿ ಪ್ಯಾಕ್ಡ್ ಆಗಿ ಬರುವ ಪ್ಲಾಸ್ಟಿಕ್ ಆಟಿಕೆಗಳು; ಸ್ಮಾರ್ಟ್‌ಫೋನು, ಐಪ್ಯಾಡಿನೊಳಗೆ ಮಿನುಗುವ ಕಾರ್ಟೂನು, ಗೇಮ್ ಗಳಷ್ಟೇ. ಆ ಪುಟಾಣಿಗೆ ಹಸಿವು ಗೊತ್ತಿತ್ತು; ಆದರೆ ಅನ್ನವನ್ನು ಸ್ವಿಗ್ಗಿ ಹುಡುಗನೇ ಬೆಳೆಯುತ್ತಿದ್ದಾನೆ ಅಂತಲೇ ಭಾವಿಸಿದ್ದ. ಸಿದ್ಧಾರ್ಥ ಗಾಜಿನಾಚೆ ಬೀಳುವ ಮಳೆ ಕಂಡಿದ್ದ; ಆದರೆ, ಮಣ್ಣು ಒದ್ದೆಯಾದಾಗ ಏಳುವ ಸುಗಂಧ ಅವನನ್ನು ಎಂದಿಗೂ ತಟ್ಟಿರಲಿಲ್ಲ, ಲಿವಿಂಗ್ ರೂಮಿನಲ್ಲಿ ಆಟೋಮ್ಯಾಟಿಕ್ ಸ್ಪ್ರೇಯರ್ ಉಗುಳುತ್ತಿದ್ದ ಕೃತಕ ಲ್ಯಾವೆಂಡರ್‌ನ ಪರಿಮಳ, ಅಪ್ಪ ಪೂಸಿಕೊಳ್ಳುತ್ತಿದ್ದ ಡಿಯೋಡ್ರೆಂಟುಗಳ ಸುಗಂಧವಷ್ಟೇ ಅವನಿಗೆ ತಿಳಿದಿತ್ತು. ಒಂದು ರೀತಿಯಲ್ಲಿ ಶುದ್ಧೋದನ, ಮಾಯಾ ಇಬ್ಬರೂ ತಮ್ಮ ಮಗನಿಗೆ ಯಾವುದೋ ಅನಾಮಧೇಯ ಇನ್ಶೂರೆನ್ಸ್ ಕಂಪನಿಯಂತೆ ಬದುಕಿನ ಎಲ್ಲಾ ರಿಸ್ಕುಗಳಿಗೂ ಮುಂಚಿತವಾಗಿಯೇ ಪ್ರೀಮಿಯಂ ಕಟ್ಟಿ 'ಪ್ರೊಟೆಕ್ಷನ್' ಕೊಟ್ಟುಬಿಟ್ಟಿದ್ದರು.

ಇದನ್ನೆಲ್ಲ ನೋಡುತ್ತಿದ್ದ ಅಜ್ಜ ಮಾತ್ರ ಒಮ್ಮೊಮ್ಮೆ ''ಮೊಮ್ಮಗನೇ... ಹೊರಗೊಂದು ಕಾಡುಂಟು, ಚೆಂದದ ಪ್ರಾಣಿಗಳುಂಟು. ತೋರಿಸ್ತೀನಿ ಬಾ...,'' ಎನ್ನುತ್ತಿದ್ದ. ಆಗ ಸಿದ್ಧಾರ್ಥ ''ಬೇಡ ತಾತಾ, ಅಪ್ಪ ಬೈತಾರೆ. ಕಾಡು, ಪ್ರಾಣಿ-ಪಕ್ಷಿಗಳೆಲ್ಲ ಇರೋದು ಯುಟ್ಯೂಬಲ್ಲಿ, ಡಿಸ್ಕವರಿ ಚಾನೆಲ್ಲೊಳಗೆ. ನೀನು ಹೇಳ್ತಿರೋ ಕಾಡು ಹೊರಗೆಲ್ಲೂ ಇಲ್ಲ,'' ಎಂದು ಬಿಡುತ್ತಿದ್ದ.

ಮೊನ್ನೆ ಸಂಜೆ ಹೀಗಾಯಿತು. ಹೊರಗೆ ಹಠಾತ್ತನೆ ಆಕಾಶ ಕಪ್ಪಿಟ್ಟಿತು. ಜೋರು ಮುಸಲಧಾರೆ. ಬೆಂಗಳೂರಿನ ಮಳೆಯೆಂದರೆ ಗೊತ್ತಲ್ಲ? ಬಿರುಗಾಳಿಯ ಹೊಡೆತಕ್ಕೆ ಅಪಾರ್ಟ್‌ಮೆಂಟಿನ ಇಡೀ ಗ್ರಿಡ್ ಫೇಲಾಗಿ, ಕರೆಂಟೇ ಕಾಣದಾಯಿತು. ದುಬಾರಿ ಮೆಂಟೇನೆನ್ಸ್ ಕಟ್ಟುತ್ತಿದ್ದರೂ ಇನ್ವರ್ಟರ್‌ಗಳೂ ಕೈಕೊಟ್ಟು, ಸದಾ ಗುಂಯ್‌ಗುಟ್ಟುತ್ತಿದ್ದ ಉಪಕರಣಗಳೆಲ್ಲ ಒಮ್ಮೆಲೆ ಉಸಿರು ನಿಲ್ಲಿಸಿದವು. ಇಡೀ ಫ್ಲಾಟಿನೊಳಗೆ ಒಂದು ವಿಚಿತ್ರವೆನ್ನುವಂಥ ನಿಶ್ಶಬ್ದ.

ಪವರ್ರು, ಇಂಟರ್ನೆಟ್ಟೇ ಇಲ್ಲದ ಮೇಲೆ ಮನೆಯೊಳಗಿರಲು ಸಾಧ್ಯವೇ ಇಲ್ಲವೆನಿಸಿತು ಶುದ್ಧೋದನನಿಗೆ. ಪುಟಾಣಿ ಸಿದ್ಧಾರ್ಥನ ಕೈಹಿಡಿದು ಮಹಡಿಯ ಮೆಟ್ಟಿಲುಗಳನ್ನು ಅದೇಕೋ ಇಳಿಯಲಾರಂಭಿಸಿದ. ಲಿಫ್ಟ್ ಬಳಸಿಯಷ್ಟೇ ಅಭ್ಯಾಸವಿದ್ದ ಸಿದ್ಧಾರ್ಥ ''ಪಪ್ಪಾ, ನಾವು ಪಾತಾಳಕ್ಕೆ ಹೋಗ್ತಿದ್ದೀವಾ? ಇಲ್ಲಿಂದ ಹೊರಹೋಗಲು 'ಎಕ್ಸಿಟ್' ಬಟನ್ ಇಲ್ವಾ?,'' ಎಂದು ಮುಗ್ಧವಾಗಿ ಕೇಳಿದ. ಶುದ್ಧೋದನನಿಗೆ ತಾನು ಮಗನನ್ನು ಇಷ್ಟು ದಿನ ಯಾವ ಸುಪತ್ತಿಗೆಯ ಜೈಲಿನಲ್ಲಿಟ್ಟಿದ್ದೆ ಎಂಬ ಅರಿವಾಗಿ ಒಳಗೊಳಗೆ ಸಣ್ಣಗೆ ಕಂಪನವೂ ಆಯಿತು. ಕೊನೆಗೂ ಸೆಕ್ಯೂರಿಟಿ ಗೇಟನ್ನು ದಾಟಿ, ಕಾಂಕ್ರೀಟ್ ಕೋಟೆಯಿಂದ ಮಗನೊಂದಿಗೆ ಮೊದಲ ಬಾರಿಗೆ ಹೊರಗಿನ ನೈಜ ರಸ್ತೆಗೆ ಕಾಲಿಟ್ಟ ಶುದ್ಧೋದನ. ಎಲ್ಲೆಲ್ಲೂ ಮಳೆನೀರು, ಕೆಸರು. ಬೀದಿದೀಪದ ಹಳದಿ ಬೆಳಕು ಆ ನೀರಿನ ಮೇಲೆ ಬಿದ್ದು ಬಂಗಾರದಂತೆ ಹೊಳೆಯುತ್ತಿತ್ತು. ಒದ್ದೆ ಮಣ್ಣಿನ, ಕೊಳೆತ ಎಲೆಗಳ ಮತ್ತು ರಸ್ತೆ ಬದಿಯ ಗಾಡಿಯಲ್ಲಿ ಕಾಯಿಸುತ್ತಿದ್ದ ಟೀ ಪುಡಿಯ ವಾಸನೆ ಒಟ್ಟಿಗೆ ಮೂಗಿಗೆ ಬಡಿಯುತ್ತಿತ್ತು. ಸಿದ್ಧಾರ್ಥನಿಗೆ ಇಡೀ ವಾತಾವರಣವೇ ಆಹ್ಲಾದ, ಹೊಸ ವಿಚಿತ್ರವೆಂಬಂತೆ ತೋರುತ್ತಿತ್ತು.

ಅಷ್ಟರಲ್ಲಿ, ರಸ್ತೆಯ ತಿರುವಿನಲ್ಲಿ ಏನೋ ಗದ್ದಲ ಕೇಳಿಸಿತು. ತರಕಾರಿ ಮಾರುವ ಮುದುಕನೊಬ್ಬನ ಕೈಗಾಡಿ ರಸ್ತೆ ಗುಂಡಿಯೊಳಗೆ ಮಗುಚಿ ಬಿದ್ದಿತ್ತು. ಗಾಡಿಯಲ್ಲಿದ್ದ ಕೊತ್ತಂಬರಿ ಸೊಪ್ಪು, ಟೊಮೆಟೊ, ಹಸಿಮೆಣಸುಗಳೆಲ್ಲವೂ ಆ ಕೊಳಕು ನೀರಿನಲ್ಲಿ ತೇಲುತ್ತಿದ್ದವು. ಆ ಮುದುಕ ಕತ್ತಲಲ್ಲಿ ಮಳೆಗೆ ಒದ್ದೆಯಾಗಿ ನಡುಗುತ್ತಾ, ನೆಲದ ಮೇಲೆ ಬಿದ್ದಿದ್ದ ಟೊಮೆಟೊಗಳನ್ನು ಒಂದೊಂದಾಗಿ ಹೆಕ್ಕಲು ಪರದಾಡುತ್ತಿದ್ದ. ಅವನ ಕಂಗಳ ಕಣ್ಣೀರನ್ನೂ ಮಳೆನೀರು ಅಳಿಸಿಹಾಕಿತ್ತು. ಆದರೆ, ಅವನ ಮುಖದ ಅಸಹಾಯಕತೆ ಮಾತ್ರ ಆ ಕತ್ತಲಲ್ಲೂ ಒಂಟಿಯಾಗಿ ಎದ್ದು ಕಾಣುತ್ತಿತ್ತು.

ಇದನ್ನೆಲ್ಲ ನೋಡಲಾಗದೆ, ಅದೇ ರಸ್ತೆ ಬದಿಯ ಶೆಡ್‌ನಲ್ಲಿ ವಾಸಿಸುತ್ತಿದ್ದ ಎಂಟೊಂಬತ್ತು ವರ್ಷದ ಪುಟಾಣಿಯೊಬ್ಬಳು ಓಡಿಬಂದಳು. ಅವಳ ಮೈಮೇಲೆ ಯಾವುದೇ ಮಾಲ್‌ಗಳಲ್ಲಿ ಸಿಗುವ ಬ್ರಾಂಡೆಡ್ ಬಟ್ಟೆಯಿರಲಿಲ್ಲ; ಹರಿದ ಪೆಟಿಕೋಟು- ಲಂಗವಷ್ಟೇ ಇತ್ತು. ತಕ್ಷಣ ಅವಳು ಆ ಕೊಳಕು ನೀರಿನಲ್ಲಿ ಮಂಡಿಯೂರಿ, ಒಂದೊಂದೇ ತರಕಾರಿಗಳನ್ನು ಹೆಕ್ಕಿ ಕೊಟ್ಟಳು. ಹರಿದ ಲಂಗದಿಂದಲೇ ಟೊಮೆಟೊಗಳನ್ನು ಒರೆಸಿ ಮುದುಕನ ಬುಟ್ಟಿಗೆ ಹಾಕುತ್ತಿದ್ದಳು. ಅವಳ ಮುಖದಲ್ಲಿ ಇದೊಂದು ಕನಿಷ್ಠ ಕೆಲಸವೆಂಬ ಬೇಸರವಿರಲಿಲ್ಲ, ಯಾವುದೇ ರೀಲ್ಸ್‌ಗಾಗಿ ಮಾಡುವ ನಟನೆಯಿರಲಿಲ್ಲ, ಕಣ್ಣೆದುರಿನ ನೋವಿಗೆ ಕರಗುವ ಸಹಜ ಆರ್ದ್ರತೆ ಇತ್ತಷ್ಟೇ. ಹಸಿವಿನ ನಡುವೆಯೂ ಮತ್ತೊಬ್ಬರ ಕಣ್ಣೀರನ್ನು ಗುರುತಿಸಬಲ್ಲ ವಿಶೇಷ ಸಿರಿವಂತಿಕೆ ಅವಳಲ್ಲಿತ್ತು.

ಈ ದೃಶ್ಯವನ್ನೆಲ್ಲ ನೋಡುತ್ತಾ ಸಿದ್ಧಾರ್ಥ ನಿಂತ ಜಾಗದಲ್ಲೇ ಕ್ಷಣಕಾಲ ಮರಗಟ್ಟಿದ. ಅವನು ಇಷ್ಟು ದಿನ ಐಪ್ಯಾಡ್ ಪರದೆಯ ಮೇಲೆ 'ಗೇಮ್ ಓವರ್' ಆದಾಗಲೆಲ್ಲ 'ರಿಪ್ಲೇ' ಬಟನ್ ಒತ್ತುತ್ತಿದ್ದ. ಆದರೆ, ಬದುಕೇ ಒಮ್ಮೆಗೆ ಹೀಗೆ ಮುಗುಚಿ ಬೀಳಬಹುದು, ಅದಕ್ಕೆ 'ರೀಸ್ಟಾರ್ಟ್' ಅಥವಾ 'ರೀಸೆಟ್' ಬಟನ್ನುಗಳನ್ನು ಹುಡುಕುವುದು ಅಷ್ಟು ಸುಲಭವಲ್ಲ ಎಂದು ತಿಳಿದಿದ್ದೇ ಈಗ. ಹಾಗೆ ಬಿದ್ದ ಬದುಕನ್ನು ಮೇಲೆತ್ತಲು ಎಷ್ಟೆಲ್ಲ ಕೈಕೆಸರು ಮಾಡಿಕೊಳ್ಳಬೇಕು ಎಂಬ ಕಟು ಸತ್ಯ ತೀವ್ರವಾಗಿ ಅವನನ್ನು ತಟ್ಟಿತು. ಆ ಮುದುಕನ ನಡುಗುವ ಕೈಗಳು, ಆ ಹುಡುಗಿಯ ಒದ್ದೆ ಕಂಗಳು ಅವನ ಹೃದಯ ಕಲಕಿದವು.

ಅವನಿಗೆ ತನ್ನ ಹನ್ನೆರಡನೇ ಮಹಡಿಯ ಐಷಾರಾಮಿ-ಸುರಕ್ಷಿತ ಲೋಕ, ಮೊಬೈಲಿನ ವರ್ಚುವಲ್ ಜಗತ್ತುಗಳೆಲ್ಲ ಜೀವನ ವಾಸ್ತವಗಳಲ್ಲ ಎನ್ನಿಸತೊಡಗಿತು. ತಂದೆಯ ಕೈಯನ್ನು ಕೊಡವಿಕೊಳ್ಳುತ್ತಾ ಕೇಳಿದ, ''ಡ್ಯಾಡಿ... ಆ ತಾತ ಯಾಕೆ ಅಳ್ತಿದ್ದಾರೆ? ಆ ಅಕ್ಕನಿಗೆ ಚಳಿ ಆಗ್ತಿಲ್ವಾ? ನಾವ್ಯಾಕೆ ಅವರಿಗೆ ಹೆಲ್ಪ್ ಮಾಡ್ತಿಲ್ಲ? ನಮ್ಮ ಅಮೆಜಾನ್‌ನಲ್ಲಿ ಇದಕ್ಕೆಲ್ಲಾ ಪರಿಹಾರ ಸಿಗಲ್ವಾ?''. ಶುದ್ಧೋದನನಿಗೆ ನೂರಾರು ಆ್ಯಪ್‌ಗಳು ನೆನಪಾದವೇ ಹೊರತು, ಮಗನಿಗೆ ಏನು ಉತ್ತರಿಸಬೇಕು ಎಂಬುದು ಹೊಳೆಯಲೇ ಇಲ್ಲ.

ಆಗ ಶುದ್ಧೋದನನಿಗೆ ತನ್ನ ಅಪ್ಪ ಹೇಳಿದ್ದು ನೆನಪಾಯಿತು: ''ಅಂದು ಬುದ್ಧನ ಅಪ್ಪ ಮರೆಮಾಚಿದ್ದಕ್ಕಿಂತ ಹೆಚ್ಚಿನ ಸತ್ಯಗಳನ್ನೇ ಮಗನಿಗೆ ಅಡಗಿಸಿಡುತ್ತಿದ್ದೀಯಲ್ಲಾ? ಲೋಕದ ಸಣ್ಣ ಸಂಕಟವನ್ನೂ ಪರಿಚಯಿಸದೆ, ಕೃತಕ ಅರಮನೆಯಲ್ಲಿ ಕೂಡಿಟ್ಟು ಬೆಳೆಸುತ್ತಿದ್ದೀಯಲ್ಲಾ... ಮಾನವ ಹೃದಯದ ಕರುಣೆಗೆ ಒಲವಿಗೆ ದನಿಯಾಗದಿದ್ದರೆ, ಆ ಒಲವಿಗೆ ಕನ್ನಡಿ ಹಿಡಿಯದಿದ್ದರೆ ಈ ನಾಲ್ಕು ದಿನದ ಬಾಳಿಗೇನು ಸೌಂದರ್ಯ?''.

ಅಪ್ಪನ ನೆರಳಿನಿಂದ ಹೊರಬಂದ ಸಿದ್ಧಾರ್ಥ ಮುದುಕನ ಬಳಿ ನಡೆದು, ತರಕಾರಿ ಬುಟ್ಟಿಯನ್ನು ಎತ್ತಲು ಕೈಜೋಡಿಸಿದ. ಇಷ್ಟು ದಿನ ಸ್ಯಾನಿಟೈಸರ್‌ನಿಂದಲೇ ತೊಳೆದಿದ್ದ ಮೃದುವಾದ ಕೈಗಳಿಗೆ ಮೊದಲ ಬಾರಿಗೆ ಕೆಸರು ಮೆತ್ತಿತು. ಮಣ್ಣಾದ ಅವನ ಕೈಗಳು ಈಗ ಹೆಚ್ಚು ಸುಂದರವಾಗಿ ಕಂಡವು ಶುದ್ಧೋದನನಿಗೆ. ''ಮಗನೇ ನೀನು ಐಎಎಸ್ ಆಫೀಸರ್ ಆಗು, ಮುಂದೆ ಡಾಕ್ಟರ್ ಆಗು, ಮೇರು ನಾಯಕನಾಗು...,'' ಎಂದೆಷ್ಟೇ ಮಕ್ಕಳಿಗೆ ಒತ್ತಡ ಹೇರಿದರೂ, ಅವು ನಿತ್ಯದ ಸಂಕಟಗಳನ್ನು ಅನುಭವಿಸದೆ, ಬಾಳಿನ ಏರಿಳಿತಗಳನ್ನು ನೋಡದೆ ಹೋದರೆ, ಮುಂದೆ ಎಷ್ಟೇ ದೊಡ್ಡ ಆಫೀಸರಾದರೂ ಈ ಸಮಾಜಕ್ಕೇನು ಪ್ರಯೋಜನ?

ಬುದ್ಧನಾಗುವುದೆಂದರೆ ಮಧ್ಯರಾತ್ರಿ ಮನೆಬಿಟ್ಟು ಓಡುವುದಲ್ಲ; ಮೊಬೈಲುಗಳಿಂದ ಹೊರಬಂದು ಜಗವ ಕಾಣುವುದಷ್ಟೇ! ನಮ್ಮ- ನಿಮ್ಮ ಮನೆಯೊಳಗಿನ ಸಿದ್ಧಾರ್ಥ ಇದಕ್ಕಾಗಿ ಕಾಯುತ್ತಿರುವನೇ? ■

ವುಡ್ ವೈಡ್ ವೆಬ್ (WWW)! ಇದು ಸಸ್ಯಗಳ ನಡುವಿನ ಅಂತರ್ಜಾಲ ಕತೆ



ಮನೋ-ಗಮ
ಡಾ. ಕೆ.ಎನ್. ಗಣೇಶಯ್ಯ
editor@vijaykarnataka.com

ಆ ನಟ ಕಣ್ಣಲ್ಲಿಯೇ ಮಾತನಾಡಬಲ್ಲ; ಆತನಿಗೆ ಮಾತು ಬೇಕಿಂದಿಲ್ಲ, ಮಾತೇ ಇಲ್ಲದೆ ಕಥೆ ಹೇಳುವ ಅದ್ಭುತ ಚಲನಚಿತ್ರ 'ಪುಷ್ಪಕ ವಿಮಾನ'.

ಇಂಥ ಪ್ರಶಂಸನಾ ಮಾತುಗಳಲ್ಲಿ, ಅಡಗಿರುವ ಒಂದು ಪ್ರಮುಖ ಸೂಚನೆ ಎಂದರೆ ಭಾಷೆ ಮತ್ತು ಅದನ್ನು ಶಬ್ದರೂಪಕ್ಕೆ ತರುವ ಬಾಯಿ ಇಲ್ಲದಿದ್ದರೆ ನಮ್ಮ ಸಂವಹನ ಸಾಧ್ಯವಿಲ್ಲ; ಬಾಯಿ ಇಲ್ಲದೆ 'ಮಾತನಾಡು'ವುದು ಅತ್ಯಂತ ಕ್ಲಿಷ್ಟವಾದ ಕ್ರಿಯೆ ಎಂದು. ಹಾಗಾಗಿ, ಶಬ್ದವನ್ನು ಹೊಮ್ಮಿಸುವ ಧ್ವನಿಪೆಟ್ಟಿಗೆ ಇರುವ ಪ್ರಾಣಿಗಳು ಮಾತ್ರವೇ ಮಾತನಾಡಬಲ್ಲವು, ಸಂವಹಿಸಬಲ್ಲವು ಎನ್ನುವುದು ಸಾಮಾನ್ಯ ನಂಬಿಕೆ. ವಿಪರ್ಯಾಸವೆಂದರೆ, ಮೇಲಿನ ಅದೇ ಪ್ರಶಂಸನಾ ನುಡಿಗಳಲ್ಲಿ, ಮಾತನಾಡಲು ಬಾಯಿಯೇ ಬೇಕೆಂದಿಲ್ಲ ಎಂಬ ಪರೋಕ್ಷ ಸೂಚನೆಯೂ ಅಡಗಿದೆ.

ಶಬ್ದ ಮತ್ತು ಭಾಷೆಗಳ ಹೊರತಾಗಿಯೂ, ಅವನ್ನು ಹೊಮ್ಮಿಸುವ ಧ್ವನಿಪೆಟ್ಟಿಗೆ ಇಲ್ಲದೆಯೂ ಸಂವಹನ ಸಾಧ್ಯ ಎನ್ನುವುದನ್ನು ಬಹಳಷ್ಟು ಜೀವಿಗಳು ಕೋಟ್ಯಂತರ ವರ್ಷಗಳ ಹಿಂದೆಯೇ ಕಂಡುಕೊಂಡಿವೆ. ವಿಶೇಷವಾಗಿ, ಪಂಚೇಂದ್ರಿಯಗಳಿಂದ ಮುಕ್ತವಾದ ಸಸ್ಯಗಳು ಅವಶ್ಯಕತೆ ಇದ್ದಲ್ಲಿ ಕೂಗಬಲ್ಲವು, ಕೂಗಿ ಎಚ್ಚರಿಸಬಲ್ಲವು ಮತ್ತು ತಮ್ಮ ಸುದ್ದಿಯನ್ನು 'ಟೆಲಿಗ್ರಾಫ್' ಮಾದರಿಯಲ್ಲಿ ಕಿ.ಮೀ.ಗಳಷ್ಟು ದೂರದವರೆಗೆ ತಲುಪಿಸಬಲ್ಲವು ಎಂದು ತೋರಿಸಿಕೊಟ್ಟಿವೆ. ಸಸ್ಯಗಳ ಈ ಸಂವಹನಕ್ರಿಯೆಯನ್ನು ಹತ್ತಾರು ವಿಧದಲ್ಲಿ ಕಾಣಬಹುದಾದರೂ, ಅವೆಲ್ಲವೂ ಮೂರು ಹಂತಗಳಲ್ಲಿ ವ್ಯಕ್ತವಾಗುತ್ತವೆ.

1. ಸಮಸ್ಯೆಗಳ ಆಂತರಿಕ ಸಂವಹನ: ಭೂಮಿಯ ಒಳಗೆ ಬೆಳೆದು ಕವಲೊಡೆಯುತ್ತ, ನೀರು ಮತ್ತು ಪೋಷಕಾಂಶಗಳಿಗೆ ಸದಾ ಹುಡುಕಾಡುತ್ತಲೇ ಇರುವ ಸಸ್ಯದ ಬೇರುಗಳು ತಮ್ಮ ಸುತ್ತಲ ಮಣ್ಣಿನಲ್ಲಿ ನೀರಿನ ಅಂಶ ಕನಿಷ್ಠ ಮಟ್ಟದಿಂದ ಕಡಿಮೆಯಾದ ತಕ್ಷಣವೇ, ಆ ಸುದ್ದಿಯನ್ನು ವಿದ್ಯುತ್ ಮಿಡಿತಗಳ ಮೂಲಕ ಮಿಂಚಿನ ವೇಗದಲ್ಲಿ ಭೂಮಿಯ ಮೇಲಿರುವ ತನ್ನ ಎಲೆಗಳಿಗೆ ರವಾನಿಸಿ ಎಚ್ಚರಿಸುತ್ತದೆ. ತಕ್ಷಣವೇ ಎಚ್ಚರಗೊಂಡ ಎಲೆಗಳು, ತಮ್ಮಲ್ಲಿ ಸಾಕಷ್ಟು ನೀರಿನ ಅಂಶ ಇದ್ದರೂ ಮುಂದೆ ಒದಗಬಹುದಾದ ನೀರಿನ ಅಭಾವಕ್ಕೆ ತುತ್ತಾಗದಿರುವಂತೆ ತಮ್ಮ ಪತ್ರರಂಧ್ರಗಳನ್ನು ತತ್‌ಕ್ಷಣದಲ್ಲಿ ಮುಚ್ಚಿಕೊಳ್ಳುತ್ತವೆ. ಆ ಮೂಲಕ ಆ ಪತ್ರರಂಧ್ರಗಳ ಮೂಲಕವಾಗಿ ಆವಿಯ ರೂಪದಲ್ಲಿ ಹೊರಹೋಗುತ್ತಿದ್ದ ನೀರನ್ನು ತಡೆಹಿಡಿದು ಒಣಗದಂತೆ ಎಲೆಗಳು ತಮ್ಮನ್ನು ತಾವೇ ಕಾಪಾಡಿಕೊಳ್ಳುತ್ತವೆ. ಪರಿಣಾಮವಾಗಿ, ಒದಗಬಹುದಾದ ಸಮಸ್ಯೆಯಿಂದ ಇಡೀ ಸಸ್ಯ ರಕ್ಷಣೆ ಪಡೆಯುತ್ತದೆ. ಬೇರುಗಳ ಮತ್ತು ಎಲೆಗಳ ನಡುವಿನ ಈ ಸಂವಹನ ಕ್ರಿಯೆ ಕೆಲವು ಹಾರ್ಮೋನುಗಳಿಂದಲೂ ಸಾಧ್ಯವಿದೆ. ಅದೇ ರೀತಿಯಲ್ಲಿ ಎಲೆಗಳೂ ತಮಗೆ ಅವಶ್ಯಕವಿರುವ ಪೋಷಕಾಂಶದ ಬಗ್ಗೆ ಬೇರುಗಳಿಗೆ ಸುದ್ದಿ



ಕಳುಹಿಸಿ ಅವನ್ನು ಪಡೆಯುತ್ತವೆ. ಹೀಗೆ ಆವಶ್ಯಕತೆಗೆ ತಕ್ಕಂತೆ ಸೂಕ್ತ ಮಾಧ್ಯಮದ ಮೂಲಕ ಎಚ್ಚರಿಕೆಯ ಸೂಚನೆಗಳನ್ನು ರವಾನಿಸುವ, ಆವಶ್ಯಕತೆಗಳನ್ನು ನೀಗಿಸಿಕೊಳ್ಳುವ ಸಂವಹನ ಕ್ರಿಯೆ ಬೇರುಗಳು ಮತ್ತು ಎಲೆಗಳ ನಡುವೆ ಸದಾ ನಡೆಯುತ್ತಲೇ ಇರುತ್ತದೆ.

ಇಂಥ ಆಂತರಿಕ ಸಂವಹನವು ಒಂದೇ ಸಸ್ಯದ ಎಲೆಗಳ ನಡುವೆಯೂ ನಡೆಯುತ್ತದೆ. ಸಸ್ಯದ ಯಾವುದೇ ಎಲೆಯ ಮೇಲೆ ಭಕ್ಷಕ ಕೀಟ ದಾಳಿಮಾಡಿ ತಿನ್ನತೊಡಗುತ್ತಿದ್ದಂತೆ, ಆ ಎಲೆಯು ತನ್ನೊಳಗೆ ಕೀಟ-ವಿರೋಧಕ ರಾಸಾಯನಿಕಗಳನ್ನು ಸೃಜಿಸುತ್ತದೆ. ಇದರಿಂದಾಗಿ ಕೀಟಕ್ಕೆ ಎಲೆಯು 'ಕಹಿ'ಯಾಗಿ ತಿನ್ನಲಾಗದೆ ತೊರೆದು ಹೋಗುತ್ತದೆ. ಅದೇ ಸಮಯದಲ್ಲಿ ಆ ಎಲೆಯು ತಾನು ಎದುರಿಸಿದ ಕೀಟ ದಾಳಿಯ ಬಗ್ಗೆ ಇನ್ನಿತರ ಎಲೆಗಳನ್ನೂ ಆಂತರಿಕ ಸೂಚನೆಗಳ ಮೂಲಕ ಎಚ್ಚರಿಸಿ, ಅವು ಕೂಡ ಕೀಟ- ವಿರೋಧಕ ಅಂಶಗಳನ್ನು ಸೃಜಿಸುವಂತೆ ಪ್ರೇರೇಪಿಸುತ್ತದೆ. ಇಡೀ ಸಸ್ಯ ಕೀಟದಿಂದ ರಕ್ಷಣೆ ಪಡೆಯತ್ತದೆ.

ಆದರೆ, ಇದೆಲ್ಲವನ್ನೂ 'ಸಂವಹನ' ಎನ್ನಲು ಆಗದು ಎಂಬ ದೂರು ಸಾಧ್ಯ. ಕಾರಣ, ಈ ವಿಚಾರ ವಿನಿಮಯವು ಒಂದೇ ಸಸ್ಯದೊಳಗೆ ನಡೆಯುವ ಆಂತರಿಕ ಕ್ರಿಯೆ- ಹಸಿದಾಗ ನಮ್ಮ ಹೊಟ್ಟೆ ಆಹಾರ ಬಯಸುವಂತೆ; ನವೆಯಾದ ಕಡೆ ನಾವು ಕೆರೆದುಕೊಳ್ಳುವಂತೆ. ಸಂವಹನ ಎಂದರೆ ಎರಡು ವ್ಯಕ್ತಿಗಳ ನಡೆಯುವ ಮಾತುಕತೆ. ಹಾಗಾಗಿ, ಆ ಆಂತರಿಕ ಕ್ರಿಯೆಯನ್ನು 'ಮಾತುಕತೆ' ಎನ್ನಲಾಗದು ಎಂದು ದೂರುವವರಿಗೆ ಸಸ್ಯಗಳು ಎರಡನೇ ಹಂತದಲ್ಲಿ ಉತ್ತರ ನೀಡುತ್ತವೆ.

2. ಸಸ್ಯಗಳ ನಡುವೆ ಎಚ್ಚರಿಕೆಯ ಕೂಗು: ಕೀಟ ದಾಳಿಗೆ ಒಳಗಾದ ಕೆಲವು ಸಸ್ಯಗಳು ತಮ್ಮದೇ ಪ್ರಭೇದದ ಇತರೆ ಸಸ್ಯಗಳನ್ನು ಎಚ್ಚರಿಸಲೆಂದು ತಾವು ಎದುರಿಸಿದ ಅಪಾಯದ ಬಗ್ಗೆ ಕೂಗಿ ಹೇಳುತ್ತವೆ. ಆದರೆ, ಆ ಎಚ್ಚರಿಕೆಯ ಕೂಗು ಶಬ್ದತರಂಗಗಳಲ್ಲಿ ಸಾಗುವುದಿಲ್ಲ, ಬದಲಿಗೆ, ದಾಳಿಗೆ ತುತ್ತಾದ ಸಸ್ಯಗಳು ಆವಿಯಾಗಬಲ್ಲ ವಿಶೇಷ ರಾಸಾಯನಿಕಗಳನ್ನು ತಯಾರಿಸಿ ಗಾಳಿಯಲ್ಲಿ ತೇಲಿಬಿಡುತ್ತವೆ. ಹಾಗೆ ತೇಲಿಬಂದ ರಾಸಾಯನಿಕವನ್ನು ಗ್ರಹಿಸಿದ ಇತರೆ ಸಸ್ಯಗಳು, ತಕ್ಷಣ ಎಚ್ಚರಗೊಂಡು ತಮ್ಮ ಎಲೆ ಮತ್ತು ಕಾಂಡಗಳಲ್ಲಿಯೂ, ಕೀಟ ವಿರೋಧಕಗಳನ್ನು ಉತ್ಪತ್ತಿ ಮಾಡುತ್ತವೆ. ಇದರಿಂದಾಗಿ ಕೀಟಗಳಿಗೆ ಆ ಪ್ರದೇಶದಲ್ಲಿನ ಆ ಪ್ರಭೇದದ ಎಲ್ಲ ಸಸ್ಯಗಳೂ ಕಹಿಯಾಗುವುದರಿಂದ ತಿನ್ನಲಾಗದೆ ತೊರೆಯುತ್ತವೆ.

ಹೀಗೆ ಬಾಯಿ ಇಲ್ಲದೆಯೇ ಕೂಗಿ ಹೇಳುವ ಕ್ರಮವನ್ನು ಸಸ್ಯಗಳು ಬೇರೊಂದು ರೀತಿಯಲ್ಲೂ ಅಳವಡಿಸಿಕೊಂಡಿವೆ. ಭಕ್ಷಕ ಕೀಟದ ದಾಳಿಗೆ ತುತ್ತಾದ ಸಸ್ಯವು ಆವಿಯಾಗಬಲ್ಲ ಕೆಲವು ವಿಶಿಷ್ಟ ರಾಸಾಯನಿಕಗಳನ್ನು ಹೊರಚೆಲ್ಲಿ, ಆ ಮೂಲಕ, ಭಕ್ಷಕ ಕೀಟಗಳನ್ನೇ ತಿನ್ನಬಲ್ಲ ಹಂತಕ- ಕೀಟಗಳನ್ನು ಅಥವಾ ಪರಾವಲಂಬಿಗಳನ್ನು ಆಕರ್ಷಿಸುತ್ತವೆ. ಹಾಗೆ ಆಕರ್ಷಿತ ಹಂತಕ ಕೀಟಗಳು ಸಸ್ಯಗಳ ಮೇಲೆ ದಾಳಿ ಮಾಡುವ ಕೀಟಗಳನ್ನು ಭಕ್ಷಿಸಿ ಸಸ್ಯಗಳನ್ನು ರಕ್ಷಿಸುತ್ತವೆ. ಇದೆಲ್ಲವೂ ಸಸ್ಯಗಳ ನಡುವೆ ನಡೆಯುವ ಸಂವಹನ; ಬಾಯಿ ಇಲ್ಲದೆಯೇ ನಡೆಯುವ 'ಮಾತುಕತೆ'.

ಅರಣ್ಯದಾದ್ಯಂತ ನಡೆಯುವ Wood-Wide-Web (WWW) ಸಂವಹನದ ಕತೆ ಇದು. ಆವಿಯಂತೆ ಗಾಳಿಯಲ್ಲಿ ತೇಲಿಬರುವ 'ಎಚ್ಚರಿಕೆ-ರಾಸಾಯನಿಕ'ಗಳ ಮೂಲಕವಷ್ಟೇ ಅಲ್ಲದೆ ಬೇರುಗಳ ಮೂಲಕವೂ ಸಂವಹನ ಕ್ರಿಯೆ ನಡೆಸಬಲ್ಲ ಅದ್ಭುತ ಜಾಲವನ್ನು ಸಸ್ಯಗಳು ಸೃಷ್ಟಿಸಿಕೊಂಡಿವೆ. ಕಾಡಿನ ಯಾವುದೋ ಅಂಚಿನಲ್ಲಿ ನೀರಿನ ಅಭಾವ ಅನುಭವಿಸಿದ ವೃಕ್ಷದ ಬೇರುಗಳು ಭೂಮಿಯೊಳಗೆ ತಮ್ಮ ಸಂಪರ್ಕಕ್ಕೆ ಸಿಗುವ ಎಲ್ಲಾ ವೃಕ್ಷಗಳ ಬೇರುಗಳಿಗೆ ವಿದ್ಯುತ್ ಕಾಂತೀಯ ಸೂಚನೆಗಳ ಮೂಲಕ ಎಚ್ಚರಿಕೆಯನ್ನು ರವಾನಿಸುತ್ತವೆ. ತಕ್ಷಣವೇ ಆ ಎಲ್ಲ ಮರಗಳ ಬೇರುಗಳೂ ಎಚ್ಚೆತ್ತು ತಾವೂ ವಿದ್ಯುತ್‌ಕಾಂತೀಯ ತರಂಗಗಳ ಮೂಲಕ ತಮ್ಮ ಸಂಪರ್ಕದಲ್ಲಿರುವ ಇತರೆ ವೃಕ್ಷಗಳ ಬೇರುಗಳಿಗೆ ಎಚ್ಚರಿಕೆಯ ಸುದ್ದಿಯನ್ನು ರವಾನಿಸುತ್ತವೆ. ಈ 'ಟೆಲಿಗ್ರಾಫ್' ಸುದ್ದಿ, ಬೇರುಗಳ ಜಾಲದ ಮೂಲಕ ಕ್ರಮೇಣ ಇಡೀ ವನಪ್ರದೇಶದಲ್ಲಿ ಹರಡಿ ಎಲ್ಲ ವೃಕ್ಷಗಳನ್ನೂ ಎಚ್ಚರಿಸುತ್ತದೆ. ಸುದ್ದಿ ಕಾಡಿನಲ್ಲೆಲ್ಲ ಅಂತರ್ಜಾಲದಂತೆ ಹರಡುತ್ತದೆ. ಇಡೀ ಕಾಡು ಎಚ್ಚರಗೊಳ್ಳುತ್ತದೆ- ನಮ್ಮ Internet ಮತ್ತು ಸಾಮಾಜಿಕ ಜಾಲತಾಣಗಳಂತೆ. ಇದನ್ನು ವಿಜ್ಞಾನಿಗಳು Wood Wide Web (WWW) ಎಂದು ಕರೆಯುತ್ತಾರೆ. ಮಾನವ World Wide Web (WWW) ಆವಿಷ್ಕರಿಸಿ, ಇಂಟರ್ನೆಟ್ ಲೋಕವನ್ನು ಕಂಡುಕೊಳ್ಳುವ ಮುನ್ನವೇ, ಕೋಟ್ಯಂತರ ವರ್ಷಗಳ ಹಿಂದೆಯೇ ಸಸ್ಯಗಳು ತಮ್ಮದೇ WWW ಅನ್ನು ಅಳವಡಿಸಿಕೊಂಡಿವೆ ಎಂದರೆ ಅತಿಶಯೋಕ್ತಿಯಲ್ಲ. ■

(**ಲೇಖಕರು:** ವೈಜ್ಞಾನಿಕ ಕಾದಂಬರಿಕಾರರು)

ಜಪಾನ್ ಅನಿಮೆಯ ಫ್ಯಾಂಟಸಿ ಜಗತ್ತು

ಟೋಕಿಯೊ ಮೇಲ್
ಶ್ರೀಕಲಾ ಬೋಳ್ಯಾಜೆ
editor@vijaykarnataka.com



ಸಿನಿಮಾ ತಾರೆಯರು, ಕ್ರಿಕೆಟಿಗರು, ರಾಜಕಾರಣಿಗಳು, ಫೇಮಸ್ ಮ್ಯೂಸಿಕ್ ಬ್ಯಾಂಡ್‌ಗಳು... ಹೀಗೆ ಭಾರತೀಯರ ಹೀರೋಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವರೆಲ್ಲರನ್ನೂ ನಾವು ಹೃದಯದಲ್ಲಿಟ್ಟುಕೊಂಡು ದೇವರಂತೆ ಪೂಜಿಸಿಕೊಂಡು ಬರುತ್ತೇವೆ. ಅವರಿಗಾಗಿ ದಾರಿಯುದ್ದಕ್ಕೂ ಕಟೌಟ್, ಪೋಸ್ಟರ್‌ಗಳನ್ನು ಹಾಕುತ್ತೇವೆ. ಹೀಗೆ ನೀವು ಜಪಾನಿನ ಬೀದಿ ಬೀದಿಗಳಲ್ಲಿ ನಡೆಯುವಾಗ, ರೈಲು ನಿಲ್ದಾಣಗಳ ಜಾಹೀರಾತುಗಳಲ್ಲಿ, ವಿಮಾನಗಳ ಮೇಲೂ ಕೆಲವೊಂದು ಮುಖಗಳು ಕಾಣಬಹುದು. ಆದರೆ, ಅವು ರಾಜಕಾರಣಿಗಳದ್ದಲ್ಲ, ಸಿನಿತಾರೆಯರದ್ದಲ್ಲ, ಯಾವುದೋ ಕ್ರೀಡಾಪಟುಗಳದ್ದಂತೂ ಅಲ್ಲವೇ ಅಲ್ಲ, ಬದಲಿಗೆ ಅನಿಮೇಷನ್ ಲೋಕದ ಅಮರ ಪಾತ್ರಗಳದ್ದು!

ಒಂದು ಕಾಲದಲ್ಲಿ ಮನರಂಜನೆಗಾಗಿ ಹುಟ್ಟಿದ ಈ ಕಾಲ್ಪನಿಕ ಪಾತ್ರಗಳು ಇಂದು ಜಪಾನಿಯರ ಜನಮಾನಸದಲ್ಲಿ ಚಿರಂಜೀವಿಗಳಾಗಿವೆ. 'ಅನಿಮೆ' ಇಂದು ಜಪಾನಿಗರ ಸಂಸ್ಕೃತಿ ಮತ್ತು ಜಾಗತಿಕ ಗುರುತಿನ ಭಾಗವಾಗಿದೆ. ಡೋರೆಮಾನ್‌ನ ಸ್ನೇಹ, ಅನ್ಪನ್ಮಾನ್‌ನ ಅನುಕಂಪ, ಪಿಕಾಚುವಿನ ಪ್ರೀತಿ, ತೊತೊರೊನ ಮಮತೆ ಇವೆಲ್ಲವೂ ಅನಿಮೆಯಷ್ಟೇ ಅಲ್ಲ, ಎಲ್ಲಾ ಪೀಳಿಗೆಯ ಜನರನ್ನು ಒಂದೇ ಭಾವದಲ್ಲಿ ಬಂಧಿಸುವ ದಾರಗಳಾಗಿವೆ. ಕೆಲವು ದಶಕಗಳಿಂದ ಜಪಾನ್ ಜಗತ್ತಿಗೆ ವಿಜ್ಞಾನ, ತಂತ್ರಜ್ಞಾನ, ಶಿಸ್ತಿನ ಜೀವನವನ್ನಷ್ಟೇ ಅಲ್ಲದೆ ಅನಿಮೇಷನ್‌ನ ಶಕ್ತಿಯನ್ನೂ ತೋರಿಸಿಕೊಟ್ಟಿದೆ.

ಪಶ್ಚಿಮ ದೇಶಗಳ ಅನಿಮೆ ಕಲೆಯಿಂದ ಪ್ರೇರಣೆ ಪಡೆದ ಜಪಾನ್, 1917ರಲ್ಲಿ ತನ್ನದೇ ಆದ ಅನಿಮೇಷನ್ ಲೋಕದ ಮೊದಲ ಹೆಜ್ಜೆಯನ್ನು ಇಟ್ಟಿತು. ಕೈಯಿಂದ ಬಿಡಿಸಿದ ಸರಳ ರೇಖಾಚಿತ್ರಗಳು ಮತ್ತು ಕಟೌಟ್ ತಂತ್ರಜ್ಞಾನದ ಮೂಲಕ ಮೂಡಿಬಂದ 'ನಮಕುರಾ ಗತನ' ಎಂಬ ಕಿರುಚಿತ್ರ, ಮುಂದಿನ ಅನಿಮೆ ಸಾಮ್ರಾಜ್ಯದ ಬೀಜವಾಗಿತ್ತು. ತಾಂತ್ರಿಕ ಮಿತಿಗಳು ಇದ್ದರೂ, ಜಪಾನಿನ ವಿಶಿಷ್ಟ ಕಥನ ಶೈಲಿ ಮತ್ತು ಕಲಾತ್ಮಕ ನಿರೂಪಣೆ ಈ ಕಿರುಚಿತ್ರವನ್ನು ವಿಶೇಷವಾಗಿಸಿತ್ತು. ಆದರೆ, ಜಪಾನೀಸ್ ಅನಿಮೇಷನ್‌ಗೆ ನಿಜವಾದ ಚೈತನ್ಯ ಸಿಕ್ಕಿದ್ದು ದ್ವಿತೀಯ ಮಹಾಯುದ್ಧದ ನಂತರ. ಯುದ್ಧದ ಗಾಯಗಳಿಂದ ಹೊರಬರುತ್ತಿದ್ದ ಜಪಾನಿಯರಿಗೆ ದೇಶದ ಪುನರ್‌ನಿರ್ಮಾಣದ ಜತೆಗೆ, ಹೊಸ ಕನಸುಗಳು ಮತ್ತು ಮನರಂಜನೆಯೂ ಬೇಕಾಗಿತ್ತು. ಇಂಥ ಸಂದರ್ಭದಲ್ಲಿ ದೂರದರ್ಶನದಲ್ಲಿ ಪ್ರಸಾರವಾದ 'ಆಸ್ಟ್ರೋ ಬಾಯ್' ಅನಿಮೆಯಲ್ಲಿ ಹೊಸ ಯುಗವನ್ನೇ ಆರಂಭಿಸಿತು. 'ಒಸಮು ತೇಝುಕ' ಅವರು ರಚಿಸಿದ ಈ ಅನಿಮೆ ಜಪಾನಿನ ಸಾಂಸ್ಕೃತಿಕ ಗುರುತನ್ನು ವಿಶ್ವಕ್ಕೆ ಪರಿಚಯಿಸಿತು. ಅದಕ್ಕಾಗಿಯೇ ಅವರನ್ನು ಇಂದಿಗೂ 'ಅನಿಮೆಯ ಪಿತಾಮಹ' ಎಂದು ಕರೆಯಲಾಗುತ್ತದೆ. ನಂತರ ಬಂದ 'ಡ್ರಾಗನ್ ಬಾಲ್', 'ಸ್ಪೇಸ್ ಬ್ಯಾಟಲ್‌ಶಿಪ್ ಯಮಾತೊ' ಮುಂತಾದ ಅನಿಮೆಗಳಲ್ಲಿನ ಸಾಹಸ, ವೈಜ್ಞಾನಿಕ ಕಲ್ಪನೆ ಜನರನ್ನು ಹೊಸ ಲೋಕಕ್ಕೆ ಕೊಂಡೊಯ್ದವು. ಅಷ್ಟೇ ಅಲ್ಲ, ಫ್ಯಾಂಟಸಿ ಮತ್ತು ಮನೋವೈಜ್ಞಾನಿಕ ಕಥೆಗಳಂಥ ಹೊಸ ಪ್ರಕಾರಗಳು ಹುಟ್ಟಿಕೊಂಡವು. ಕಾಲಕ್ರಮೇಣ 'ನರುತೋ', 'ಜುಜುತ್ಸು ಕೈಸೆನ್', 'ಒನ್ ಪೀಸ್', 'ಡೀಮನ್ ಸ್ಲೇಯರ್', 'ಅಟ್ಯಾಕ್ ಆನ್ ಟೈಟನ್' ಮುಂತಾದ ಅನಿಮೆಗಳು ಜಗತ್ತಿನ ಯುವಜನತೆಯ ಹೃದಯವನ್ನು ಗೆಲ್ಲತೊಡಗಿತು. ಅನಿಮೆ ಮನರಂಜನೆ ಮಾತ್ರವಲ್ಲ, ದೊಡ್ಡವರನ್ನೂ ಆಲೋಚನೆಗೆ ದೂಡುವ ಶಕ್ತಿಯುತ ಮಾಧ್ಯಮವೆಂಬುದು ಸಾಬೀತಾಯಿತು.

ಇದರ ನಡುವೆ 'ಸಜಾಯೆ ಸಾನ್' ಎಂಬ ದಾಖಲೆಯನ್ನು ನಿರ್ಮಿಸಿದ ಧಾರಾವಾಹಿಯ ಬಗ್ಗೆ ಹೇಳಲೇಬೇಕು. 1969ರಲ್ಲಿ ಆರಂಭವಾದ ಈ ಧಾರಾವಾಹಿ ಇಂದಿಗೂ ಜಪಾನಿನ ಟಿವಿಯಲ್ಲಿ ನಿರಂತರವಾಗಿ ಪ್ರಸಾರವಾಗುತ್ತಿದೆ. ಈ ಧಾರಾವಾಹಿಯನ್ನು ನೋಡದೆ ಜಪಾನಿಗರ ವೀಕೆಂಡ್ ಮುಗಿಯುವುದೇ ಇಲ್ಲ! ಈಗಾಗಲೇ 75 ಸಾವಿರಕ್ಕೂ ಹೆಚ್ಚು ಕಂತುಗಳನ್ನು ಪೂರೈಸಿರುವ ಈ ಧಾರಾವಾಹಿ ಮೂರು ತಲೆಮಾರಿನ ಕುಟುಂಬದ ದಿನನಿತ್ಯದ ಬದುಕು ಮತ್ತು ಮನಮುಟ್ಟುವ ಪ್ರಚಲಿತ ಘಟನೆಗಳನ್ನು ಸರಳವಾಗಿ ತಿಳಿಸುತ್ತದೆ.

ಅಂದಹಾಗೆ, 'ರಾಮಾಯಣ- ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ' ಅನಿಮೆ ಹುಟ್ಟಿದ್ದು ಕೂಡ ಜಪಾನಿನಲ್ಲೇ. 'ಯುಗೊ ಸಕೊ' ಅವರು ರಾಮಾಯಣದ ಕತೆಯನ್ನು ಕೇಳಿ ಪ್ರಭಾವಿತರಾಗಿದ್ದು ಮಾತ್ರವಲ್ಲದೆ, ಭಾರತದ ಈ ಪುರಾಣ ಕತೆಯನ್ನು ವಿಶ್ವಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಅದನ್ನು ಅನಿಮೆ ರೂಪದಲ್ಲಿ ನಿರ್ಮಿಸಿ ಯಶಸ್ವಿಯೂ ಆಗಿದ್ದು ಇತಿಹಾಸ.

ಅನಿಮೇಷನ್ ಹುಟ್ಟು ಜಪಾನಿನಲ್ಲಿ ಆಗಿಲ್ಲ, ಆದರೆ ಇಂದು ಜಪಾನ್‌ನಲ್ಲಿ ನಿರ್ಮಾಣವಾಗುತ್ತಿರುವ ಅನಿಮೆ ಕೋಟ್ಯಂತರ ಅಭಿಮಾನಿಗಳ ಕಲ್ಪನಾ ಪ್ರಪಂಚವನ್ನು ಬೆಳಗುತ್ತದೆ. ಗಂಭೀರತೆ ಹಾಗೂ ಕಥನ ಶೈಲಿಯ ಮೂಲಕ ಗಮನ ಸೆಳೆಯುವ ಇಲ್ಲಿನ ಅನಿಮೆಯಲ್ಲಿ ಕಾಣುವ ಸ್ಥಳಗಳಿಗೂ ವಾಸ್ತವದಲ್ಲಿ ಕಾಣಿಸುವ ಸ್ಥಳಗಳಿಗೂ ಅಷ್ಟೇನೂ ವ್ಯತ್ಯಾಸವಿಲ್ಲ, ರಸ್ತೆ, ರೈಲು ನಿಲ್ದಾಣಗಳು, ದೇವಾಲಯಗಳು, ಟೋಕಿಯೊ, ಶಿಬುಯಾ, ಶಿಂಜಿಕೋದಂಥ ಮಹಾನಗರಗಳನ್ನು ಅನಿಮೆಯಲ್ಲಿ ಯಥಾವತ್ತಾಗಿ ಭಟ್ಟಿ ಇಳಿಸಲಾಗುತ್ತದೆ. ಇದು ಜಪಾನಿಯರ ಸೂಕ್ಷ್ಮ ಕಲಾತ್ಮಕತೆ ಮತ್ತು ತಾಂತ್ರಿಕ ನಿಪುಣತೆಗೆ ಜೀವಂತ ಉದಾಹರಣೆ.

ಬಣ್ಣಗಳ ನಡುವಿನ ಚತುರತೆ, ಪ್ರಕೃತಿಯ ಸೊಬಗು, ಪಾತ್ರಗಳ ಮುಖಭಾವನೆಗಳು ಎಲ್ಲವೂ ಇಲ್ಲಿ ಸಹಜವಾಗಿಯೇ ಕಾಣುತ್ತದೆ. ಹಾಗೆಯೇ, ಜಪಾನ್‌ನ ಆರ್ಥಿಕತೆಯಲ್ಲಿಯೂ ಅನಿಮೇಷನ್ ಮಹತ್ವದ ಪಾತ್ರ ವಹಿಸಿದೆ. ಸಿನಿಮಾ, ಟಿವಿ ಸರಣಿ, ಗೇಮ್ಸ್, ಸಂಗೀತ, ಆಟಿಕೆಗಳು ಮತ್ತು ಪ್ರವಾಸೋದ್ಯಮ ಎಲ್ಲವೂ ಸೇರಿ ಅನಿಮೆ ಒಂದು ಬೃಹತ್ ಉದ್ಯಮವಾಗಿ ಬೆಳೆದಿದೆ. ಟೋಕಿಯೋದಲ್ಲಿನ 'ಅಕಿಹಬರ' ಪ್ರದೇಶವನ್ನು ಅನಿಮೆ ಅಭಿಮಾನಿಗಳ ಸ್ವರ್ಗವೆಂದು ಕರೆಯಲಾಗುತ್ತದೆ. ಇಲ್ಲಿ ಅನಿಮೆ ಅಭಿಮಾನಿಗಳು ತಮ್ಮ ಪ್ರಿಯ ಪಾತ್ರಗಳಿಂದ ಪ್ರೇರಣೆ ಪಡೆದು ವಿಶೇಷ ವೇಷಭೂಷಣಗಳನ್ನು ಧರಿಸಿ ಸಂಚರಿಸುವ ದೃಶ್ಯ ಸರ್ವೇಸಾಮಾನ್ಯ. ಇಂದು ಅನಿಮೆ ಪ್ರಭಾವದಿಂದ ಅನೇಕರು ಜಪಾನೀಸ್ ಭಾಷೆ ಕಲಿಯುವತ್ತ ಮುಖ ಮಾಡಿದ್ದಾರೆ. ಹಾಗೆಯೇ, ಇಲ್ಲಿನ ಸಂಸ್ಕೃತಿ, ಆಚಾರವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ.

ಕಲೆ ಎಂಬುದು ಭಾಷೆ, ದೇಶ ಮತ್ತು ಗಡಿಗಳ ಮಿತಿಯನ್ನು ಮೀರಿ ಜನರನ್ನು ಒಂದಾಗಿಸುವ ಶಕ್ತಿ ಎಂಬುದನ್ನು ಜಪಾನೀಸ್ ಅನಿಮೇಷನ್ ತಿಳಿಸಿಕೊಡುತ್ತಿದೆ. ಕೆಲವರಿಗೆ ಇದು ಪ್ರೇರಣೆ, ಕೆಲವರಿಗೆ ಭಾವನೆ, ಇನ್ನೂ ಕೆಲವರಿಗೆ ಇದುವೇ ಜೀವನ. ಅನಿಮೇಷನ್ ಇಂದು ಕೇವಲ ಚಿತ್ರಗಳ ಸರಣಿಯಷ್ಟೇ ಅಲ್ಲ, ಅದು ಕಲ್ಪನೆಗಳಿಗೆ ರೆಕ್ಕೆ ನೀಡುವ, ಭಾವನೆಗಳಿಗೆ ಜೀವ ತುಂಬುವ ಮತ್ತು ಜನರನ್ನು ಒಂದೇ ಕನಸಿನ ಲೋಕದಲ್ಲಿ ಒಂದಾಗಿಸುವ ಅದ್ಭುತ ಜಗತ್ತು. ■

(**ಲೇಖಕಿ:** ಹವ್ಯಾಸಿ ಬರಹಗಾರರು, ಟೋಕಿಯೊ ನಿವಾಸಿ)

ಕಣ್ಣಲ್ಲೇ ಮಾತಾಡೋ ತ್ರಿಷಾ ಈಗ ಕಣ್ಮಣಿ

ವ್ಯಕ್ತಿಗನ್ನಡಿ
ನಾಗರಾಜ್ ನವೀಮನೆ
editor@vijaykarnataka.com

ಅದು 1999. 'ಜೋಡಿ' ಎಂಬ ತಮಿಳು ಸಿನಿಮಾ ಬಿಡುಗಡೆಯಾಗಿತ್ತು. ನಾಯಕಿ ಸಿಮ್ರಾನ್. ಮಾಡೆಲಿಂಗ್ ಬಗ್ಗೆ ತುಂಬು ಕನಸು ಕಾಣುತ್ತಿದ್ದ ಜಿಂಕೆ ಕಂಗಳ ಹುಡುಗಿಯೊಬ್ಬಳು ಆ ಚಿತ್ರದಲ್ಲಿ ಸಿಮ್ರಾನ್ ಗೆಳತಿ ಪಾತ್ರ ಮಾಡಿದ್ದಳು. ಹೀಗೆ ಸಣ್ಣ ಪೋಷಕ ಪಾತ್ರದಿಂದ ಸಿನಿಮಾರಂಗಕ್ಕೆ ಕಾಲಿಟ್ಟ ಆ ನಾಯಕಿ ಈಗ ದಕ್ಷಿಣ ಭಾರತದಲ್ಲೇ ಅತಿಹೆಚ್ಚು ಸಂಭಾವನೆ ಪಡೆಯುವ ಟಾಪ್ ನಟಿಯರಲ್ಲಿ ಒಬ್ಬರು. ಅಷ್ಟೇ ಅಲ್ಲ, ಹಲವು ಬ್ರ್ಯಾಂಡ್‌ಗಳಿಗೆ ಅಂಬಾಸಡರ್. ಅಲ್ಲದೆ, ದಕ್ಷಿಣ ರಾಜಕೀಯ ವಲಯದಲ್ಲಿ ಈಗ ಗಾಸಿಪ್‌ಗೆ ಒಳಗಾಗಿರುವ ಮಿಂಚು.

ಅವರು ತ್ರಿಷಾ ಕೃಷ್ಣನ್. ನೆರೆಯ ರಾಜ್ಯ ತಮಿಳುನಾಡಿನ ರಾಜಕೀಯ ಸದ್ಯ ಇಡೀ ದೇಶದಲ್ಲೇ ಸದ್ದು ಮಾಡುತ್ತಿದೆ. ಅಲ್ಲೀಗ ಟ್ರೆಂಡಿಂಗ್‌ನಲ್ಲಿರುವ ಎರಡು ಹೆಸರೆಂದರೆ ಒಂದು ದಳಪತಿ ವಿಜಯ್. ಮತ್ತೊಂದು ನಟಿ ತ್ರಿಷಾ. ಸಾಮಾನ್ಯವಾಗಿ ನಾಯಕನಟನಿಗೆ ಹೋಲಿಸಿದರೆ ನಾಯಕಿಯರ ಸಿನಿಮಾ ಪಯಣ ಸುದೀರ್ಘ ಇರುವುದಿಲ್ಲ, ನಾಯಕಿಯಾಗಿ 8ರಿಂದ 10 ವರ್ಷ ಇದ್ದರೆ ಹೆಚ್ಚು, ಸ್ವಲ್ಪ ವರ್ಷ ನಾಯಕಿಯಾಗಿ ನಟಿಸಿ ಕ್ರಮೇಣ ಅಕ್ಕ, ಅತ್ತೆ, ಅಮ್ಮನ ಪಾತ್ರಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಆದರೆ, ತ್ರಿಷಾ ಈ ವಿಷಯದಲ್ಲಿ ಅಪವಾದ. ಸಿನಿಮಾರಂಗಕ್ಕೆ ಬಂದು 25 ವರ್ಷವಾದರೂ ಇಂದಿಗೂ ಆಕೆ ನಾಯಕಿಯಾಗಿಯೇ ಮಿಂಚುತ್ತಿದ್ದಾರೆ. ವಯಸ್ಸು 43 ವರ್ಷವಾದರೂ ಸಹಜ ಸೌಂದರ್ಯ, ಫಿಟ್ನೆಸ್, ನೈಜ ಅಭಿನಯ ಹಾಗೂ ವ್ಯಕ್ತಿತ್ವದಿಂದ ತ್ರಿಷಾ ಜನಮಾನಸದಲ್ಲಿ ಗಟ್ಟಿಯಾಗಿ ಉಳಿದುಕೊಂಡಿದ್ದಾರೆ.

ಕೃಷ್ಣನ್ ಮತ್ತು ಉಮಾ ದಂಪತಿಯ ಪುತ್ರಿಯಾಗಿ ತ್ರಿಷಾ ಚೆನ್ನೈನಲ್ಲಿ ಜನಿಸಿದರು. ಅಲ್ಲಿಯೇ ಶಾಲಾ ಮತ್ತು ಕಾಲೇಜು ಶಿಕ್ಷಣ ಪೂರ್ಣಗೊಳಿಸಿದರು. ಬಿಬಿಎ ಓದುವಾಗಲೇ ತ್ರಿಷಾಗೆ ಮಾಡೆಲಿಂಗ್ ಹಾಗೂ ನಟನೆ ಬಗ್ಗೆ ಆಸಕ್ತಿ ಹೆಚ್ಚಿತ್ತು. ಸೌಂದರ್ಯ ಸ್ಪರ್ಧೆಗಳಲ್ಲೂ ಮುಂಚೂಣಿ. 1999ರಲ್ಲಿ ಮಿಸ್ ಮದ್ರಾಸ್, ಮಿಸ್ ಚೆನ್ನೈ ಪಟ್ಟ ದಕ್ಕಿಸಿಕೊಂಡರು. 2001ರಲ್ಲಿ ಮಿಸ್ ಇಂಡಿಯಾ ಸ್ಪರ್ಧೆಯಲ್ಲೂ ಪಾಲ್ಗೊಂಡಿದ್ದರು. 2002ರಲ್ಲಿ ಸೂರ್ಯ ಅಭಿನಯದ 'ಮೌನಂ ಪೇಸಿಯಾದೆ' ಎಂಬ ತಮಿಳು ಚಿತ್ರದಲ್ಲಿ ಪೂರ್ಣಪ್ರಮಾಣದ ನಾಯಕಿಯಾಗಿ ತ್ರಿಷಾ ನಟಿಸಿದ್ದರು. ಅಲ್ಲಿಂದ ಹಿಂದಿರುಗಿ ನೋಡಲೇ ಇಲ್ಲ.

ಚಿರಂಜೀವಿ, ಕಮಲ್ ಹಾಸನ್, ವಿಕ್ರಮ್, ಸೂರ್ಯ, ಅಜಿತ್, ವಿಜಯ್, ಸಿಂಬು, ಸಿದ್ಧಾರ್ಥ, ಮಹೇಶ್ ಬಾಬು, ನಿತಿನ್, ಪವನ್ ಕಲ್ಯಾಣ್, ವೆಂಕಟೇಶ್, ನಾಗಾರ್ಜುನ ಸೇರಿದಂತೆ ದಕ್ಷಿಣ ಭಾರತೀಯ ಚಿತ್ರರಂಗದ ಬಹುತೇಕ ಎಲ್ಲಾ ಪ್ರಮುಖ ನಟರೊಂದಿಗೆ ಅಭಿನಯಿಸಿದರು. ತೆಲುಗಿನಲ್ಲಿ ತ್ರಿಷಾಗೆ ದೊಡ್ಡ ಬ್ರೇಕ್ ಕೊಟ್ಟ ಸಿನಿಮಾ 'ವರ್ಷಂ'. ಪ್ರಭಾಸ್ ಈ ಸಿನಿಮಾದ ಹೀರೊ. 2004ರಲ್ಲಿ ತೆರೆಕಂಡ ಈ ಸಿನಿಮಾ ಆ ವರ್ಷ ಬ್ಲಾಕ್ ಬಾಸ್ಟರ್ ಹಿಟ್. ಈ ಚಿತ್ರದಲ್ಲಿ ಕಣ್ಣಲ್ಲಿ ಮಾತಾಡುವ ತ್ರಿಷಾ, ಮಳೆಯಲ್ಲಿನ ನೃತ್ಯ, ಆಕೆಯ ಸ್ನಿಗ್ಧ ಸೌಂದರ್ಯ ಯುವಕರ ಹೃದಯ ಬಡಿತವನ್ನು ಹೆಚ್ಚಿಸಿತ್ತು. ನಂತರ ಸಿದ್ಧಾರ್ಥ ಅವರೊಂದಿಗೆ ನಟಿಸಿದ ರೊಮ್ಯಾಂಟಿಕ್ ಕಾಮಿಡಿ ಸಿನಿಮಾ 'ನುವ್ವಾಸ್ತಾನಂಟೆ ನೇನೊದ್ದಂಟನಾ' ತ್ರಿಷಾರ ಎವರ್‌ಗ್ರೀನ್ ಸಿನಿಮಾ. ಪ್ರಭುದೇವ ನಿರ್ದೇಶನದ ಈ ಸಿನಿಮಾ ಒಂದೇ ಆ ವರ್ಷ 9 ಫಿಲ್ಮ್‌ಫೇರ್ ಪ್ರಶಸ್ತಿ ಬಾಚಿತು. ತ್ರಿಷಾಗೆ ಅತ್ಯುತ್ತಮ ನಟಿ ಪ್ರಶಸ್ತಿ ತಂದುಕೊಟ್ಟಿತ್ತು. ಅಲ್ಲದೆ, ಭಾರತೀಯ ಚಿತ್ರರಂಗದ 9 ಭಾಷೆಗಳಲ್ಲಿ ಈ ಸಿನಿಮಾ ರಿಮೇಕ್ ಆಯಿತು. ತ್ರಿಷಾಗೆ 5 ಫಿಲ್ಮ್‌ಫೇರ್ ಪ್ರಶಸ್ತಿ ದೊರೆತಿದೆ. ಇದಲ್ಲದೆ ಪ್ರತಿಷ್ಠಿತ ನಂದಿ ಪ್ರಶಸ್ತಿ ಹಾಗೂ ಚಿತ್ರರಂಗಕ್ಕೆ ಸಲ್ಲಿಸಿರುವ ಸೇವೆ ಪರಿಗಣಿಸಿ ತಮಿಳುನಾಡು ಸರಕಾರ ಅತ್ಯುನ್ನತ ಪ್ರಶಸ್ತಿ 'ಕಲೈಮಮಣಿ' (2006) ನೀಡಿ ಗೌರವಿಸಿದೆ.

ಕೈ ಹಿಡಿಯದ ಬಾಲಿವುಡ್: ತಮಿಳು, ತೆಲುಗು, ಮಲಯಾಳಂ, ಹಿಂದಿ ಹಾಗೂ ಕನ್ನಡ ಭಾಷೆಯಲ್ಲಿ ಅಭಿನಯಿಸಿರುವ 'ಪಂಚಭಾಷಾ' ತಾರೆ ತ್ರಿಷಾ ದಕ್ಷಿಣದಲ್ಲಿ ಅಪಾರ ಯಶಸ್ಸು ಕಂಡಿದ್ದರೂ ಬಾಲಿವುಡ್‌ನಲ್ಲಿ ಅಷ್ಟಾಗಿ ನೆಲೆ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. 2010ರಲ್ಲಿ ತ್ರಿಷಾ ಅಕ್ಷಯ್ ಕುಮಾರ್ ಜತೆ 'ಕಟ್ಟಾ ಮಿಟ್ಟಾ' ಎಂಬ ಹಿಂದಿ ಸಿನಿಮಾ ಮಾಡುವ ಮೂಲಕ ಬಾಲಿವುಡ್‌ಗೆ ಪದಾರ್ಪಣೆ ಮಾಡಿದರು. ಚಿತ್ರ ಯಶಸ್ವಿಯಾದರೂ ತ್ರಿಷಾಗೆ ಹೆಚ್ಚಿನ ಅವಕಾಶವನ್ನಂತೂ ತಂದುಕೊಡಲಿಲ್ಲ. ಸಿಂಬು ಜತೆ ನಟಿಸಿದ್ದ 'ವಿನ್ನೈತಾಂಡಿ ವರುವಾಯ' ಚಿತ್ರ ತ್ರಿಷಾ ಕರಿಯರ್‌ನ ಅತ್ಯುತ್ತಮ ಸಿನಿಮಾ. ನಿರ್ದೇಶಕ ಗೌತಮ್ ಮೆನನ್ ಇದನ್ನು ಹಿಂದಿಗೆ ರಿಮೇಕ್ ಮಾಡಲು ಯೋಚಿಸಿದ್ದರು. ತ್ರಿಷಾ ಜತೆಗೆ ಬಾಲಿವುಡ್ ಹೀರೊ ಒಬ್ಬರನ್ನು ಹಾಕಿಕೊಳ್ಳಲು ತೀರ್ಮಾನಿಸಿದ್ದರು. ಆದರೆ, ಸಿನಿಮಾ ಟೇಕಾಫ್ ಕಾಣದಾಯಿತು. ಅಲ್ಲಿಗೆ ತ್ರಿಷಾರ ಬಾಲಿವುಡ್ ಕನಸೂ ಮೇಲೆ ಹಾರಲಿಲ್ಲ, ಆದರೆ, ತ್ರಿಷಾ ನಟಿಸಿದ ಅನೇಕ ದಕ್ಷಿಣ ಭಾರತೀಯ ಚಿತ್ರಗಳು ಹಿಂದಿಗೆ ಡಬ್ ಅಥವಾ ರಿಮೇಕ್ ಆಗಿವೆ. ಕನ್ನಡದಲ್ಲೂ ಪುನೀತ್ ರಾಜ್ ಕುಮಾರ್ ಅವರೊಂದಿಗೆ 'ಪವರ್' ಸಿನಿಮಾ ಒಂದರಲ್ಲೇ ಮಾತ್ರ ತ್ರಿಷಾ ಅಭಿನಯಿಸಿದ್ದಾರೆ.

ತ್ರಿಷಾ ಪ್ರಾಣಿ ಪ್ರೀತಿ: ತ್ರಿಷಾಗೆ ಶ್ವಾನ ಸೇರಿದಂತೆ ಹಲವು ಪ್ರಾಣಿಗಳ ಬಗ್ಗೆ ಅಪಾರ ಪ್ರೀತಿ. ಪ್ರಾಣಿ ದಯಾಸಂಘದಂಥ ಎನ್‌ಜಿಒ ಜತೆಯೂ ಕೈ ಜೋಡಿಸಿದ್ದಾರೆ. ಅವರ ಪ್ರಾಣಿ ಪ್ರೀತಿ ಎಷ್ಟು ಎಂದರೆ 2016ರಲ್ಲಿ ಜಲ್ಲಿಕಟ್ಟು ಕ್ರೀಡೆಯ ವಿರುದ್ಧ ಟ್ವೀಟಿಸಿ, ವಿವಾದಕ್ಕೆ ಒಳಗಾಗಿದ್ದರು. ಈ ವೇಳೆ ನಟ ಕಮಲ್ ಹಾಸನ್, ತ್ರಿಷಾ ಪರವಾಗಿ ನಿಂತು ತಮಿಳರನ್ನು ಸಮಾಧಾನಪಡಿಸಿದ್ದರು. ಈಗ ತ್ರಿಷಾ ತಮಿಳುನಾಡಿನ ನೂತನ ಸಿಎಂ, ಸ್ಟಾರ್ ನಟ ವಿಜಯ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಭವಿಷ್ಯದಲ್ಲಿ ರಾಜಕೀಯಕ್ಕೆ ಬರುತ್ತಾರೋ ಅಥವಾ ಸಿನಿಮಾ ರಂಗದಲ್ಲೇ ಉಳಿಯುತ್ತಾರೋ ಕಾದು ನೋಡಬೇಕಿದೆ. ■

Bennett & Coleman
THE TIMES OF INDIA
ಭಾನುವಾರ,17 ಮೇ 2026 | ಪುಟಗಳು: 15+4 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
www.vijaykarnataka.com c
ಸಂಪುಟ: 27 | ಸಂಚಿಕೆ: 136
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಕಿರಿಕ್ ಮಾಡಿದರೆ ಭೂಪಟದಿಂದಲೇ ಪಾಕ್ ನಾಶ: ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ

ಬೆಂಗಳೂರು ದರ: ₹14,385 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ) | ₹15,693 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ) | ₹2,80,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಪತ್ನಿಯಿಂದ ವಿಚ್ಛೇದನ ಸಿಗುವವರೆಗೂ ನಾನು ಸಿನಿಮಾ ಮಾಡಲ್ಲ: ಜಯಂ ರವಿ ಕಣ್ಣೀರು

ವಿಕ ಹೊಂಗಿರಣ

ಜೀವನದಲ್ಲಿ ನಮಗೇ ಘಾಸಿಯಾಗುವಷ್ಟು ಭಾವುಕತೆಯೂ ಇರಬಾರದು, ಬೇರೆಯವರನ್ನು ನೋಯಿಸುವಷ್ಟು ಭಾವಹೀನತೆಯೂ ಇರಬಾರದು.
- ಅನಾಮಿಕ

SBI
The banker to every Indian
ಎಸ್‌ಬಿಐ ಡಿಜಿಟಲ್ ಎಂಎಸ್‌ಎಂಇ ಸಾಲಗಳು
• ರೂ. 5 ಕೋಟಿವರೆಗೆ ಸಾಲಗಳು
• ರೂ. 50 ಲಕ್ಷದವರೆಗಿನ ಸಾಲಗಳ ತ್ವರಿತ ಡಿಜಿಟಲ್ ಮಂಜೂರಾತಿ
• ಅವಧಿ: 10 ವರ್ಷಗಳವರೆಗೆ
• ಆಕರ್ಷಕ ಬಡ್ಡಿದರಗಳು
• ಕ್ರೆಡಿಟ್ ಗ್ಯಾರೆಂಟಿ ಸುರಕ್ಷಿತ ಸಾಲಗಳಿಗೆ ಶೂನ್ಯ ಆಧಾರ
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹122/- ಕೋಲಾರ 122/- ತುಮಕೂರು 122/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹162/- ಕೋಲಾರ 162/- ತುಮಕೂರು 162/-
ವಿಥ್ ಸ್ಕಿನ್ ₹228/- ಕೋಲಾರ 228/- ತುಮಕೂರು 228/-
ವಿಥೌಟ್ ಸ್ಕಿನ್ ₹261/- ಕೋಲಾರ 261/- ತುಮಕೂರು 261/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಜೂನ್ 1ರಂದು ಶಾಲಾ ಪ್ರಾರಂಭೋತ್ಸವ »03

88 ಅಡಿಗೆ ಕುಸಿದ ಕೆಆರ್‌ಎಸ್ ನೀರಿನ ಮಟ್ಟ »06

ಪರೀಕ್ಷೆ ರದ್ದು ಬೆನ್ನಲ್ಲೇ ಹತಾಶ ಅಭ್ಯರ್ಥಿಗಳ ಆತ್ಮಹತ್ಯೆ | ವ್ಯವಸ್ಥೆ ಲೋಪಕ್ಕೆ ಆಕಾಂಕ್ಷಿಗಳ ಬಲಿ
ಮರುಪರೀಕ್ಷೆ ಎದುರಿಸಲು ಯುವ ಮನಸ್ಸುಗಳಿಗೆ ಬೇಕಿದೆ ಸಾಂತ್ವನದ ಆಸರೆ

ಕಮರದಿರಲಿ ನೀಟ್ ಆಕಾಂಕ್ಷೆ

ಹೊಸದಿಲ್ಲಿ: ಮೇ 3ರಂದು ನಡೆದ 'ನೀಟ್-ಯುಜಿ-2026' ಪರೀಕ್ಷೆ ರದ್ದು ಎಂಬ ಸುದ್ದಿಯು ದೇಶದ ಸುಮಾರು 22 ಲಕ್ಷ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಪಾಲಿಗೆ ಬರಸಿಡಿಲಾಗಿ ಎರಗಿತು. ಲಕ್ಷಾಂತರ ವೈದ್ಯಕೀಯ ವಿದ್ಯಾರ್ಥಿಗಳ ಆಕಾಂಕ್ಷೆ ಮತ್ತು ಕನಸುಗಳನ್ನು ಭಗ್ನಗೊಳಿಸಿತು. ಸರಕಾರ ಜೂನ್ 21ರಂದು ಮರುಪರೀಕ್ಷೆ ಘೋಷಿಸಿದ್ದರೂ ವಿದ್ಯಾರ್ಥಿಗಳ ಮಾನಸಿಕ ಆಘಾತ ಕಡಿಮೆಯಾಗಿಲ್ಲ. ಹತಾಶೆ, ಒತ್ತಡ ತಾಳಲಾರದೆ ಹಲವರು ಆತ್ಮಹತ್ಯೆಯ ಹಾದಿ ಹಿಡಿಯುತ್ತಿದ್ದಾರೆ. ಕಳೆದ 3 ದಿನದಲ್ಲಿ ರಾಜಸ್ಥಾನ, ಉತ್ತರ ಪ್ರದೇಶ, ದಿಲ್ಲಿ ಮತ್ತು ಗೋವಾದಲ್ಲಿ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಮಸ್ಯೆಗೆ ಸಾವು ಪರಿಹಾರವಲ್ಲವಾದರೂ, ತಮ್ಮದಲ್ಲದ ತಪ್ಪಿಗೆ 'ಶಿಕ್ಷೆ' ಅನುಭವಿಸುವ ಸ್ಥಿತಿಯಿಂದಾಗಿ ದುಡುಕಿನ ನಿರ್ಧಾರ ಕೈಗೊಂಡಿದ್ದಾರೆ.

ರಾಜಸ್ಥಾನದ ಸಿಕಾರ್ ಮೂಲದ ಪ್ರದೀಪ್ ಮೇಘವಾಲ್, ಉತ್ತರ ಪ್ರದೇಶ ರಿತಿಕ್ ಮಿಶ್ರಾ, ದಿಲ್ಲಿಯ ಆಜಾದ್‌ಪುರದ ಅನಿಷ್ಕಾ ಪಾಂಡೆ ಹಾಗೂ ದಕ್ಷಿಣ ಗೋವಾದ 17 ವರ್ಷದ ಬಾಲಕ ಆತ್ಮಹತ್ಯೆಗೆ ಶರಣಾದವರು.

650 ಅಂಕಗಳ ನಿರೀಕ್ಷಿಸಿದ್ದ ಪ್ರದೀಪ್: ಮೃತ ಪ್ರದೀಪ್ ಕಳೆದ 3 ವರ್ಷಗಳಿಂದ ತನ್ನ ಇಬ್ಬರು ಸಹೋದರಿಯರೊಂದಿಗೆ ರಾಜಸ್ಥಾನದ ಸಿಕಾರ್‌ನಲ್ಲಿ ಖಾಸಗಿ ಕೋಚಿಂಗ್ ಸಂಸ್ಥೆಯೊಂದರಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ. »04

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಕಿಂಗ್‌ಪಿನ್ ಪಿ.ವಿ. ಕುಲಕರ್ಣಿ ಹಾಗೂ ಮನಿಷಾ ವಾಗ್ಮೋರೆ ಅವರನ್ನು ದಿಲ್ಲಿ ಕೋರ್ಟ್‌ಗೆ ಹಾಜರುಪಡಿಸಲಾಯಿತು.

ವಿಕ ಕಳಕಳಿ

ವಿದ್ಯಾರ್ಥಿಗಳೇ, ನೆನಪಿರಲಿ, ಬದುಕಿದ್ದರೆ ನೂರಾರು ಪರೀಕ್ಷೆ ಬರೆಯಬಹುದು. ನೀಟ್ ಎಂಬುದು ಕೇವಲ ಒಂದು ಪರೀಕ್ಷೆಯೇ ಹೊರತು ಬದುಕಿನ ಅಂತಿಮ ತೀರ್ಪಲ್ಲ. ವೈದ್ಯಕೀಯ ರಂಗದಷ್ಟೇ ಅದ್ಭುತವಾದ ನೂರಾರು ವೃತ್ತಿ ಬದುಕುಗಳು ದೇಶದಲ್ಲಿವೆ. ವ್ಯವಸ್ಥೆಯ ತಪ್ಪುಗಳಿಗೆ ನಿಮ್ಮ ಅಮೂಲ್ಯವಾದ ಜೀವವನ್ನು ಬಲಿ ಕೊಡಬೇಡಿ. ಯಾವುದೇ ರೀತಿಯ ಮಾನಸಿಕ ಒತ್ತಡವಿದ್ದರೆ ತಕ್ಷಣ ನಿಮ್ಮ ಪೋಷಕರು, ಸ್ನೇಹಿತರು ಅಥವಾ ಅಧ್ಯಾಪಕರೊಂದಿಗೆ ಮುಕ್ತವಾಗಿ ಮಾತನಾಡಿ.

ಸಂಭಾವ್ಯ ಪರಿಹಾರಗಳು

- **ಪಾರದರ್ಶಕತೆ ಮತ್ತು ಭದ್ರತೆ:** ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಸಂಪೂರ್ಣವಾಗಿ ತಡೆಯಲು ಕಠಿಣ ಭದ್ರತಾ ಕ್ರಮಗಳನ್ನು ಕೈಗೊಳ್ಳುವುದು.
- **ಮಾನಸಿಕ ಸಮಾಲೋಚನೆ:** ಕೋಚಿಂಗ್ ಸೆಂಟರ್‌ಗಳು ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಮಾನಸಿಕ ಆರೋಗ್ಯ ಸಮಾಲೋಚನೆ ಒದಗಿಸುವುದು.
- **ಒತ್ತಡ ಮುಕ್ತ ಶಿಕ್ಷಣ:** ಒಂದೇ ದಿನದ ಪರೀಕ್ಷೆಯ ಮೇಲಿನ ಅತಿಯಾದ ಅವಲಂಬನೆಯನ್ನು ಕಡಿಮೆ ಮಾಡಿ, ಪರ್ಯಾಯ ಮಾರ್ಗ ಕಂಡುಕೊಳ್ಳುವುದು.

ಎಲ್ಲರಿಗೂ ಆಗಿದ್ದೇ ನನಗೂ ಆಗಿದೆಯೇ ಹೊರತು ನನಗೆ ಮಾತ್ರ ಪ್ರತ್ಯೇಕವಾಗಿ ಆಗಿಲ್ಲ ಎಂದು ವಿದ್ಯಾರ್ಥಿಗಳು ಭಾವಿಸಬೇಕು. ಇಂತಹ ಘಟನೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಮರು ಪ್ರಯತ್ನ ಪಡಬೇಕು. ಈ ಪರೀಕ್ಷೆ, ಫಲಿತಾಂಶಗಳಿಂದ ಮಿಗಿಲಾದದ್ದು ಬದುಕು ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು.

- ಡಾ. ಕೆ.ಎಸ್. ಶುಭ್ರತಾ
ಮನೋವೈದ್ಯರು, ಶಿವಮೊಗ್ಗ

ಐಸಿಸ್ ಕಮಾಂಡರ್ ಹತ

ವಾಷಿಂಗ್ಟನ್: ಅಮೆರಿಕ ಹಾಗೂ ನೈಜೀರಿಯಾ ಭದ್ರತಾ ಪಡೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಜಾಗತಿಕ ಭಯೋತ್ಪಾದಕ ಸಂಘಟನೆ ಇಸ್ಲಾಮಿಕ್ ಸ್ಟೇಟ್‌ನ(ಐಸಿಸ್) ಉಗ್ರ ಅಬು ಬಿಲಾಲ್ ಅಲ್ ಮಿನುಕಿಯನ್ನು ಹತ್ಯೆಗೈಯ್ಯಲಾಗಿದೆ.

ಅಬು ಬಿಲಾಲ್ ಹತ್ಯೆ: ಟ್ರಂಪ್ ಘೋಷಣೆ

ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯ 2ನೇ ಕಮಾಂಡರ್ ಎಂದು ಗುರುತಿಸಿಕೊಂಡಿದ್ದ ಅಬು ಬಿಲಾಲ್‌ನನ್ನು ಅಂತಾರಾಷ್ಟ್ರೀಯ ಉಗ್ರ ಎಂದು 2023ರಲ್ಲಿ ಅಮೆರಿಕ ಹಣಪಟ್ಟಿ ಕಟ್ಟಿತ್ತು.

ಶುಕ್ರವಾರ (ಭಾರತೀಯ ಕಾಲಮಾನ) ರಾತ್ರಿ ಅಮೆರಿಕ ಮತ್ತು ನೈಜೀರಿಯಾದ ಸಶಸ್ತ್ರ ಪಡೆಗಳು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ವಿಶ್ವದ ಮೋಸ್ಟ್ ವಾಂಟೆಡ್ ಭಯೋತ್ಪಾದಕನನ್ನು ಹೊಡೆದುರುಳಿಸಲಾಗಿದೆ. ''ಸಂಕೀರ್ಣ ಸೇನಾ ಕಾರ್ಯಾಚರಣೆಯನ್ನು ಕರಾರುವಾಕ್ಕಾಗಿ ಪೂರ್ಣಗೊಳಿಸಲಾಗಿದೆ. ಜಾಗತಿಕ ಉಗ್ರನಿಗೆ ಅಂತ್ಯ ಹಾಡಲಾಗಿದೆ,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣ 'ಟ್ರುಥ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

182 ಕೋಟಿ ರೂ. ಮೌಲ್ಯದ ಜಿಹಾದಿ ಡ್ರಗ್ಸ್ ವಶ

ಹೊಸದಿಲ್ಲಿ: ಮಾದಕ ವಸ್ತು ನಿಯಂತ್ರಣ ಬ್ಯೂರೊ(ಎನ್‌ಸಿಬಿ) ಇದೇ ಮೊದಲ ಬಾರಿಗೆ ಭಾರತದಲ್ಲಿ 'ಜಿಹಾದಿ ಡ್ರಗ್ಸ್' ದಂಧೆಯನ್ನು ಬಯಲಿಗೆಳೆದಿದೆ. 182 ಕೋಟಿ ರೂ. ಮೌಲ್ಯದ 'ಕ್ಯಾಪ್ಟಗನ್ ಟ್ಯಾಬ್ಲೆಟ್' ಗಳನ್ನು ವಶಪಡಿಸಿಕೊಂಡಿದೆ.

ಅತ್ಯಂತ ಹೆಚ್ಚು ವ್ಯಸನಕಾರಿಯಾದ 'ಕ್ಯಾಪ್ಟಗನ್ ಟ್ಯಾಬ್ಲೆಟ್' ಜಿಹಾದಿ ಡ್ರಗ್ ಎಂದೇ ಕುಖ್ಯಾತ. ಈ ಡ್ರಗ್ಸ್‌ಅನ್ನು ಪಶ್ಚಿಮ ಏಷ್ಯಾಕ್ಕೆ ಸಾಗಿಸುತ್ತಿದ್ದ ವಿದೇಶಿ ಪ್ರಜೆಯನ್ನು ಬಂಧಿಸಲಾಗಿದೆ. ಆಪರೇಷನ್ 'ರೇಜ್‌ಪಿಲ್' ಅಡಿಯಲ್ಲಿ ಈ ಡ್ರಗ್ಸ್ ಸಾಗಾಟವನ್ನು ತಡೆಹಿಡಿಯಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಮುಂದ್ರಾ ಬಂದರು ಮತ್ತು ದಿಲ್ಲಿಯ ನೆಬ್ ಸರಾಯ್‌ನಿಂದ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ.

NAAC GRADE A+ ACCREDITED UNIVERSITY
REVA UNIVERSITY Bengaluru, India
12th DONE!
NOW STEP INTO YOUR ENTERPRISING ERA AT REVA UNIVERSITY
UG & PG ADMISSIONS OPEN 2026
Scan to Apply Now!
reva.edu.in
Call: +91 9021190211 | +91 9611201303 | 080 4696 6966

YOUR 2026 ADVANTAGE AT REVA
450+ RECRUITMENT PARTNERS | 3533+ TOTAL OFFERS | 1665 INTERNSHIPS | ₹56 LPA HIGHEST CTC | ₹1.16 LAKH/MONTH HIGHEST STIPEND
PROGRAMMES OFFERED IN
Engineering | Architecture
REVA Business School | Management | Commerce
Liberal Studies | Science & Technology | Law
GLOBAL AND NATIONAL CREDENTIALS
601-800 GLOBAL BAND
1501+ GLOBAL BAND
REVA RISE REVA INITIATIVE FOR SCHOLASTIC EXCELLENCE
For Admissions:
REVA University, Rukmini Knowledge Park, Kattigenahalli, Yelahanka, Bangalore -64

Scan to Apply
LOCK YOUR CHOICE UNLOCK YOUR FUTURE
SASTRA
ENGINEERING · MANAGEMENT · LAW · SCIENCES · HUMANITIES · EDUCATION
DEEMED TO BE UNIVERSITY (U/S 3 of the UGC Act, 1956)
THANJAVUR | KUMBAKONAM | CHENNAI
40 YEARS
ADMISSIONS 2026
Apply Online @ www.sastra.edu

Merit-Based Admissions | Modern Curriculum & Infra | Impactful Pedagogy | Maximum Graduate Outcome
The right choice today shapes everything tomorrow.

THANJAVUR
Engineering Programmes
B.Tech.
• Aerospace • Bio Engg. • Bioinfo. • Biotech. • Chemical Engg. • Civil Engg.
• CSE • CSE (Networks) • CSE (AI & Data Science)
• CSE (Cyber Security & Blockchain Technology) • CSE (IoT & Automation)
• EEE • ECE • EIE • Robotics & AI • Electronics & Computer Engg. • IT
• Mechanical Engg. • Electronics Engg. (VLSI Design & Technology)
• Industrial Engg. & Mgt. (Jointly with Clemson University, USA)
• Mechatronics
M.Tech. (5 - Year Integ.) : • Biotech. • Medical Nanotech.
M.Tech. (2 - Year) : In All Streams of Engineering
Law Programmes (5 - Year Integrated)
• B.A. LL.B. (Hons.) • B.Com. LL.B. (Hons.) • B.B.A. LL.B. (Hons.)
Education, Science and Humanities Programmes
4 - Year Integ. Education Programmes : B.Sc. B.Ed. & B.Com. B.Ed. (ITEP Mode)
• B.Sc. Electronics Manufacturing (with TATA Electronics)
• B.Optom. • M.Optom. • M.A.Sanskrit (5 - Year Integ.)
• M.Sc. (2 - Year, 5 - Year Integ.) : Biotech, Bioinfo, Chemistry, Data Science, Physics, Electronics (with CALIBER Interconnects), Mathematics & Computing*
Commerce & Management Programmes
• B.Com. (Comp. Application) • B.Com. (BFSI)
• M.B.A. & M.C.A. Programmes (2 - Year)

CHENNAI
Undergraduate Programmes
• B.Com. • B.B.A. • B.C.A.
• B.A. (Economics & Public Policy)
All are regular 3 Year or (2+1 Year) with industry partners under AEDP mode
Postgraduate Programmes
• M.B.A.
• M.Sc. Data Science (AI specialisation with ZOHO Corp.)
KUMBAKONAM
Undergraduate Programmes
• B.B.A. • B.Com.
• B.Sc. - Biochemistry, Physics, Microbiology, Computer Science, Electronics & Communication System, Mathematics with Computer Applications*
• BCA • B.Tech. - CSE & ECE
Postgraduate Programmes
• M.Com. – Master of Commerce
• M.Sc. – Biochemistry, Computer Science, Mathematics, Microbiology
*Jointly with ZOHO Corp.

MODE OF ADMISSION & IMPORTANT DATES
B.Tech. & M.Tech. (5 - Year Integ.): Stream - I : Based on JEE Main 2026 Scores + Class XII Scores. Stream - II : Based on Class XII Scores. Online Counselling. Last Date to Apply : June 5, 2026
Law Programmes (5 - Year Integ.): PHASE II : Based on Class XII Scores + CLAT 2026 Scores. Last Date to Apply : June 05, 2026. Counselling from June 06, 2026
M.B.A. & M.C.A.: Admission will be based on Test & Interview. Applicants with good CAT / GMAT / XAT / AIMAT / CMAT scores will be exempt from appearing for the test. Rolling (Admissions in Batches)
B. Com. / B.B.A. / B.C.A. / B.A. (Economics & Public Policy): Based on Class XII Scores. Rolling (Admissions in Batches)
All other programmes: Based on qualifying UG Degree / Class XII Scores. Rolling (Admissions in Batches)
THINK MERIT | THINK TRANSPARENCY | THINK SASTRA
E-mail: admissions@sastra.ac.in | Tnj: 04362-350001 (20 Lines) Kum: 0435-2426823 Che: 044-23650027

KFC®
ಸಂಡೆ ಡಬಲ್ ಡೀಲ್
ಖರೀದಿಸಿ 1 ಬಕೆಟ್ & ಪಡೆಯಿರಿ 1 ಬಕೆಟ್ ಉಚಿತ

SKIP THE QUEUE ON DINE-IN
ORDER ON APP
ಉಳಿಸಿ 33%*
ಈ ಚಿಕನ್ ಉತ್ಪನ್ನಗಳು ಹೆಚ್ಚುವರಿ ಮೊನೋಸೋಡಿಯಂ ಗ್ಲುಟಮೇಟ್ ಹೊಂದಿರುತ್ತವೆ, ಗರ್ಭಿಣಿಯರಿಗೆ ಮತ್ತು 12 ತಿಂಗಳಿಗಿಂತ ಕಡಿಮೆ ವಯಸ್ಸಿನ ಶಿಶುಗಳಿಗೆ ಇದನ್ನು ಶಿಫಾರಸು ಮಾಡಲಾಗುವುದಿಲ್ಲ. ರಿಫೈನ್ಡ್ ಗೋಧಿ ಹಿಟ್ಟು (ಮೈದಾ) ಮತ್ತು ಸ್ವಾಮ್ಯಕ್ಕೊಳಪಟ್ಟ ಮಸಾಲೆ ಮಿಶ್ರಣಗಳನ್ನು ಒಳಗೊಂಡಿರುತ್ತದೆ. ಪ್ರಾಡಕ್ಟ್ ಚಿತ್ರಗಳು ನಿದರ್ಶನಕ್ಕಾಗಿ ಮಾತ್ರ. ನೈಜ ಪ್ರಾಡಕ್ಟ್ ಗಳು ಭಿನ್ನವಾಗಿರಬಹುದು. *ಬೆಲೆಗಳು ತೆರಿಗೆಗಳನ್ನು ಒಳಗೊಂಡಿರುವುದಿಲ್ಲ. ಆಯ್ದ KFC ಮಾರುಕಟ್ಟೆ / ರೆಸ್ಟೋರೆಂಟ್‌ಗಳಲ್ಲಿ ವಿವಿಧ ಬೆಲೆಗಳಲ್ಲಿ ಲಭ್ಯ. ಆಯ್ದ ಸ್ಟೋರ್ ಗಳಲ್ಲಿ ಮಾತ್ರ ಲಭ್ಯ. ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. https://online.kfc.co.in/terms-and-conditions.

ವಿಕ ಮನಿ
From The House of THE ECONOMIC TIMES
ಕನ್ನಡದ ಐಕ್ಯಕ ಹಣಕಾಸು ವಾರಪತ್ರಿಕೆ

EGR
ಶೇ.90ರಷ್ಟು ಜನರಿಗೆ ಗೊತ್ತೇ ಇಲ್ಲದ ಚಿನ್ನದ ಹೂಡಿಕೆ ಇದು!
ಬಸವರಾಜ ತೋಣಗಟ್ಟಿ ಕವರ್ ಸ್ಟೋರಿ.


ರಿಯಲ್ ಎಸ್ಟೇಟ್ ರಾಜ, ಸ್ಟಾಕ್‌ನಲ್ಲಿ ಸಂಯಮ!

ಗೋಲ್ಡ್ & ಆಯಿಲ್ ಅಟ್ಯಾಕ್
- ಸ್ವಾವಲಂಬನೆ, ಆರ್ಥಿಕ ಶಿಸ್ತು ಬರುವ ಮೊದಲೇ ದೇಶಕ್ಕೆ ಆರ್ಥಿಕ ಸಂಕಷ್ಟ? **ಕಾವ್ಯ ಪಿ.ಹೆಗ್ಡೆ** ವಿಶ್ಲೇಷಣೆ
- ಮೋದಿ ಮಾತನ್ನು ಜನ ಕೇಳ್ತಾರಾ? **ಚೈತನ್ಯ ಹೆಗಡೆ** ಒಳನೋಟ
- ಪ್ರಧಾನಿಯ ಚಿನ್ನದಂಥ ಮಾತಿನ ಮುಂದೆ ಚಿನ್ನವೇಕೆ? **ನಾರಾಯಣ ಯಾಜಿ** ವಿವರಣೆ
- ಜಾಗತಿಕ ರಾಜಕೀಯ ಚದುರಂಗದಾಟದಲ್ಲಿ OIL ರಾಜ! **ರಂಗಸ್ವಾಮಿ ಮೂಕನಹಳ್ಳಿ** ಅಂಕಣ

ಮನಿ ಮಂಥನ: RD ಕಟ್ಟಬೇಕೋ, ಇಲ್ಲ SIP ಮಾಡಬೇಕೋ? ಯಾವುದು ಬೆಸ್ಟ್? **ಶರತ್ ಎಂ.ಎಸ್.** ಕಾಲಂ

ಕಾಸ್ ಬಾತ್: ಈಗ ಕಂಟೆಂಟ್ ಕ್ರಿಯೇಟರ್‌ಗಳೇ ಕಿಂಗ್; ಇನ್‌ಫ್ಲುಯೆನ್ಸರ್ **ರಘು ಗೌಡ** ಸ್ಪೆಷಲ್ ಸ್ಟೋರಿ

ಸಂಚಿಕೆಯ ಹೈಲೈಟ್ಸ್
- ಉತ್ತಮ ಷೇರುಗಳ ಖರೀದಿಗೆ ಮ್ಯಾಜಿಕ್ ಫಾರ್ಮುಲಾ ಇದೆಯಾ? **ಡಾ.ಬಾಲಾಜಿ ರಾವ್ ಡಿ.ಜಿ.** ಅಂಕಣ
- ಸಕ್ಸೆಸ್‌ಗಾಗಿ ನೀವೂ ಮಾಡಿ ಮಾರ್ಕೆಟ್ ರಿಸರ್ಚ್: **ಜಿ.ಕೆ. ಪ್ರಮೋದ್** ಮಾರ್ಗದರ್ಶನ
- ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲೈಸೆನ್ಸ್ ರದ್ದು: ಇದು ಬ್ಯಾಂಕಿಂಗ್ ವ್ಯವಸ್ಥೆಗೆ ದೊಡ್ಡ ಪಾಠ ಹೇಗೆ? **ರಂಗನಾಥ ನೂಲಿಕರ** ವಿವರಣೆ
- ಮಳೆ ಬರಲಿ, ಬಿಸಿಲೇ ಇರಲಿ; ಎಸ್‌ಐಪಿ ನಿಲ್ಲಿಸಬೇಡಿ – **ಡಾ.ಭರತ್ ಚಂದ್ರ, ರೋಹನ್ ಚಂದ್ರ** ಮಾರ್ಕೆಟ್ ಸ್ಕ್ಯಾನ್
- ಚೆಕ್ ನೀಡುವವರ ಸುರಕ್ಷತೆಗೆ ಪಿಪಿಎಸ್: **ಉಲ್ಲಾಸ ರಾಮ ಗುನಗಾ** ಸ್ಟೋರಿ

ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ದೇಶಾದ್ಯಂತ ತ್ರಿಭಾಷಾ ಸೂತ್ರ ಕಡ್ಡಾಯಗೊಳಿಸಿದ ಸಿಬಿಎಸ್‌ಇ

ಹೊಸದಿಲ್ಲಿ: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು(ಸಿಬಿಎಸ್‌ಇ) ಭಾಷಾ ಪಠ್ಯಕ್ರಮ ನೀತಿಯನ್ನು ಪರಿಷ್ಕರಣೆ ಮಾಡಿದ್ದು, 9 ಮತ್ತು 10ನೇ ತರಗತಿಗೆ ಮೂರು ಭಾಷೆಗಳ ಕಲಿಕೆಯನ್ನು ಕಡ್ಡಾಯಗೊಳಿಸಿದೆ. ಈ ಪೈಕಿ ಎರಡು ಸ್ಥಳೀಯ ಭಾರತೀಯ ಭಾಷೆಗಳೇ ಆಗಿರಬೇಕು. ವಿದೇಶಿ ಭಾಷೆಯನ್ನು ಕಲಿಯಲು ಇಚ್ಛಿಸುವ ವಿದ್ಯಾರ್ಥಿಗಳು ಮೂರನೇ ಭಾಷೆಯಾಗಿ ಅದನ್ನು ಆಯ್ಕೆ ಮಾಡಿಕೊಳ್ಳಬಹುದು. ಅಥವಾ ಮೂರೂ ಭಾರತೀಯ ಭಾಷೆಗಳನ್ನೇ ಓದಿ, ನಾಲ್ಕನೇ ಐಚ್ಛಿಕ ವಿಷಯವಾಗಿ ವಿದೇಶಿ ಭಾಷೆಯನ್ನು ಆರಿಸಿಕೊಳ್ಳಲೂ ಸಹ ಅವಕಾಶ ಕಲ್ಪಿಸಲಾಗಿದೆ.

2026ರ ಜುಲೈ 1ರಿಂದ ಆರಂಭವಾಗಲಿರುವ ಹೊಸ ಶೈಕ್ಷಣಿಕ ವರ್ಷದಿಂದ 'ತ್ರಿಭಾಷಾ' ಸೂತ್ರ

2026-27ನೇ ಸಾಲಿನಿಂದ 9 ಮತ್ತು 10ನೇ ತರಗತಿಗೆ ಅನ್ವಯ

ಅನ್ವಯವಾಗಲಿದೆ. ಆದರೆ, ವಿದ್ಯಾರ್ಥಿಗಳ ಮೇಲೆ ಪರೀಕ್ಷಾ ಒತ್ತಡ ತಪ್ಪಿಸುವ ನಿಟ್ಟಿನಲ್ಲಿ 10ನೇ ತರಗತಿಗೆ ತೃತೀಯ ಭಾಷೆಗೆ ಬೋರ್ಡ್ ಎಕ್ಸಾಂ ನಡೆಸದಿರಲು ಸಿಬಿಎಸ್‌ಇ ನಿರ್ಧರಿಸಿದೆ. ಇದರ ಬದಲಿಗೆ ಶಾಲಾ ಹಂತದಲ್ಲೇ ಪರೀಕ್ಷೆ ನಡೆಸಿ, ಮೌಲ್ಯಮಾಪನ ನಡಸಲಾಗುವುದು.

ತ್ರಿಭಾಷಾ ಸೂತ್ರಕ್ಕೆ ಸಂಬಂಧಿಸಿದಂತೆ ಪ್ರಕಟಿಸಿದ ಮಾರ್ಗಸೂಚಿಯಲ್ಲಿ ಈ ಕುರಿತು ಸಿಬಿಎಸ್‌ಇ ವಿವರ ನೀಡಿದೆ. ನೂತನ ಶಿಕ್ಷಣ ನೀತಿಗೆ(ಎನ್‌ಇಪಿ) ಅನುಗುಣವಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ಸಿಬಿಎಸ್‌ಇ ತಿಳಿಸಿದೆ.

ಬೋರ್ಡ್ ಪರೀಕ್ಷೆ ಇಲ್ಲ: ''ಮಕ್ಕಳ ಕಲಿಕೆಯ ಮೇಲೆ ಗಮನ ಕೇಂದ್ರೀಕರಿಸಲು ಮತ್ತು ಪರೀಕ್ಷಾ ಒತ್ತಡವನ್ನು ತಗ್ಗಿಸಲು 10ನೇ ತರಗತಿಗೆ ತೃತೀಯ ಭಾಷೆ (ಆರ್3) ಬೋರ್ಡ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ. ಆಂತರಿಕವಾಗಿಯೇ ಪ್ರಶ್ನೆಪತ್ರಿಕೆ ತಯಾರಿಸಲಾಗುವುದು. ಮೌಲ್ಯಮಾಪನವೂ ಆಂತರಿಕವಾಗಿಯೇ ನಡೆಯಲಿದೆ. ಆದರೆ ತೃತೀಯ ಭಾಷೆಯಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಪ್ರಮಾಣ ಪತ್ರದಲ್ಲಿ ನಮೂದಿಸಲಾಗುವುದು,'' ಎಂದು ಮಂಡಳಿಯು ತಿಳಿಸಿದೆ.

ಶಿಕ್ಷಕರ ಕೊರತೆಗೆ ಪರಿಹಾರ: ಕಡ್ಡಾಯ ತ್ರಿಭಾಷಾ ನೀತಿಯ ಜಾರಿಯ ಸವಾಲುಗಳಿಗೆ ಸಿಬಿಎಸ್‌ಇ ಪರಿಹಾರ ಸೂಚಿಸಿದೆ. ಅದರಲ್ಲೂ ಮುಖ್ಯವಾಗಿ ನುರಿತ ಭಾಷಾ ಶಿಕ್ಷಕರ ಕೊರತೆ ಎದುರಾಗುವುದರಿಂದ, ಹೈಬ್ರಿಡ್ ಬೋಧನೆ, 'ಶಾಲಾ ಕ್ಲಸ್ಟರ್'ಗಳಿಂದ ಶಿಕ್ಷಕರ ಬಳಕೆ ಹಾಗೂ ನಿವೃತ್ತ ಶಿಕ್ಷಕರ ಮರು ನೇಮಕ ಮುಂತಾದ ಆಯ್ಕೆಗಳನ್ನು ಶಾಲೆಗಳಿಗೆ ನೀಡಲಾಗಿದೆ. ಅಲ್ಲದೆ, ನಿರ್ದಿಷ್ಟ ಭಾಷೆಯಲ್ಲಿ ಪ್ರಾವೀಣ್ಯತೆ ಹೊಂದಿರುವ ಇತರೆ ಭಾಷೆಗಳ ಶಿಕ್ಷಕರನ್ನೂ ಬಳಸಿಕೊಳ್ಳಲು ಸೂಚಿಸಲಾಗಿದೆ.

ಅಮೆರಿಕ–ನೈಜೀರಿಯಾ ಸೇನೆಗಳಿಂದ ಜಂಟಿ ಕಾರ್ಯಾಚರಣೆ
ಸಿರಿಯಾದಿಂದ ಆಫ್ರಿಕಾ ರಾಷ್ಟ್ರಗಳಿಗೆ ನೆಲೆ ಬದಲಿಸಿದ್ದ ಐಸಿಸ್‌ಗೆ ದೊಡ್ಡ ಆಘಾತ

ಐಸಿಸ್ ಉಗ್ರ ಬಿಲಾಲ್ ಖತಂ

ವಾಷಿಂಗ್ಟನ್: ಅಮೆರಿಕ ಹಾಗೂ ನೈಜೀರಿಯಾ ಭದ್ರತಾ ಪಡೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಜಾಗತಿಕ ಭಯೋತ್ಪಾದಕ ಸಂಘಟನೆ ಇಸ್ಲಾಮಿಕ್ ಸ್ಟೇಟ್ (ಐಸಿಸ್) ಉಗ್ರ ಅಬು ಬಿಲಾಲ್ ಅಲ್ ಮಿನುಕಿಯನ್ನು ಹತ್ಯೆಗೈಯ್ಯಲಾಗಿದೆ.

ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯ ಎರಡನೇ ಕಮಾಂಡರ್ ಎಂದು ಗುರುತಿಸಿಕೊಂಡಿದ್ದ ಅಬು ಬಿಲಾಲ್‌ನನ್ನು ಅಂತಾರಾಷ್ಟ್ರೀಯ ಉಗ್ರ ಎಂದು 2023ರಲ್ಲಿ ಅಮೆರಿಕ ಹಣೆಪಟ್ಟಿ ಕಟ್ಟಿತ್ತು.

ಶುಕ್ರವಾರ (ಭಾರತೀಯ ಕಾಲಮಾನ) ರಾತ್ರಿ ಅಮೆರಿಕ ಮತ್ತು ನೈಜೀರಿಯಾದ ಸಶಸ್ತ್ರ ಪಡೆಗಳು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ವಿಶ್ವದ ಮೋಸ್ಟ್ ವಾಂಟೆಡ್ ಭಯೋತ್ಪಾದಕನನ್ನು ಹೊಡೆದುರುಳಿಸಲಾಗಿದೆ. ''ಸಂಕೀರ್ಣ ಸೇನಾ ಕಾರ್ಯಾಚರಣೆಯನ್ನು ಕರಾರುವಕ್ಕಾಗಿ ಯೋಜಿಸುವ ಮೂಲಕ ದೋಷರಹಿತವಾಗಿ ಪೂರ್ಣಗೊಳಿಸಲಾಗಿದೆ. ಜಾಗತಿಕ ಉಗ್ರನಿಗೆ ಅಂತ್ಯ ಹಾಡಲಾಗಿದೆ,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣ 'ಟ್ರುತ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯ ಹಿರಿಯ ಕಮಾಂಡರ್ ಅಲ್ ಮಿನುಕಿಯನ್ನು ಜಂಟಿ ಕಾರ್ಯಾಚರಣೆಯಲ್ಲಿ ಹೊಡೆದುರುಳಿಸಲಾಗಿದೆ ಎಂದು ನೈಜೀರಿಯಾದ ರಕ್ಷಣಾ ಪಡೆ ಖಚಿತಪಡಿಸಿದೆ.

ಐಸಿಸ್‌ಗೆ ಬಲವಾದ ಪೆಟ್ಟು: ಐಸಿಸ್ ಸಂಘಟನೆ ಕಾರ್ಯಾಚರಣೆ, ಉಗ್ರರಿಗೆ ಆರ್ಥಿಕ ನೆರವು, ಶಸ್ತ್ರಾಸ್ತ್ರ ಸರಬರಾಜು, ಸ್ಫೋಟಕ, ಡ್ರೋನ್‌ಗಳ ಅಭಿವೃದ್ಧಿ, ಬಳಕೆಗೆ ಹತ ಉಗ್ರ ಮಿನುಕಿ ಮಾರ್ಗದರ್ಶನ ನೀಡುತ್ತಿದ್ದ. ವಿಶ್ವದ ವಿವಿಧೆಡೆ ನಡೆದ ದಾಳಿಯ ಬಗ್ಗೆ ಕಾರ್ಯತಂತ್ರ ರೂಪಿಸುತ್ತಿದ್ದ ಎಂದು ನೈಜೀರಿಯಾ ಸರಕಾರ ಹೇಳಿದೆ.

''ಅಮೆರಿಕದ ಸಶಸ್ತ್ರ ಪಡೆಗಳೊಂದಿಗೆ ನೈಜೀರಿಯಾ ಸಶಸ್ತ್ರ ಪಡೆಗಳು ಕೈಗೊಂಡ ಜಂಟಿ ಕಾರ್ಯಾಚರಣೆಯಲ್ಲಿ ಇಸ್ಲಾಮಿಕ್ ಸ್ಟೇಟ್ ಸಂಘಟನೆ ನಡ ಮುರಿಯಲಾಗಿದೆ. ಅಲ್ ಮಿನುಕಿ ಹತ್ಯೆಯೊಂದಿಗೆ ಐಸಿಸ್ ಕಾರ್ಯಾಚರಣೆ ಸಂಘಟಿಸುವ ಮತ್ತು ದಾಳಿಗೆ ನಿರ್ದೇಶಿಸುವ ನಿರ್ಣಾಯಕ ಕೇಂದ್ರವನ್ನು ನಿರ್ಮೂಲನೆ ಮಾಡಲಾಗಿದೆ,'' ಎಂದು ನೈಜೀರಿಯಾ ಅಧ್ಯಕ್ಷ ಬೋಲಾ ಟಿನುಬು ಹೇಳಿದ್ದಾರೆ.

ಪ್ರತಿ ದಾಳಿಗೆ ಇರಾನ್ ಸಜ್ಜು

ಅಮೆರಿಕ ದಾಳಿ ಪುನಾರಂಭಿಸಿದರೆ ಎದುರಿಸಲು ಸಿದ್ಧವಿರುವುದಾಗಿ ಇರಾನ್ ಮಿಲಿಟರಿ ಆಡಳಿತ ಘೋಷಣೆ ಮಾಡಿದೆ. ''ಯಾವುದೇ ಆಕ್ರಮಣಕ್ಕೆ ತಕ್ಕ ಪ್ರತ್ಯುತ್ತರ ನೀಡಲು ಸಶಸ್ತ್ರ ಪಡೆಗಳು ಸಜ್ಜಾಗಿವೆ. ನಮ್ಮ ಬಳಿ ಪ್ರತಿದಾಳಿಗೆ ಸಾಕಷ್ಟು ಆಯ್ಕೆಗಳಿವೆ. ಪ್ರತಿರೋಧದ ಕಾರ್ಯವಿಧಾನಕ್ಕೆ ಅಮೆರಿಕ ಮಾತ್ರವಲ್ಲ ಜಗತ್ತೇ ಬೆರಗಾಗಬಹುದು,'' ಎಂದು ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಎಚ್ಚರಿಕೆ ನೀಡಿದ್ದಾರೆ.

ಇರಾನ್ ಮೇಲೆ ದಾಳಿಗೆ ಸಿದ್ಧತೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ಪ್ರವಾಸ ಪೂರೈಸಿಕೊಂಡು ಸ್ವದೇಶಕ್ಕೆ ಮರಳುತ್ತಿದ್ದಂತೆ ಇರಾನ್ ವಿರುದ್ಧ ಮತ್ತೊಮ್ಮೆ ಹೊಸ ರೀತಿಯ ದಾಳಿಗೆ ಸಿದ್ಧತೆ ನಡೆಸಿದ್ದಾರೆ. ಪ್ರಸ್ತುತ ಜಾರಿಯಲ್ಲಿರುವ ಕದನ ವಿರಾಮ ಅಂತ್ಯಗೊಳ್ಳುತ್ತಿದ್ದಂತೆ ಹೊಸ ಹೆಸರಿನಲ್ಲಿ ಇರಾನ್ ವಿರುದ್ಧ 2ನೇ ಹಂತದ ಸೇನಾ ಕಾರ್ಯಾಚರಣೆ ನಡೆಸಲು ಅಮೆರಿಕ ಮಿಲಿಟರಿ ಯೋಜನೆ ರೂಪಿಸಿದೆ.

ಫೆ.28 ರಂದು 'ಆಪರೇಷನ್ ಎಪಿಕ್ ಫ್ಯೂರಿ' ಹೆಸರಿನಲ್ಲಿ ಇರಾನ್ ಮೇಲೆ ಸಮರ ಸಾರಿದ್ದ ಅಮೆರಿಕ, 7 ವಾರಗಳ ಬಳಿಕ ತಾತ್ಕಾಲಿಕ ಕದನ ವಿರಾಮ ಜಾರಿಗೊಳಿಸಿತ್ತು. ಪಾಕಿಸ್ತಾನದಲ್ಲಿ ನಡೆದ ಒಂದು ಸುತ್ತಿನ ಸಂಧಾನ ಮಾತುಕತೆ ವಿಫಲವಾದ ಬಳಿಕ ಹರ್ಮುಜ್ ಜಲಸಂಧಿಯಲ್ಲಿ ಇರಾನ್ ಹಡಗುಗಳನ್ನು ಅಮೆರಿಕ ನೌಕಾಪಡೆ ನಿರ್ಬಂಧಿಸಿದೆ. ಉಭಯ ದೇಶಗಳು ಪ್ರಸ್ತಾಪಿಸಿದ ಕಠಿಣ ಷರತ್ತುಗಳಿಂದ ಸಂಧಾನ ಮಾತುಕತೆ ಮೊಟಕುಗೊಂಡಿದೆ.

'ಆಪರೇಷನ್ ಸ್ಲೆಡ್ಜ್‌ಹ್ಯಾಮರ್': ಇರಾನ್ ಜತೆಗಿನ ಕದನ ವಿರಾಮ ಮಾತುಕತೆಗಳು ಮುರಿದು ಬಿದ್ದಲ್ಲಿ ದೊಡ್ಡ ಮಟ್ಟದ ಮಿಲಿಟರಿ ಕಾರ್ಯಾಚರಣೆ ನಡೆಸಲು ಅಮೆರಿಕ ಸಿದ್ಧತೆ ಕೈಗೊಂಡಿದೆ. 'ಆಪರೇಷನ್ ಸ್ಲೆಡ್ಜ್‌ಹ್ಯಾಮರ್' ಹೆಸರಿನಲ್ಲಿ ದಾಳಿ ಪುನಾರಂಭಿಸಲು ಯೋಜನೆ ರೂಪಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇರಾನ್ ವಿರುದ್ಧದ ಯುದ್ಧ 60 ದಿನ ಕಳೆಯುವ ಮೊದಲೇ 'ಆಪರೇಷನ್ ಎಪಿಕ್ ಫ್ಯೂರಿ' ಕಾರ್ಯಾಚರಣೆ ಅಂತ್ಯವಾಗಿದೆ ಎಂದು ಅಮೆರಿಕ ರಕ್ಷಣಾ ಸಚಿವಾಲಯ ತಿಳಿಸಿತ್ತು. ಯುದ್ಧ ಮುಂದುವರಿಸಲು ಸಂಸತ್ ಅನುಮೋದನೆ ಪಡೆಯುವುದನ್ನು ತಪ್ಪಿಸಲು ಸಮರ ಅಂತ್ಯವಾಗಿದೆ ಎಂದು ಟ್ರಂಪ್ ಆಡಳಿತ ಘೋಷಣೆ ಮಾಡಿತ್ತು.

ಮಹಿಳಾ, ಮಕ್ಕಳ ಖಾತೆ ವಿಜಯ್‌ಗೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಶನಿವಾರ ತಮಗೂ ಸೇರಿದಂತೆ ಒಟ್ಟು 10 ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥರಾಗಿರುವ ವಿಜಯ್ ಅವರು ಪ್ರಮುಖವಾದ ಗೃಹ ಖಾತೆಯನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ.

ಗೃಹ ಖಾತೆ ತನ್ನಲ್ಲೇ ಉಳಿಸಿಕೊಂಡು ಉಳಿದ ಖಾತೆ ಹಂಚಿದ ದಳಪತಿ

ಒಟ್ಟು 10 ಸಚಿವ ಸ್ಥಾನ ಹಂಚಿಕೆ

ಅದರ ಜತೆಗೆ ಸಾಮಾನ್ಯ ಆಡಳಿತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಗಳನ್ನು ಕೂಡ ಸಿಎಂ ತಮ್ಮ ಬಳಿಯೇ ಇರಿಸಿಕೊಂಡಿದ್ದಾರೆ. ಉಳಿದಂತೆ, ಸಂಪುಟದ ಹಿರಿಯ ಸಚಿವ ಕೆ.ಎ. ಸೆಂಗೊಟ್ಟೈಯನ್ ಅವರಿಗೆ ಹಣಕಾಸು ಇಲಾಖೆಯನ್ನು ಹಂಚಿಕೆ ಮಾಡಲಾಗಿದೆ.

ಕೆ.ಜಿ. ಅರುಣ್‌ರಾಜ್ ಅವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎನ್. ಆನಂದ್ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಜಲಸಂಪನ್ಮೂಲ ಸಚಿವಾಲಯ ನೀಡಲಾಗಿದೆ. ಸಂಪುಟದ ಅತಿ ಕಿರಿಯ ವಯಸ್ಸಿನ ಸಚಿವೆ ಎನಿಸಿರುವ ಸೆಲ್ವಿ ಅವರಿಗೆ ಕೈಗಾರಿಕಾ ಖಾತೆಯ ನಿರ್ವಹಣೆ ವಹಿಸಲಾಗಿದೆ.

ಈ ಕುರಿತು ಲೋಕ ಭವನದಿಂದ ಅಧಿಕೃತ ಪ್ರಕಟಣೆ ಹೊರಡಿಸಲಾಗಿದ್ದು, ಹೊಸ ಸಚಿವರ ಅಧಿಕೃತ ಕಾರ್ಯಭಾರ ಶೀಘ್ರದಲ್ಲೇ ಆರಂಭವಾಗಲಿದೆ.

ಜನಾದೇಶಕ್ಕೆ ದ್ರೋಹ ಬಗೆಯಬೇಡಿ: ಎಐಎಡಿಎಂಕೆ ಪಕ್ಷದ ಬಂಡಾಯ ಶಾಸಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳದಂತೆ ಕಾಂಗ್ರೆಸ್ ನಾಯಕ ಕಾರ್ತಿ ಚಿದಂಬರಂ ಅವರು ಸಿಎಂ ಜೋಸೆಫ್ ವಿಜಯ್ ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ. ''ತಮಿಳುನಾಡಿನ ಜನರು ಡಿಎಂಕೆ ಮತ್ತು ಎಐಎಡಿಎಂಕೆ ಎರಡೂ ಸಾಂಪ್ರದಾಯಿಕ ಪಕ್ಷಗಳನ್ನು ಅಧಿಕಾರದಿಂದ ದೂರವಿಡಲು ಸ್ಪಷ್ಟ ಜನಾದೇಶ ನೀಡಿದ್ದಾರೆ. ವಿಜಯ್ ಅವರು ಈ ಜನಾದೇಶವನ್ನು ಗೌರವಿಸಬೇಕು. ಬಂಡಾಯ ಶಾಸಕರನ್ನು ಸರಕಾರಕ್ಕೆ ಸೇರಿಸಿಕೊಂಡರೆ ಅವರ ವಿಶ್ವಾಸಾರ್ಹತೆ ಮತ್ತು ಉತ್ತಮ ಇಮೇಜ್‌ಗೆ ಧಕ್ಕೆಯಾಗಲಿದೆ. ಮುಖ್ಯಮಂತ್ರಿಗಳಿಗೆ ಸದ್ಯ ಯಾವುದೇ ಬಣದ ಬೆಂಬಲದ ಅಗತ್ಯವಿಲ್ಲ,'' ಎಂದು ಕಾರ್ತಿ ಚಿದಂಬರಂ ಅಭಿಪ್ರಾಯಪಟ್ಟಿದ್ದಾರೆ.

ದೇಶದಲ್ಲೇ ಮೊದಲ ಬಾರಿ ₹182 ಕೋಟಿ ಮೌಲ್ಯದ ಜಿಹಾದಿ ಡ್ರಗ್ ವಶಕ್ಕೆ: ಸಚಿವ ಶಾ

ಹೊಸದಿಲ್ಲಿ: ಭಾರತದಲ್ಲಿ ಮೊದಲ ಬಾರಿಗೆ ಮಾದಕ ವಸ್ತು ನಿಯಂತ್ರಣ ಬ್ಯೂರೊ (ಎನ್‌ಸಿಬಿ) 182 ಕೋಟಿ ರೂ. ಮೌಲ್ಯದ 'ಕ್ಯಾಪ್ಟಗನ್ ಟ್ಯಾಬ್ಲೆಟ್' ಗಳನ್ನು ವಶಪಡಿಸಿಕೊಂಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.



ಆಪರೇಷನ್ 'ರೇಜ್‌ಪಿಲ್' ಹೆಸರಲ್ಲಿ ಎನ್‌ಸಿಬಿ ಕಾರ್ಯಾಚರಣೆ

ಈ ಡ್ರಗ್ಸ್‌ಅನ್ನು ಪಶ್ಚಿಮ ಏಷ್ಯಾಕ್ಕೆ ಸಾಗಿಸುತ್ತಿದ್ದ ವಿದೇಶಿ ಪ್ರಜೆಯನ್ನು ಬಂಧಿಸಲಾಗಿದೆ. ಆಪರೇಷನ್ 'ರೇಜ್‌ಪಿಲ್' ಅಡಿಯಲ್ಲಿ ಈ ಡ್ರಗ್ಸ್ ಸಾಗಾಟವನ್ನು ತಡೆಹಿಡಿಯಲಾಗಿದೆ ಎಂದು ಅಮಿತ್ ಶಾ 'ಎಕ್ಸ್' ನಲ್ಲಿ ಮಾಹಿತಿ ನೀಡಿದ್ದಾರೆ. ಮುಂದ್ರಾ ಬಂದರು ಮತ್ತು ದೆಹಲಿಯ ನೆಬ್ ಸರಾಯ್‌ನಿಂದ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ. ಸಿರಿಯನ್ ಪ್ರಜೆ ಆ ಡ್ರಗ್ಸ್ ಅನ್ನು ಚಹಾ ಎಲೆಗಳ ಪೆಟ್ಟಿಗೆಯಲ್ಲಿ ಮರೆಮಾಡಿದ್ದರು.

ಈ ಬಗ್ಗೆ ಅಮಿತ್ ಶಾ, '' ನರೇಂದ್ರ ಮೋದಿ ನೇತೃತ್ವದ ಸರಕಾರವು 'ಮಾದಕವಸ್ತು ಮುಕ್ತ ಭಾರತ'ಕ್ಕೆ ಸಂಕಲ್ಪ ಮಾಡಿದೆ. 'ಆಪರೇಷನ್ ರೇಜ್‌ಪಿಲ್' ಮೂಲಕ ನಮ್ಮ ಏಜೆನ್ಸಿಗಳು 182 ಕೋಟಿ ರೂ. ಮೌಲ್ಯದ 'ಜಿಹಾದಿ ಡ್ರಗ್' ಎಂದು ಕರೆಯಲ್ಪಡುವ ಕ್ಯಾಪ್ಟಗನ್ ಅನ್ನು ಮೊದಲ ಬಾರಿಗೆ ವಶಪಡಿಸಿಕೊಂಡಿವೆ ಎಂಬ ವಿಷಯವನ್ನು ಹಂಚಿಕೊಳ್ಳಲು ಸಂತೋಷವಾಗುತ್ತಿದೆ. ಮಧ್ಯಪ್ರಾಚ್ಯಕ್ಕೆ ಸಾಗಿಸುತ್ತಿದ್ದ ಈ ಡ್ರಗ್ಸ್ ಜಾಲವನ್ನು ಭೇದಿಸುವುದು ಮತ್ತು ವಿದೇಶಿ ಪ್ರಜೆಯ ಬಂಧನವು ಮಾದಕವಸ್ತುಗಳ ವಿರುದ್ಧದ ಭಾರತದ ಶೂನ್ಯ ಸಹಿಷ್ಣುತೆಗೆ ನಮ್ಮ ಬದ್ಧತೆಗೆ ಉದಾಹರಣೆಗಳಾಗಿವೆ. ಭಾರತಕ್ಕೆ ಪ್ರವೇಶಿಸುವ ಅಥವಾ ನಮ್ಮ ಪ್ರದೇಶವನ್ನು ಸಾರಿಗೆ ಮಾರ್ಗವಾಗಿ ಬಳಸಿಕೊಂಡು ಸಾಗಾಟವಾಗುವ ಮಾದಕವಸ್ತುಗಳನ್ನು ನಾವು ತಡೆಯುತ್ತೇವೆ,'' ಎಂದು ಹೇಳಿದ್ದಾರೆ.

ಏನಿದು 'ಜಿಹಾದಿ ಡ್ರಗ್'?

ಕ್ಯಾಪ್ಟಗನ್ ಹೆಚ್ಚು ವ್ಯಸನಕಾರಿಯಾದ ಸಿಂಥೆಟಿಕ್ ಆಂಫೆಟಮೈನ್ ಮಾದರಿಯ ಉತ್ತೇಜಕವಾಗಿದೆ. ಇದಕ್ಕೆ 'ಜಿಹಾದಿ ಡ್ರಗ್' ಎಂಬ ಅಡ್ಡಹೆಸರಿದೆ. ಏಕೆಂದರೆ ಐಸಿಸ್ ನಂತಹ ಉಗ್ರಗಾಮಿ ಗುಂಪುಗಳು ದಾಳಿಯ ವೇಳೆ ಭಯವನ್ನು ಕಡಿಮೆ ಮಾಡಿಕೊಳ್ಳಲು, ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಈ ಡ್ರಗ್ಸ್ ಬಳಸುತ್ತಾರೆ. ಇದನ್ನು 'ಬಡವರ ಕೊಕೇನ್' ಎಂದೂ ಕರೆಯಲಾಗುತ್ತದೆ. ಭಾರತವು ಕನಿಷ್ಠ 200 ಪ್ರಮುಖ ಮತ್ತು ಸಣ್ಣ ಬಂದರುಗಳನ್ನು ಹೊಂದಿದೆ. ಆದರೆ, ಅವುಗಳಲ್ಲಿ ಸುಮಾರು 65 ಮಾತ್ರ ಸರಕು ಸಾಗಣೆ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿವೆ. ಪ್ರಸ್ತುತ, 13 ಪ್ರಮುಖ ಬಂದರುಗಳು ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ವ್ಯಾಪ್ತಿಗೆ ಒಳಪಟ್ಟಿವೆ. ಈ ಪಡೆ ಶೀಘ್ರದಲ್ಲೇ 67 ಹೆಚ್ಚುವರಿ ಬಂದರುಗಳಲ್ಲಿ ಭದ್ರತೆಯನ್ನು ವಹಿಸಿಕೊಳ್ಳುವ ನಿರೀಕ್ಷೆಯಿದೆ. ಬಂದರುಗಳ ಭದ್ರತೆಯನ್ನು ಬಲಪಡಿಸಲು ಮತ್ತು ಕಳ್ಳಸಾಗಣೆ ಚಟುವಟಿಕೆಗಳನ್ನು ನಿಗ್ರಹಿಸಲು, ಕೇಂದ್ರ ಸರಕಾರವು ನಾಗರಿಕ ವಿಮಾನಯಾನ ಭದ್ರತಾ ಬ್ಯೂರೋ ಮಾದರಿಯಲ್ಲಿ ಹೊಸ ಸಂಸ್ಥೆಯಾದ ಬ್ಯೂರೋ ಆಫ್ ಪೋರ್ಟ್ ಸೆಕ್ಯುರಿಟಿ ಅನ್ನು ರಚಿಸುವ ಪ್ರಕ್ರಿಯೆ ನಡೆಯುತ್ತಿದೆ.

ಭೌಗೋಳಿಕ ಉಳಿವೊ, ಇತಿಹಾಸ ಪುಟವೊ, ಪಾಕ್ ನಿರ್ಧರಿಸಲಿ!

ಹೊಸದಿಲ್ಲಿ: ''ಉಗ್ರರಿಗೆ ಆಶ್ರಯ ನೀಡುವುದು, ಭಾರತದ ಮೇಲಿನ ದಾಳಿಗೆ ಪ್ರಚೋದಿಸುವುದು, ಅಕ್ರಮ ನುಸುಳುವಿಕೆಗೆ ಬೆಂಬಲ ನೀಡುವುದನ್ನು ಮುಂದುವರಿಸುವ ಉದ್ದೇಶ ಹೊಂದಿದ್ದರೆ ಪಾಕಿಸ್ತಾನ ಭೌಗೋಳಿಕತೆಯ ಭಾಗವಾಗಬೇಕೆ ಅಥವಾ ಇತಿಹಾಸ ಪುಟದ ಭಾಗವಾಗಬೇಕೆ ಎಂಬುದನ್ನು ಇಸ್ಲಾಮಾಬಾದ್ ನಿರ್ಧರಿಸಲಿ,'' ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ನೇರ ಎಚ್ಚರಿಕೆ ನೀಡಿದ್ದಾರೆ.

ಪಾಕ್ ಸೇನೆಗೆ ಜನರಲ್ ಉಪೇಂದ್ರ ದ್ವಿವೇದಿ ಎಚ್ಚರಿಕೆ

ದಿಲ್ಲಿಯ ಮಾಣಿಕ್ ಶಾ ಕೇಂದ್ರದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಜ.ಉಪೇಂದ್ರ ದ್ವಿವೇದಿ, ''ಪಹಲ್ಗಾಮ್‌ನಂತಹ ಘಟನೆಗಳು ಮರುಕಳಿಸಿದರೆ ಭಾರತದ ಪ್ರತಿಕ್ರಿಯೆ ಆಪರೇಷನ್ ಸಿಂದೂರಕ್ಕಿಂತ ಕಠಿಣವಾಗಿರಲಿದೆ. ಭೂಪಟದಿಂದ ಅಳಿಸಿ ಹೋಗುವಷ್ಟರ ಮಟ್ಟಿಗೆ ಪ್ರಬಲವಾಗಿರಲಿವೆ,'' ಎಂಬ ಕಠಿಣ ಸಂದೇಶ ನೀಡಿದರು.

ಭವಿಷ್ಯದ ಸೇನಾ ಕಾರ್ಯಾಚರಣೆಯ ವಾಸ್ತವ ತೆರೆದಿಟ್ಟ ಜ.ದ್ವಿವೇದಿ, ''ಭಯೋತ್ಪಾದಕರಿಗೆ ಆಶ್ರಯ ನೀಡುವ ಮೂಲಕ ಭಾರತದ ವಿರುದ್ಧ ಮಸಲತ್ತು ರೂಪಿಸುವ ಪ್ರವೃತ್ತಿ ಕೈಬಿಡದಿದ್ದರೆ ಪಾಕಿಸ್ತಾನ ಜಾಗತಿಕ ಭೂಪಟದಿಂದ ಮಾಯವಾಗಿ ಇತಿಹಾಸ ಪುಟ ಸೇರಬಹುದು. ಭೌಗೋಳಿಕತೆಯ ಭಾಗವಾಗಿರಬೇಕೆ ಅಥವಾ ಗತಿಸಿದ ಇತಿಹಾಸದ ಪುಟ ಸೇರಬೇಕೆ ಎಂಬುದನ್ನು ಪಾಕಿಸ್ತಾನ ನಿರ್ಧರಿಸಿಕೊಳ್ಳಬೇಕು,'' ಎಂದು ಎಚ್ಚರಿಕೆ ನೀಡಿದರು.

3ನೇ ಮಗುವಿಗೆ 30 ಸಾವಿರ, 4ನೇ ಮಗುವಿಗೆ 40 ಸಾವಿರ ರೂ. ಘೋಷಣೆ

ಜನಸಂಖ್ಯೆ ಹೆಚ್ಚಳಕ್ಕೆ ಆಂಧ್ರ ಪ್ರೋತ್ಸಾಹ

ಅಮರಾವತಿ: ಆಂಧ್ರಪ್ರದೇಶದಲ್ಲಿ ಮಕ್ಕಳ ಜನನ ಪ್ರಮಾಣ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಹೊಸ ನಿರ್ಧಾರ ಪ್ರಕಟಿಸಿದ್ದಾರೆ. ಮೂರನೇ ಮಗು ಹೊಂದುವ ದಂಪತಿಗೆ 30 ಸಾವಿರ ರೂ. ಹಾಗೂ ನಾಲ್ಕನೇ ಮಗುವಿಗೆ 40 ಸಾವಿರ ರೂ. ಪ್ರೋತ್ಸಾಹಧನ ನೀಡುವುದಾಗಿ ಘೋಷಣೆ ಮಾಡಿದ್ದಾರೆ.

ಶ್ರೀಕಾಕುಲಂ ಜಿಲ್ಲೆಯ ನರಸಣ್ಣಪೇಟದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ''ಆಂಧ್ರಪ್ರದೇಶದಲ್ಲಿ ಜನನಪ್ರಮಾಣ ಹೆಚ್ಚಿಸುವ ಅಗತ್ಯವಿದೆ. ಇದಕ್ಕಾಗಿ ನಾನು ಹೊಸ ತೀರ್ಮಾನ ತೆಗೆದುಕೊಂಡಿದ್ದೇನೆ. ಮೂರನೇ ಹಾಗೂ ನಾಲ್ಕನೇ ಮಗು ಜನಿಸಿದರೆ, ಮಗುವಿನ ತಾಯಿಯ ಬ್ಯಾಂಕ್ ಖಾತೆಗೆ ಕ್ರಮವಾಗಿ 30 ಸಾವಿರ ರೂ. ಹಾಗೂ 40 ಸಾವಿರ ರೂ. ಜಮೆ ಮಾಡಲಾಗುವುದು,'' ಎಂದು ತಿಳಿಸಿದರು.

''ಹೆಚ್ಚಿನ ಆದಾಯ ಹೊಂದಿರುವವರು ಕೂಡ ಈಗ ಒಂದೇ ಮಗುವನ್ನು ಹೆರುತ್ತಿದ್ದಾರೆ. ಇನ್ನು, ಮೊದಲನೇ ಮಗು ಹೆಣ್ಣಾದರೆ, ಗಂಡು ಮಗುವಿನ ಆಸೆಯಿಂದ ಮಾತ್ರ ಎರಡನೇ ಮಗುವನ್ನು ಹೊಂದುತ್ತಿದ್ದಾರೆ. ಇದರಿಂದ ಜನನ ಪ್ರಮಾಣ ಕುಸಿದಿದೆ. ಮಕ್ಕಳು ಭಾರವಲ್ಲ, ಅವರು ಸಮಾಜಕ್ಕೆ ಆಸ್ತಿ ಇದ್ದಂತೆ. ಈಗ ಜನಸಂಖ್ಯೆಯನ್ನು ಹೆಚ್ಚಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಇನ್ನೊಂದು ತಿಂಗಳಲ್ಲಿ ಹೊಸ ಯೋಜನೆ ಕುರಿತು ಸಮಗ್ರ ಮಾಹಿತಿ ನೀಡಲಾಗುವುದು,'' ಎಂದು ಹೇಳಿದರು.

ಕಳೆದ ಮಾರ್ಚ್‌ನಲ್ಲಿಯೇ ಆಂಧ್ರಪ್ರದೇಶ ಸರಕಾರವು, 2ನೇ ಮಗು ಹೊಂದುವ ಪೋಷಕರಿಗೆ 25 ಸಾವಿರ ರೂ. ಪ್ರೋತ್ಸಾಹಧನ ನೀಡುವುದಾಗಿ ಘೋಷಣೆ ಮಾಡಲಾಗಿತ್ತು. ಈಗ ಮೂರನೇ ಹಾಗೂ ನಾಲ್ಕನೇ ಮಗುವಿಗೂ ಪ್ರೋತ್ಸಾಹಧನ ನೀಡಲು ತೀರ್ಮಾನಿಸಲಾಗಿದೆ. ''ಜನಸಂಖ್ಯೆ ಹೆಚ್ಚಳಕ್ಕೆ ಪ್ರೋತ್ಸಾಹ ನೀಡುವ ದೃಷ್ಟಿಯಲ್ಲಿ ಯೋಜನೆಯನ್ನು ವಿಸ್ತರಿಸಲಾಗಿದೆ,'' ಎಂದು ಕಾರ್ಯಕ್ರಮದ ಬಳಿಕ ರಾಜ್ಯದ ಆರೋಗ್ಯ ಸಚಿವ ಸತ್ಯಕುಮಾರ್ ಯಾದವ್ ಕೂಡ ಮಾಹಿತಿ ನೀಡಿದ್ದಾರೆ.

ಏಕೆ ಪ್ರೋತ್ಸಾಹಧನ ಘೋಷಣೆ?



ಒಂದು ಕಾಲದಲ್ಲಿ ಚಂದ್ರಬಾಬು ನಾಯ್ಡು ಅವರು ಜನಸಂಖ್ಯೆ ನಿಯಂತ್ರಣದ ಪರವಾಗಿ ನಿಲುವು ಹೊಂದಿದ್ದರು. ಆದರೆ, ಈಗ ಅವರು ತಮ್ಮ ನಿಲುವು ಬದಲಿಸಿಕೊಂಡಿದ್ದಾರೆ. ಆಂಧ್ರಪ್ರದೇಶದಲ್ಲಿ ಸರಾಸರಿ ಜನನ ಪ್ರಮಾಣ (ಫಲವತ್ತತೆ ದರ) 1.5ಕ್ಕೆ ಕುಸಿದಿದೆ. ಜನಸಂಖ್ಯೆ ಸ್ಥಿರವಾಗಿರಲು ಮಹಿಳೆಯರ ಫಲವತ್ತತೆ ಪ್ರಮಾಣವು ಸರಾಸರಿ 2.1ರಷ್ಟು ಇರಬೇಕು. ಅಲ್ಲದೆ, ಆಂಧ್ರಪ್ರದೇಶದಲ್ಲಿ ಜನನ ಪ್ರಮಾಣವು 2040ರ ವೇಳೆಗೆ 1.2ಕ್ಕೆ ಕುಸಿಯಲಿದೆ ಎಂದು ಹೇಳಲಾಗುತ್ತಿದೆ. ಹಾಗಾಗಿ, ರಾಜ್ಯ ಸರಕಾರವೇ ಜನಸಂಖ್ಯೆ ಹೆಚ್ಚಳಕ್ಕೆ ಹಲವು ಯೋಜನೆ ರೂಪಿಸುತ್ತಿದೆ.

ಜಾಗತಿಕ ಬಿಕ್ಕಟ್ಟಿನಿಂದ ಪಾಠ ಕಲಿಯದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ

ಬಡತನ ಪುನರುತ್ಥಾನದ ಎಚ್ಚರಿಕೆ ನೀಡಿದ ಪ್ರಧಾನಿ

ಆಮ್‌ಸ್ಟರ್‌ಡಮ್: ''ಜಗತ್ತಿನ ಹಲವು ಕಡೆ ಕಂಡು ಬರುತ್ತಿರುವ ಬಿಕ್ಕಟ್ಟುಗಳಿಂದ ವಿಶ್ವ ಸಮುದಾಯ ಬುದ್ಧಿ ಕಲಿಯದಿದ್ದರೆ ಜಾಗತಿಕ ಬಡತನ ಪ್ರಮಾಣ ದೊಡ್ಡ ಮಟ್ಟದಲ್ಲಿ ಬೆಳೆಯುವ ಅಪಾಯವಿದೆ,'' ಎಂದು ಪ್ರಧಾನಿ ಮೋದಿ ಎಚ್ಚರಿಕೆ ನೀಡಿದರು.

ನೆದರ್ಲೆಂಡ್ಸ್ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಅವರು ಶನಿವಾರ ಹೇಗ್‌ನಲ್ಲಿ ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಿದರು. ''ಕೋವಿಡ್ ಸಂಕ್ರಮಣದಿಂದ ಚೇತರಿಸಿಕೊಳ್ಳುವ ಮೊದಲೇ ಹಲವು ಕಡೆ ಸಂಘರ್ಷಗಳು ಆರಂಭವಾದವು. ಪ್ರಸ್ತುತ ಎದುರಾಗಿರುವ ಪಶ್ಚಿಮ ಏಷ್ಯಾ ಬಿಕ್ಕಟ್ಟು ಇಂಧನ ಮತ್ತು ಆಹಾರ ಬೆಲೆಗಳ ಏರಿಕೆಗೆ ದಾರಿ ಮಾಡಿಕೊಟ್ಟಿದೆ. ಪರಿಸ್ಥಿತಿ ಸುಧಾರಿಸದಿದ್ದರೆ ಅಭಿವೃದ್ಧಿಶೀಲ ದೇಶಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ,'' ಎಂದು ಮೋದಿ ಹೇಳಿದರು.

''ಕೋವಿಡ್ ಜನ ಜೀವನ, ಆರ್ಥಿಕತೆಯನ್ನು ಅಸ್ತವ್ಯಸ್ತಗೊಳಿಸಿತು. ಇಂಧನ ಬಿಕ್ಕಟ್ಟು ಬೆಲೆ ಏರಿಕೆ, ಹಣದುಬ್ಬರಕ್ಕೆ ಸೃಷ್ಟಿಸಿ ಜನರ ಜೀವನವನ್ನು ಅಪಾಯಕ್ಕೆ ತಳ್ಳಿದೆ,'' ಎಂದು ಕಳವಳ ವ್ಯಕ್ತಪಡಿಸಿದ ಮೋದಿ ಅವರು, ''ವಿವೇಕಯುತ ನೀತಿ, ಬಲವಾದ ಆಡಳಿತ, ಸುಧಾರಣಾ ಕ್ರಮಗಳಿಂದ ಕಳೆದ ಒಂದು ದಶಕದಿಂದ ಬಡತನ ನಿರ್ಮೂಲನೆಗೆ ಕೈಗೊಂಡ ಯೋಜನೆಗಳು ವಿಫಲವಾಗಬಹುದು. ಪರಿಸ್ಥಿತಿ ಸುಧಾರಣೆಯಾಗದೆ ಹೋದರೆ ಬಡತನ ಪುನರುತ್ಥಾನಕ್ಕೆ ಕಾರಣವಾಗಬಹುದು,'' ಎಂದು ಆತಂಕ ಹೊರ ಹಾಕಿದರು.

ಶುಕ್ರವಾರ ರಾತ್ರಿ ಆಮ್‌ಸ್ಟರ್‌ಡಮ್‌ಗೆ ಆಗಮಿಸಿದ ಮೋದಿ ಅವರಿಗೆ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು. ಯುವ ಕಲಾವಿದರು ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸ್ವಾಗತ ಕೋರಿದರು.

ಚೋಳರ ಕಾಲದ ತಾಮ್ರದ ಶಾಸನ ವಾಪಸ್

ವಸಾಹತುಶಾಹಿ ಅವಧಿಯಲ್ಲಿ ಭಾರತದಿಂದ ತೆಗೆದುಕೊಂಡು ಹೋಗಲಾಗಿದ್ದ ಚೋಳರ ಕಾಲದ ತಾಮ್ರ ಶಾಸನಗಳನ್ನು ಡಚ್ ಸರಕಾರ ಭಾರತಕ್ಕೆ ಹಿಂದಿರುಗಿಸಿತು. ಲೈಡನ್ ಫಲಕಗಳು ಎಂದು ಕರೆಯಲ್ಪಡುತ್ತಿದ್ದ ತಾಮ್ರ ಶಾಸನಗಳನ್ನು ಲೈಡೆನ್ ವಿವಿಯ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿತ್ತು.

ದ್ವಿಪಕ್ಷೀಯ ಬಾಂಧವ್ಯ

ರಕ್ಷಣಾ ಸಹಕಾರ, ತಂತ್ರಜ್ಞಾನ, ಸೆಮಿಕಂಡಕ್ಟರ್, ಸ್ವಚ್ಛ ಇಂಧನ, ನೀರು ನಿರ್ವಹಣೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ–ನೆದರ್ಲೆಂಡ್ಸ್ ಒಡಂಬಡಿಕೆ ಮಾಡಿಕೊಂಡಿವೆ. ಆಮ್‌ಸ್ಟರ್‌ಡಮ್‌ನಲ್ಲಿ ಡಚ್ ಪ್ರಧಾನಿ ರಾಬ್ ಜೆಟ್ಟನ್ ಭೇಟಿಯಾದ ಮೋದಿ ಅವರು, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ಬಲಪಡಿಸುವ ಕುರಿತು ಚರ್ಚೆ ನಡೆಸಿದರು.

ಯುರೋಪ್ ಒಕ್ಕೂಟದ ಜತೆಗಿನ ಮುಕ್ತ ವ್ಯಾಪಾರ ಒಪ್ಪಂದ ಹೊರತಾಗಿ ನೆದರ್ಲೆಂಡ್ಸ್ ಜತೆ ಬಂಡವಾಳ ಹೂಡಿಕೆ, ವ್ಯಾಪಾರ ಕ್ಷೇತ್ರದಲ್ಲಿ ಒಪ್ಪಂದಕ್ಕೆ ಭಾರತ ಸಹಿ ಹಾಕಿತು. ಉಭಯ ದೇಶಗಳ ನಡುವಿನ 27.8 ಶತಕೋಟಿ ಡಾಲರ್ ಮೌಲ್ಯದ ವ್ಯಾಪಾರವನ್ನು ದ್ವಿಗುಣಗೊಳಿಸಲು ಸಮ್ಮತಿಸಿದವು. ಡಚ್ ಸೆಮಿಕಂಡಕ್ಟರ್ ಉತ್ಪಾದನಾ ಸಂಸ್ಥೆ ಎಎಸ್‌ಎಂಎಲ್ ಜತೆ ಟಾಟಾ ಎಲೆಕ್ಟ್ರಾನಿಕ್ಸ್ ಒಪ್ಪಂದಕ್ಕೆ ಸಹಿ ಹಾಕಿದೆ. ಭಾರತದಲ್ಲಿ ಚಿಪ್ ಉತ್ಪಾದನೆಗೆ ಎಎಸ್‌ಎಂಎಲ್ ಸಹಕಾರ ನೀಡಲು ಸಮ್ಮತಿಸಿದೆ.

ದೇಶದ ಸಾಧನೆ ಅನಾವರಣ

''ದೇಶ ಇಂದು ಬಾಹ್ಯಾಕಾಶ, ಡಿಜಿಟಲ್ ಫೈನಾನ್ಸ್ ಕ್ಷೇತ್ರದಲ್ಲಿ ಅಗಾಧ ಬೆಳವಣಿಗೆ ಹೊಂದಿದೆ. ನಮ್ಮ ಪ್ರಯಾಣ ಚಂದ್ರನ ಅಂಗಳದವರೆಗೂ ಸಾಗಿದೆ. ಜನರನ್ನೊಳಗೊಂಡ ಬೃಹತ್ ಆರ್ಥಿಕ ಯೋಜನೆ, ಆಯುಷ್ಮಾನ್‌ನಂಥ ಆರೋಗ್ಯ ಯೋಜನೆಗಳು ಜನರಿಗೆ ತಲುಪಿಸಲಾಗಿದೆ. ಭಾರತದ ಅಭಿವೃದ್ಧಿ ಪ್ರಯಾಣ ಜನರ ವಿಶ್ವಾಸ ಹಾಗೂ ಮಹತ್ವಾಕಾಂಕ್ಷೆಯ ಪ್ರತಿಬಿಂಬವಾಗಿದೆ,'' ಎಂದು ಮೋದಿ ಹೇಳಿದರು. ಭಾರತೀಯರ ಕನಸುಗಳಿಗೆ ಇನ್ನೂ ಯಾವ ಗಡಿಗಳು ಇರಲ್ಲ. ಒಲಿಂಪಿಕ್ ಕ್ರೀಡಾಕೂಟ ಆಯೋಜನೆಯಿಂದ ಹಿಡಿದು ದೇಶವನ್ನು ಜಾಗತಿಕ ಉತ್ಪಾದನಾ ಕೇಂದ್ರವಾಗಿ ರೂಪಿಸಲು ಪ್ರಯತ್ನಿಸಲಾಗಿದೆ. ಸ್ವಚ್ಛ ಇಂಧನ ಉತ್ಪಾದನೆಯಲ್ಲಿ ಅಗ್ರಸ್ಥಾನ ತಲುಪುವ ಮೂಲಕ ವಿಶ್ವದ ಅಭಿವೃದ್ಧಿಯ ಎಂಜಿನ್ ಆಗಲು ಬಯಸುತ್ತಿದೆ,'' ಎಂದು ಮೋದಿ ತಿಳಿಸಿದರು.

ನಿವೃತ್ತರಿಗಾಗಿ ಆರ್‌ಐಎಸ್ ಯೋಜನೆ

ಎನ್‌ಪಿಎಸ್ ಅಡಿಯಲ್ಲಿ ಹೂಡಿಕೆ ಮಾಡಲು ಹಲವು ಆಯ್ಕೆ ನೀಡಿದ ಪಿಎಫ್‌ಆರ್‌ಡಿಎ

ಹೊಸದಿಲ್ಲಿ: ನಿವೃತ್ತರಿಗಾಗಿ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಸಂಸ್ಥೆಯು (ಪಿಎಫ್‌ಆರ್‌ಡಿಎ) ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಅಡಿಯಲ್ಲಿ ನಿವೃತ್ತಿ ಆದಾಯ ಯೋಜನೆ (ರಿಟೈರ್‌ಮೆಂಟ್ ಇನ್‌ಕಮ್ ಸ್ಕೀಮ್–ಆರ್‌ಐಎಸ್) ಜಾರಿಗೊಳಿಸಿದೆ.

ಇದುವರೆಗೆ ಎನ್‌ಪಿಎಸ್ ನಿವೃತ್ತರಿಗೆ ನಿಧಿ ಕ್ರೋಡೀಕರಣಕ್ಕೆ ಮಾತ್ರ ನೆರವಾಗುತ್ತಿತ್ತು. ಆದರೆ, ಹೊಸ ಯೋಜನೆಯು ನಿವೃತ್ತರ ವಯಸ್ಸಿಗೆ ತಕ್ಕಂತೆ ಹಣ ಹಿಂಪಡೆಯುವ ಆಯ್ಕೆಗಳನ್ನು ಪರಿಚಯಿಸಿದೆ. ಇದರಿಂದಾಗಿ ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿದವರಿಗೆ ನಿವೃತ್ತಿ ಜೀವನವನ್ನು ಸುಲಭವಾಗಿ ಕಳೆಯಲು ಯೋಜನೆ ಸಹಕಾರಿ ಎಂದು ವಿಶ್ಲೇಷಿಸಲಾಗಿದೆ.

ಎನ್‌ಪಿಎಸ್ ಯೋಜನೆ ಅನ್ವಯ ನಿವೃತ್ತರು ಒಟ್ಟು ಹೂಡಿಕೆ ಶೇ.20ರಷ್ಟು ಅಥವಾ ಶೇ.40ರಷ್ಟು ಭಾಗವನ್ನು ಮಾಸಿಕ ಪಿಂಚಣಿಯನ್ನಾಗಿ ಪಡೆಯಬಹುದು. ಇದು ಹಳೆಯ ನಿಯಮವಾಗಿದ್ದು, ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ, ಉಳಿದ ಹಣವನ್ನು ಹಲವು ರೀತಿಯಲ್ಲಿ ಹೂಡಿಕೆ ಮಾಡಲು ಆರ್‌ಐಎಸ್ ಯೋಜನೆ ಜಾರಿಗೊಳಿಸಲಾಗಿದೆ.

ಯೋಜನೆ ಜಾರಿಯ ಉದ್ದೇಶವೇನು?

ನಿವೃತ್ತರಿಗೆ ಎನ್‌ಪಿಎಸ್ ಅಡಿಯಲ್ಲಿ ಲಮ್‌ಸಮ್ ಆಗಿ (ಒಮ್ಮೆಯೇ) ಸಿಗುವ ಶೇ.60ರಷ್ಟು ಹಣವನ್ನು ಸದುಪಯೋಗ ಮಾಡಿಕೊಳ್ಳಲಿ, ಅವರಿಗೆ ಒಳ್ಳೆಯ ಹೂಡಿಕೆ ಆಯ್ಕೆಗಳು ಸಿಗಲಿ ಎಂಬ ದೃಷ್ಟಿಯಿಂದ ಹೊಸ ಯೋಜನೆ ಜಾರಿಗೊಳಿಸಲಾಗಿದೆ. ಹಿರಿಯ ನಾಗರಿಕರ ಬಳಿ ದೊಡ್ಡ ಮೊತ್ತ ಇರುವುದು ಸೈಬರ್ ಕ್ರೈಂ ಕಾಲದಲ್ಲಿ ಅಸುರಕ್ಷಿತವೇ ಸರಿ. ಅವರ ಹಣವನ್ನು ಸುರಕ್ಷಿತವಾಗಿ ಹೂಡಿಕೆ ಮಾಡಲು ಯೋಜನೆಯನ್ನು ಜಾರಿಗೊಳಿಸಲಾಗಿದೆ ಎಂದು ವರದಿಯಾಗಿದೆ.

ಎನ್‌ಪಿಎಸ್ ಚಂದಾದಾರರಿಗೆ 60 ವರ್ಷ ತುಂಬಿದಾಗ ಅವರ ಎನ್‌ಪಿಎಸ್ ಹೂಡಿಕೆಯ ಮೊತ್ತದಲ್ಲಿ ಶೇ.35ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲಾಗುತ್ತದೆ. ಅವರಿಗೆ 75 ವರ್ಷ ವಯಸ್ಸಾಗುವಷ್ಟರಲ್ಲಿ ಷೇರುಪೇಟೆ ಹೂಡಿಕೆ ಪ್ರಮಾಣವನ್ನು ಶೇ.10ಕ್ಕೆ ಇಳಿಸಲಾಗಿರುತ್ತದೆ. ಹಾಗೆಯೇ, 75ರಿಂದ 85 ವರ್ಷದವರೆಗೆ ಶೇ.10ರಷ್ಟು ಮೊತ್ತವನ್ನೇ ಹೂಡಿಕೆ ಮುಂದುವರಿಸಲಾಗಿರುತ್ತದೆ. ಇನ್ನು, ಉಳಿದ ಹಣವನ್ನು ಎಂದಿನಂತೆ ಕಾರ್ಪೊರೇಟ್ ಬಾಂಡ್‌ಗಳು ಹಾಗೂ ಸರಕಾರಿ ಸೆಕ್ಯುರಿಟೀಸ್‌ನಲ್ಲಿ ಹೂಡಿಕೆ ಮಾಡಲಾಗುತ್ತದೆ ಎಂದು ಪಿಎಫ್‌ಆರ್‌ಡಿಎ ತಿಳಿಸಿದೆ.

ನಿವೃತ್ತಿಯ ನಂತರ ಚಂದಾದಾರರು ಗರಿಷ್ಠ ಶೇ.40ರಷ್ಟು ಪಿಂಚಣಿ ಹೊರತಾಗಿ, ಶೇ.60ರಷ್ಟು ಮೊತ್ತವನ್ನು ಹೊಸ ಯೋಜನೆಯಲ್ಲಿ ಹೂಡಿಕೆ ಮಾಡಬಹುದಾಗಿದೆ. ಇದರಿಂದ ಹೂಡಿಕೆದಾರರಿಗೆ ಮಾಸಿಕ, ತ್ರೈಮಾಸಿಕ ಅಥವಾ ವರ್ಷಕ್ಕೊಮ್ಮೆ ಆದಾಯ ಲಭಿಸುತ್ತದೆ. ಇದರ ಆಯ್ಕೆಯನ್ನು ಹೂಡಿಕೆದಾರರಿಗೇ ನೀಡಲಾಗಿದೆ.

Bennett & Coleman
THE TIMES OF INDIA
ಭಾನುವಾರ,17 ಮೇ 2026 | ಪುಟಗಳು: 15+4 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
www.vijaykarnataka.com
ಸಂಪುಟ: 27 | ಸಂಚಿಕೆ: 136
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಯುವಕರನ್ನು ಟೀಕಿಸುವ ಉದ್ದೇಶವಿಲ್ಲ: ನಿರುದ್ಯೋಗಿ ಜಿರಳೆಗಳು ಹೇಳಿಕೆಗೆ ಸಿಜೆಐ ಸೂರ್ಯಕಾಂತ್ ಸ್ಪಷ್ಟನೆ

ಯಂಡಮೂರಿಗಾಗಿ ತೆಲುಗು ಕಲಿತೆ: ವಿಕ ಸಾಹಿತ್ಯ ಸರ್ಕಲ್

»ಲವಲVK ನೋಡಿ

ಮಹಾರಾಷ್ಟ್ರದ ಬಳಿಕ ದಿಲ್ಲಿ ಸರಕಾರದಿಂದಲೂ ವಿಮಾನ ಇಂಧನದ ಮೇಲೆ ವ್ಯಾಟ್ ಕಡಿತ

ಡಾಲರ್ ಏರಿಳಿತ, ಜಾಗತಿಕ ಬಿಕ್ಕಟ್ಟೇ ಹಳದಿ ಲೋಹದ ಹಿಂದಿರುವ ಆರ್ಥಿಕ ಗಣಿತ

ಲಾಕರ್‌ನಲ್ಲಿರುವ ಬಂಗಾರ ಈಗ ಉಳಿತಾಯವಲ್ಲ; ಮಹಿಳೆಯರ ಪಾಲಿಗೆ ದೊಡ್ಡ ಧೈರ್ಯ

ಚಿನ್ನದ ಬೆಲೆ ಏರಿಕೆಗೆ ಕಾರಣಗಳೇನು?

ವಿಕ ಮನಿ ವಿಶ್ಲೇಷಣೆ

ಹೊಸದಿಲ್ಲಿ: ಎರಡು ವರ್ಷಗಳ ಹಿಂದೆ 10 ಗ್ರಾಂ ಅಪರಂಜಿ ಚಿನ್ನಕ್ಕೆ 70 ಸಾವಿರ ರೂ.ಗೆ ಏರಿದಾಗ ಅದು ದೊಡ್ಡ ಮೊತ್ತವಾಗಿ ಕಾಣಿಸುತ್ತಿತ್ತು. ಆ ಮಟ್ಟದ ಏರಿಕೆಯನ್ನು ಯಾರೂ ಊಹಿಸಿರಲಿಲ್ಲ. ಆದರೆ ಈಗಿನ ದಾಖಲೆ ಬೆಲೆಯೇರಿಕೆ 1.5 ಲಕ್ಷ ರೂ. ಗಮನಿಸಿದರೆ, ಅಂದಿನ 70 ಸಾವಿರ ರೂ. ಎಷ್ಟೋ ವಾಸಿ ಎನಿಸುತ್ತಿದೆ. ಅಷ್ಟರಮಟ್ಟಿಗೆ ಹಳದಿ ಲೋಹದ ಬೆಲೆ ಗಗನಕ್ಕೇರಿದೆ.

ದೇಶದ ಬಹುತೇಕ ನಗರಗಳಲ್ಲಿ ಚಿನ್ನದ ಬೆಲೆ ಗರಿಷ್ಠ ಮಟ್ಟದಲ್ಲಿದೆ. ಈ ಬದಲಾವಣೆ ಕೇವಲ ಮಾರುಕಟ್ಟೆಯ ಅಂಕಿ-ಅಂಶಗಳಿಗೆ ಸೀಮಿತವಾಗಿಲ್ಲ; ಇದು ಜನರ, ಅದರಲ್ಲೂ ಮುಖ್ಯವಾಗಿ ಮಹಿಳೆಯರ ನಂಬಿಕೆ ಮತ್ತು ಆರ್ಥಿಕ ನಿರ್ಣಯಗಳ ಪ್ರತಿಬಿಂಬ. ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ಮದುವೆಯ ಬಜೆಟ್‌ಗಳು ತಲೆಕೆಳಗಾಗುತ್ತಿವೆ. ಗೃಹಿಣಿ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಲಾಕರ್‌ನಲ್ಲಿರುವ ಚಿನ್ನವು ಕೇವಲ ಅಲಂಕಾರಿಕ ವಸ್ತುವಾಗಿ ಉಳಿದಿಲ್ಲ; ಅದು ಅವರ ಆಪತ್ಕಾಲದ ಅತ್ಯಂತ ನಂಬಿಕಸ್ಥ, ಅಗತ್ಯಕ್ಕೆ ತಕ್ಷಣ ಬಳಸಿಕೊಳ್ಳಬಹುದಾದ ಸ್ವಾವಲಂಬಿ ಆಸ್ತಿಯಾಗಿ ಮಾರ್ಪಟ್ಟಿದೆ.

ಇದೆಲ್ಲದರ ಮಧ್ಯೆ, ಚಿನ್ನದ ಬೆಲೆ ಇಷ್ಟೊಂದು ಏರಲು ಕಾರಣವೇನು ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡುತ್ತಲೇ ಇದೆ. ಮೂರು ಕಾರಣಗಳನ್ನು 'ವಿಜಯ ಕರ್ನಾಟಕ'ದ ಸೋದರ ಪತ್ರಿಕೆ 'ವಿಕ ಮನಿ' ಪಟ್ಟಿಮಾಡಿದೆ.

1. ಕೇಂದ್ರ ಬ್ಯಾಂಕ್‌ಗಳ ಖರೀದಿ: ಜಗತ್ತಿನಾದ್ಯಂತ ಇರುವ ಕೇಂದ್ರೀಯ ಬ್ಯಾಂಕ್‌ಗಳು ತಮ್ಮ ಮೀಸಲು ನಿಧಿಯನ್ನು ನಿರ್ವಹಿಸುವ ವಿಧಾನವನ್ನು ಬದಲಾಯಿಸುತ್ತಿವೆ. ಡಾಲರ್ ಅವಲಂಬನೆಯನ್ನು ಕಡಿಮೆ ಮಾಡಲು ದಾಖಲೆ ಪ್ರಮಾಣದಲ್ಲಿ ಚಿನ್ನವನ್ನು ಸಂಗ್ರಹಿಸುತ್ತಿವೆ. ಈ ನಿರಂತರ ಜಾಗತಿಕ ಬೇಡಿಕೆಯು ಮಾರುಕಟ್ಟೆಗೆ ಭದ್ರವಾದ ನೆಲೆ ಒದಗಿಸಿದೆ.

2. ರೂಪಾಯಿ ಅಪಮೌಲ್ಯ, ಹಣದುಬ್ಬರದ ಒತ್ತಡ

ರೂಪಾಯಿ ಮತ್ತು ಡಾಲರ್ ನಡುವಿನ ವಿನಿಮಯ ದರವು ಸ್ಥಳೀಯ ಬೆಲೆಗಳನ್ನು ನೇರವಾಗಿ ನಿರ್ಧರಿಸುತ್ತದೆ. ಭಾರತದಲ್ಲಿ ಚಿನ್ನ ಮತ್ತು ಬೆಳ್ಳಿಯ ಸ್ಥಳೀಯ ಉತ್ಪಾದನೆ ತುಂಬ ಕಡಿಮೆ ಇರುವುದರಿಂದ ನಾವು ಹೆಚ್ಚಿನ ಮಟ್ಟದಲ್ಲಿ ಆಮದು ಮಾಡಿಕೊಳ್ಳುತ್ತೇವೆ. ಹೀಗಾಗಿ ರೂಪಾಯಿ ಮೌಲ್ಯ ಕುಸಿದಾಗ ಭಾರತದಲ್ಲಿ ಚಿನ್ನದ ಬೆಲೆ ನೇರವಾಗಿ ಏರುತ್ತದೆ. ಹೆಚ್ಚುತ್ತಿರುವ ಹಣದುಬ್ಬರದಿಂದಾಗಿ ನಗದಿನ ಮೌಲ್ಯ ಕುಸಿಯುತ್ತಿರುವುದರಿಂದ, ಮಧ್ಯಮ ವರ್ಗದ ಕುಟುಂಬಗಳು ಸಂಪತ್ತಿನ ರಕ್ಷಣೆಗಾಗಿ ಚಿನ್ನದ ಮೇಲಿನ ಹೂಡಿಕೆಯನ್ನು ಹೆಚ್ಚಿಸುತ್ತಿದ್ದಾರೆ.

3. ಭೌಗೋಳಿಕ ರಾಜಕೀಯ ಅನಿಶ್ಚಿತತೆ

ಜಾಗತಿಕ ಮಟ್ಟದಲ್ಲಿ ಯುದ್ಧದ ವಾತಾವರಣ, ಪೂರೈಕೆ ಸರಪಳಿಗಳಲ್ಲಿನ ವ್ಯತ್ಯಯ ಮತ್ತು ಅನಿಶ್ಚಿತತೆಯಿಂದಾಗಿ ದೊಡ್ಡ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾಗಿ ಚಿನ್ನದ ಮೇಲೆ ಹಣ ಹೂಡುತ್ತಿದ್ದಾರೆ.

25,000 ಟನ್ ದೇಶದ ಜನ ಹೊಂದಿರುವ ಅಂದಾಜು ಚಿನ್ನದ ಪ್ರಮಾಣ

41% ಚಿನ್ನದ ಮೇಲೆ ಹೂಡಿಕೆಗೆ ಕಳೆದ ಒಂದು ವರ್ಷದಲ್ಲಿ ಲಭಿಸಿದ ಲಾಭ

5 ವರ್ಷದಲ್ಲಿ ಚಿನ್ನದ ಬೆಲೆ ಏರಿಕೆ ರೂ.ಗಳಲ್ಲಿ (ಪ್ರತಿ 10 ಗ್ರಾಂಗೆ)

ವರ್ಷ	24 ಕ್ಯಾರೆಟ್	22 ಕ್ಯಾರೆಟ್
2022	52,670	48,280
2023	65,330	59,890
2024	77,913	71,350
2025	1,36,470	1,25,100
2026	1,56,930	1,43,850

ಮತ್ತೆರಡು ಆಕರ್ಷಣೆಗಳು !

● ಸುಲಭ ಸಾಲದ ಸೆಳೆತ: ಇತ್ತೀಚಿನ ದಿನಗಳಲ್ಲಿ ಸಾಲ ಪಡೆಯುವ ವಿಧಾನಗಳೇ ಬದಲಾಗಿವೆ. ವಿವಿಧ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಸಾಲ ನೀಡಿಕೆಗೆ ಚಿನ್ನವನ್ನೇ ಅಗ್ರ ಪ್ರಾಶಸ್ತ್ಯದ ಆಧಾರವಾಗಿ ಪರಿಗಣಿಸುತ್ತಿವೆ. ಪರ್ಸನಲ್ ಲೋನ್ ಅಥವಾ ಇತರ ಸಾಲಗಳನ್ನು ಪಡೆಯುವಾಗ ಹತ್ತಾರು ದಾಖಲೆಗಳನ್ನು ನೀಡಬೇಕು ಮತ್ತು ದೀರ್ಘ ಪ್ರಕ್ರಿಯೆ ಇರುತ್ತದೆ. ಆದರೆ, ಚಿನ್ನದ ಒಡವೆ ಇಟ್ಟು 'ಗೋಲ್ಡ್ ಲೋನ್' ಪಡೆಯುವುದು ಅತ್ಯಂತ ಸುಲಭವಾಗಿದೆ.

● ಭಾರತೀಯ ನಾರಿ ಧೋರಣೆ!

ಕಷ್ಟಕಾಲದಲ್ಲಿ ಯಾರದೋ ಮುಂದೆ ಕೈಚಾಚುವ ಬದಲು, ನಮ್ಮದೇ ಚಿನ್ನವನ್ನು ಅಡಮಾನ ಇಟ್ಟು ಕಡಿಮೆ ಬಡ್ಡಿದರದಲ್ಲಿ ಸುಲಭವಾಗಿ ಸಾಲ ಪಡೆಯಬಹುದು ಎಂಬ ವಿಶ್ವಾಸ ಮಹಿಳೆಯರಲ್ಲಿದೆ. ಇತ್ತೀಚಿನ ದಿನಗಳಲ್ಲಿ ಕೇವಲ ಆಭರಣಗಳಿಗಾಗಿ ಮಾತ್ರವಲ್ಲದೆ, ಭವಿಷ್ಯದ ಸುರಕ್ಷತೆಗಾಗಿ ಮಹಿಳೆಯರು ಚಿನ್ನ ಖರೀದಿಗೆ ಮುಂದಾಗುತ್ತಿದ್ದಾರೆ. ಮಹಿಳೆಯರ ಪಾಲಿಗೆ ಚಿನ್ನ ಎಂಬುದು ಕೇವಲ 'ಅಲಂಕಾರ'ವಲ್ಲ, ಅದು ಅವರ ಬದುಕಿನ ಅತ್ಯುನ್ನತ ಆರ್ಥಿಕ ಸ್ವಾತಂತ್ರ್ಯ ಮತ್ತು ಗೌರವದ ಸಂಕೇತ ಎಂಬುದನ್ನು ಈ ಬೆಲೆಯೇರಿಕೆಯ ಟ್ರೆಂಡ್ ಮತ್ತೊಮ್ಮೆ ಸಾಬೀತುಪಡಿಸಿದೆ.

ತ್ರಿಭಾಷಾ ಕಲಿಕೆ ಕಡ್ಡಾಯ: CBSE

10ನೇ ತರಗತಿಗೆ ತೃತೀಯ ಭಾಷೆ ಬೋರ್ಡ್ ಎಕ್ಸಾಂ ಇಲ್ಲ

ಹೊಸದಿಲ್ಲಿ: ಕರ್ನಾಟಕದಲ್ಲಿ ಹಿಂದಿ ಭಾಷೆ ವಿವಾದದ ಬೆನ್ನಲ್ಲೇ ಈಗ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ(ಸಿಬಿಎಸ್‌ಇ) ಕಡ್ಡಾಯ ತ್ರಿಭಾಷಾ ಸೂತ್ರ ಸದ್ದು ಮಾಡುತ್ತಿದೆ.

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು 9ನೇ ತರಗತಿಯಿಂದ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿ ಮೂರು ಭಾಷೆಗಳ ಓದುವಿಕೆಯನ್ನು ಕಡ್ಡಾಯಗೊಳಿಸಿದೆ. ಜುಲೈ 1ರಿಂದ ಆರಂಭವಾಗಲಿರುವ 2026-27ನೇ ಸಾಲಿನ ಶೈಕ್ಷಣಿಕ ವರ್ಷದಿಂದಲೇ ಹೊಸ ಭಾಷಾ ನೀತಿ ಅನ್ವಯವಾಗಲಿದೆ ಎಂದು ಸಿಬಿಎಸ್‌ಇ ತಿಳಿಸಿದೆ.

ಆದರೆ, ಮೂರು ಭಾಷೆಗಳ ಪೈಕಿ ಎರಡು ಸ್ಥಳೀಯ ಅಥವಾ ಭಾರತೀಯ ಭಾಷೆಗಳೇ ಆಗಿರಬೇಕು ಎಂದು ಕಡ್ಡಾಯಗೊಳಿಸಲಾಗಿದೆ. ಒಂದು ವೇಳೆ ವಿದೇಶಿ ಭಾಷೆಯನ್ನು ಓದಲು ಬಯಸಿದರೆ, ಅದನ್ನು ಮೂರನೇ ಭಾಷೆಯಾಗಿ ಪರಿಗಣಿಸಬಹುದು. ಅಥವಾ ಐಚ್ಛಿಕವಾಗಿ ನಾಲ್ಕನೇ ಭಾಷೆಯಾಗಿ ವಿದೇಶಿ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು ಎಂಬ ಆಯ್ಕೆಯನ್ನು ಸಿಬಿಎಸ್‌ಇ ನೀಡಿದೆ.

ಆದರೆ, 10ನೇ ತರಗತಿಗೆ ತೃತೀಯ ಭಾಷೆಯ(ಆರ್3) ಬೋರ್ಡ್ ಪರೀಕ್ಷೆ ಇರುವುದಿಲ್ಲ. ಅದರ ಬದಲಿಗೆ, ಶಾಲಾ ಮಟ್ಟದಲ್ಲೇ ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಲಾಗುವುದು. ವಿದ್ಯಾರ್ಥಿಗಳ ಭಾಷಾ ನೈಪುಣ್ಯತೆ ಅಥವಾ ಪರೀಕ್ಷೆಯಲ್ಲಿ ಅವರ ಕಾರ್ಯಕ್ಷಮತೆಯನ್ನು ಅಂತಿಮ ಅಂಕಪಟ್ಟಿ ಅಥವಾ ಪ್ರಮಾಣಪತ್ರದಲ್ಲಿ ತೋರಿಸಲಾಗುವುದು ಎಂದು ಸಿಬಿಎಸ್‌ಇ ತಿಳಿಸಿದೆ.

ರಾಜ್ಯದ ವೈದ್ಯಕೀಯ ಶಿಕ್ಷಣಕ್ಕೆ ಬೂಸ್ಟ್

ಕರ್ನಾಟಕಕ್ಕೆ ಹೆಚ್ಚುವರಿ 1,122 ಮೆಡಿಕಲ್ ಸೀಟುಗಳ ಭಾರಿ ಬಂಪರ್

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯಕ್ಕೆ ಹೆಚ್ಚುವರಿಯಾಗಿ 1122 ವೈದ್ಯಕೀಯ ಸೀಟುಗಳು ಲಭ್ಯವಾಗಲಿದ್ದು, ಈ ಕ್ಷೇತ್ರದಲ್ಲಿ ಸಾಧನೆ ಮಾಡಲು ಬಯಸುವವರಿಗೆ ಸುವರ್ಣ ಅವಕಾಶ ದೊರೆಯಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದರು.

ವಿಕಾಸಸೌಧದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ನಮ್ಮ ರಾಜ್ಯವು ವೈದ್ಯಕೀಯ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ರಾಜ್ಯಕ್ಕೆ ದೊರೆತಿರುವ ಹೆಚ್ಚುವರಿ ಸೀಟುಗಳು ಕೊಪ್ಪಳ, ಗದಗ, ಚಾಮರಾಜನಗರ, ಉತ್ತರ ಕನ್ನಡ, ಕೊಡಗು ಸೇರಿದಂತೆ ಇತರೆ ಜಿಲ್ಲೆಗಳಿಗೆ ಸಿಗಲಿವೆ,'' ಎಂದರು.

''ಪದವಿಪೂರ್ವ ಸೀಟುಗಳಿಗೆ ಕೇಂದ್ರ ಸರಕಾರದಿಂದ 495 ಕೋಟಿ ರೂ. ಅನುದಾನ ಸಿಗಲಿದೆ. ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೆ 541 ಕೋಟಿ ರೂ. ಅನುದಾನ ಲಭ್ಯವಾಗಲಿದೆ. ರಾಜ್ಯಕ್ಕೆ ಒಟ್ಟು 1,090 ಕೋಟಿ ರೂ. ಅನುದಾನ ದೊರಕಲಿದೆ,'' ಎಂದು ಹೇಳಿದರು.

''ರಾಜ್ಯಕ್ಕೆ ಒಂದು ಸಾವಿರ ಮೆಡಿಕಲ್ ಸೀಟು ಸಿಕ್ಕಿರುವುದು ದಾಖಲೆಯಾಗಿದೆ. ಕರ್ನಾಟಕದ ಸಾಧನೆಗೆ ಇದು ಪೂರಕವಾದ ಸಾಕ್ಷಿಯಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡುವವರಿಗೆ ಕರ್ನಾಟಕದಲ್ಲಿ ವಿಫುಲ ಅವಕಾಶಗಳು ದೊರೆಯಲಿವೆ,'' ಎಂದು ಮಾಹಿತಿ ನೀಡಿದರು.

''ರಾಜ್ಯದಲ್ಲಿ ಖಾಸಗಿ, ಡೀಮ್ಡ್ ಸೇರಿ ಒಟ್ಟು 72 ವೈದ್ಯಕೀಯ ಕಾಲೇಜುಗಳಿವೆ. 13,945 ಯುಜಿ ಸೀಟುಗಳು ಹಾಗೂ 7,727 ಪಿಜಿ ಸೀಟುಗಳು ಲಭ್ಯವಾಗಲಿವೆ,'' ಎಂದು ಮಾಹಿತಿ ನೀಡಿದರು.

ವಿದೇಶಿಯರಿಂದ ವೋಟಿಂಗ್?

ತಮಿಳುನಾಡು ಚುನಾವಣೆ

ಚೆನ್ನೈ: ಏಪ್ರಿಲ್ 23ರಂದು ನಡೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅಕ್ರಮವಾಗಿ ವಿದೇಶಿ ಪ್ರಜೆಗಳು ಮತ ಚಲಾಯಿಸಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಚುನಾವಣಾ ಆಯೋಗ ತನಿಖೆಗೆ ಮುಂದಾಗಿದೆ.

ಮತದಾನ ಪ್ರಕ್ರಿಯೆ ಆರಂಭವಾದ ಸ್ವಲ್ಪ ಸಮಯದ ನಂತರ ಚೆನ್ನೈ ಮತ್ತು ಮದುರೈ ಏರ್‌ಪೋರ್ಟ್‌ಗಳಲ್ಲಿ ವಿಮಾನ ಹತ್ತಲು ಯತ್ನಿಸುತ್ತಿದ್ದ 10 ವಿದೇಶಿ ಪ್ರಜೆಗಳನ್ನು ಪೊಲೀಸರು ಬಂಧಿಸಿ, ವರದಿ ಸಲ್ಲಿಸಿದ ನಂತರ ಆಯೋಗ ಕ್ರಮಕ್ಕೆ ಮುಂದಾಗಿದೆ.

ಬಂಧಿತ ವ್ಯಕ್ತಿಗಳ ತೋರು ಬೆರಳುಗಳಲ್ಲಿ ಅಳಿಸಲಾಗದ ಶಾಯಿ ಗುರುತನ್ನು ಗಮನಿಸಿದ ನಂತರ ವಿಮಾನ ನಿಲ್ದಾಣದ ಅಧಿಕಾರಿಗಳು ಅನುಮಾನಗೊಂಡು, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಂಧಿತರು ಶ್ರೀಲಂಕಾ, ಬ್ರಿಟನ್ ಮತ್ತು ಕೆನಡಾದ ಪ್ರಜೆಗಳು ಎಂದು ತನಿಖೆಯ ಬಳಿಕ ತಿಳಿದುಬಂದಿದೆ.

ಬಿಡದಿ ಟೌನ್‌ಶಿಪ್ ವಿರುದ್ಧ ಸಮರ

ಬೆಂಗಳೂರು: ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ 'ಗ್ರೇಟರ್ ಬೆಂಗಳೂರು ಇಂಟೆಗ್ರೇಟೆಡ್ ಟೌನ್‌ಶಿಪ್' ವಿರುದ್ಧ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಹೋರಾಟ ಪ್ರಕಟಿಸಿದ್ದಾರೆ.

''ಟೌನ್‌ಶಿಪ್ ಹೆಸರಿನಲ್ಲಿ ಭೂದಂಧೆ ನಡೆಯುತ್ತಿದ್ದು, ರೈತರ ಜಮೀನು ವಶಪಡಿಸಿಕೊಂಡು ಅನ್ಯಾಯ ಮಾಡಲು ಬಿಡುವುದಿಲ್ಲ,'' ಎಂದು ಗುಡುಗಿದ್ದಾರೆ.

ಜೆಡಿಎಸ್ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ದೇವೇಗೌಡರು, ''ಸಾಮಾಜಿಕ ನ್ಯಾಯದ ಪ್ರತಿಪಾದಕರಾದ ತಾವು ಬೆಂಗಳೂರು ನಗರದ ಉಸ್ತುವಾರಿ ವಹಿಸಿರುವ ವ್ಯಕ್ತಿ ಒತ್ತಡಕ್ಕೆ ಮಣಿದು ರೈತರಿಗೆ ಅನ್ಯಾಯ ಮಾಡಬೇಡಿ,'' ಎಂದು ಸಿಎಂ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

''ಟೌನ್‌ಶಿಪ್ ಹೆಸರಿನಲ್ಲಿ ರೈತರ ಜಮೀನು ಕಿತ್ತುಕೊಂಡು ದಂಧೆ ನಡೆಸಲು ಹೊರಟಿದ್ದಾರೆ. ಈ ದಂಧೆ ವಿರುದ್ಧ ಹೋರಾಟ ಕೈಗೆತ್ತಿಕೊಳ್ಳುತ್ತೇನೆ,'' ಎಂದು ಘೋಷಿಸಿದರು.

ವಿವರ»03

ಕೇಂದ್ರ ಸಚಿವರ ಪುತ್ರ ಭಗೀರಥ್ ಶರಣು

ಪೋಕ್ಸೊ ಕೇಸ್

ಹೈದರಾಬಾದ್: ಕೇಂದ್ರ ಸಚಿವ ಬಂಡಿ ಸಂಜಯ್ ಕುಮಾರ್ ಅವರ ಪುತ್ರ ಬಂಡಿ ಭಗೀರಥ್ ಅವರ ವಿರುದ್ಧ ಸೈಬರಾಬಾದ್ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿ ಮಾಡಿದ ಬೆನ್ನಲ್ಲೇ, ಅವರು ಪೋಕ್ಸೊ ಪ್ರಕರಣದಲ್ಲಿ ಪೊಲೀಸರ ಮುಂದೆ ಶರಣಾಗಿದ್ದಾರೆ.

ಆರೋಪಿ ಭಗೀರಥ್ ದೇಶ ಬಿಟ್ಟು ಪಲಾಯನ ಮಾಡುವುದನ್ನು ತಡೆಯಲು ಪೊಲೀಸರು ಲುಕ್ ಔಟ್ ನೋಟಿಸ್ ಜಾರಿ ಮಾಡಿದ್ದರು. ಇದಾದ ಬಳಿಕ ಭಗೀರಥ್ ತಮ್ಮ ವಕೀಲರ ಮೂಲಕ ಪೊಲೀಸರಿಗೆ ಶರಣಾಗಿದ್ದಾರೆ.

''ಕಾನೂನಿನ ಮೇಲಿನ ಗೌರವದಿಂದಾಗಿ ವಕೀಲರ ಮೂಲಕ ಮಗನನ್ನು ಪೊಲೀಸ್ ತನಿಖೆಗೆ ಒಪ್ಪಿಸಿದ್ದೇವೆ,'' ಎಂದು ಬಂಡಿ ಸಂಜಯ್ ಕುಮಾರ್ ಹೇಳಿದ್ದಾರೆ.

''ದೂರು ದಾಖಲಾದ ತಕ್ಷಣವೇ ಮಗನನ್ನು ಪೊಲೀಸರಿಗೆ ಒಪ್ಪಿಸಲು ನಿರ್ಧರಿಸಲಾಗಿತ್ತು. ಆದರೆ, ವಕೀಲರೊಂದಿಗೆ ಸಮಾಲೋಚನೆ ನಡೆಸಿದೆವು. ಆದ್ದರಿಂದ ಕೊಂಚ ವಿಳಂಬವಾಯಿತು. ನನ್ನ ಮಗನೇ ಇರಲಿ ಅಥವಾ ಸಾಮಾನ್ಯ ಪ್ರಜೆಯೇ ಇರಲಿ, ಕಾನೂನಿನ ಮುಂದೆ ಎಲ್ಲರೂ ಸಮಾನ,'' ಎಂದು ಸಚಿವರು ಹೇಳಿದ್ದು, ''ನನ್ನ ಮಗ ಯಾವುದೇ ತಪ್ಪು ಮಾಡಿಲ್ಲ ಎಂದು ಪದೇಪದೆ ಹೇಳುತ್ತೇನೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

3, 4ನೇ ಮಗುವಿಗೆ ಪ್ರೋತ್ಸಾಹಧನ

ಆಂಧ್ರದಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಯೋಜನೆ

ಅಮರಾವತಿ: ಆಂಧ್ರಪ್ರದೇಶದಲ್ಲಿ ಮಕ್ಕಳ ಜನನ ಪ್ರಮಾಣ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಸಿಎಂ ಎನ್. ಚಂದ್ರಬಾಬು ನಾಯ್ಡು ಅವರು ಹೊಸ ನಿರ್ಧಾರ ಪ್ರಕಟಿಸಿದ್ದಾರೆ. ಮೂರನೇ ಮಗು ಹೊಂದುವ ದಂಪತಿಗೆ 30 ಸಾವಿರ ರೂ. ಹಾಗೂ ನಾಲ್ಕನೇ ಮಗುವಿಗೆ 40 ಸಾವಿರ ರೂ. ಪ್ರೋತ್ಸಾಹಧನ ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಶ್ರೀಕಾಕುಲಂ ಜಿಲ್ಲೆಯ ನರಸಣ್ಣಪೇಟದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಈ ಯೋಜನೆ ಪ್ರಕಟಿಸಿದ್ದಾರೆ.

ಆಂಧ್ರಪ್ರದೇಶದಲ್ಲಿ ಸರಾಸರಿ ಜನನ ಪ್ರಮಾಣ(ಫಲವತ್ತತೆ ದರ) 1.5ಕ್ಕೆ ಕುಸಿದಿದೆ. ಜನಸಂಖ್ಯೆ ಸ್ಥಿರವಾಗಿರಲು ಮಹಿಳೆಯರ ಫಲವತ್ತತೆ ಪ್ರಮಾಣವು ಸರಾಸರಿ 2.1ರಷ್ಟು ಇರಬೇಕು. ಅಲ್ಲದೆ, ಆಂಧ್ರಪ್ರದೇಶದಲ್ಲಿ ಜನನ ಪ್ರಮಾಣವು 2040ರ ವೇಳೆಗೆ 1.2ಕ್ಕೆ ಕುಸಿಯಲಿದೆ ಎಂದು ಹೇಳಲಾಗುತ್ತಿದೆ. ಹಾಗಾಗಿ, ಒಂದು ಕಾಲದಲ್ಲಿ ಜನಸಂಖ್ಯೆ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿದ್ದ ಆಂಧ್ರ ಸರಕಾರ ಈಗ ಮಕ್ಕಳನ್ನು ಹೆರಲು ಪ್ರೋತ್ಸಾಹಿಸುತ್ತಿದೆ.

ಪ್ರಶ್ನೆ: ನನ್ನ ಆರೋಗ್ಯ ಸುಧಾರಣೆ ಯಾವಾಗ?
ಜನ್ಮದಿನ: 21.07.1990 **ನಕ್ಷತ್ರ:** ಪುನರ್ವಸು
ಪರಿಹಾರ: 35 ವರ್ಷದ ನೀವು ಈ ಸಂಖ್ಯೆಯನ್ನು ತಿರುಗಿಸಿದರೆ 53 ಆಗುತ್ತದೆ. ಆದ್ದರಿಂದ 35 ಅನ್ನು ಕೂಡಿಸಿದರೆ ಆತ್ಮ ಬಲ ಆಯುಷ್ಯವಿರುವ ನಿಮಗೆ ಅಷ್ಟಮಶನಿ, ದೈವಬಲ ಈಗ ಕ್ಷೀಣಿಸಿದೆ. ಜನ್ಮಾಂತರದ ಪುಣ್ಯವು ದೂರದಲ್ಲಿ ಉಳಿದಿದೆ. ಇಷ್ಟಾದರೂ ನಿಮ್ಮದು ಶ್ರೀರಾಮನ ನಕ್ಷತ್ರವಾಗಿದ್ದು ದೇವಗಣವಾಗಿದೆ. ಈ ನಕ್ಷತ್ರದಲ್ಲಿ ಜನಿಸಿದವರು ದೀರ್ಘಕಾಲದ ಆರೋಗ್ಯ ಸಮಸ್ಯೆಯಲ್ಲಿ ಸಿಲುಕುವುದಿಲ್ಲ. ಒಳ್ಳೆಯ ವೈದ್ಯರನ್ನು ಕಂಡು ಸೂಕ್ತ ಔಷಧವನ್ನು ತೆಗೆದುಕೊಳ್ಳಿ. ಪ್ರತಿ ತಿಂಗಳು ಕುಕ್ಕೆ ಸುಬ್ರಹ್ಮಣ್ಯಕ್ಕೆ ತೆರಳಿ ದರ್ಶನ ಮಾಡಿ, ಉರುಳು ಸೇವೆ ಮಾಡಿ ಬಣ್ಣ ಶರೀರವು ರೋಗ ಮುಕ್ತವಾಗುತ್ತದೆ. ಜತೆಗೆ ಧನ್ವಂತರಿಯನ್ನು ಪ್ರಾರ್ಥಿಸಿ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್‌ಆ್ಯಪ್ ಸಂಖ್ಯೆ: 6366422240

ಪಂಚಾಂಗ 17-05-2026

ಪರಾಭವನಾಮ ಸಂವತ್ಸರ
ಆಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಶುಕ್ಲ. **ಮಳೆ ನಕ್ಷತ್ರ:** ಕೃತ್ತಿಕಾ. **ನಿತ್ಯನಕ್ಷತ್ರ:** ಕೃತ್ತಿಕಾ.
ತಿಥಿ: ಪಾಡ್ಯ. **ಯೋಗ:** ಶೋಭನ.
ಕರಣ: ಕಿಂಸ್ತುಘ್ನ.
ವಾರ: ಭಾನುವಾರ.

ರಾಹು ಕಾಲ: ಸಂ. 4.30-6.00
ಗುಳಿಕ ಕಾಲ: ಮ. 3.00-4.30
ಯಮಗಂಡ ಕಾಲ: ಮ. 12.00-1.30
ಸೂರ್ಯ ಉದಯ: ಬೆ. 5.56
ಸೂರ್ಯ ಅಸ್ತ: ಸಂ.6.37

ಏಕಕಾಲಕ್ಕೆ ಚುನಾವಣೆ, ₹7 ಲಕ್ಷ ಕೋಟಿ ಉಳಿತಾಯ

ರಾಜ್ಯದ ಭಿನ್ನ ಅಹವಾಲು ಸ್ವೀಕರಿಸಿದ ಚೌಧರಿ ನೇತೃತ್ವದ ಸಮಿತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಒಂದು ರಾಷ್ಟ್ರ ಒಂದು ಚುನಾವಣೆ ಸಂಬಂಧ ಮಾಹಿತಿ ಸಂಗ್ರಹಕ್ಕೆ ಆಗಮಿಸಿದ್ದ ಪಿ.ಪಿ. ಚೌಧರಿ ಅಧ್ಯಕ್ಷತೆಯ ಜಂಟಿ ಸಂಸದೀಯ ಸಮಿತಿ ಮುಂದೆ ರಾಜ್ಯದ ಭಿನ್ನ ಅಭಿಪ್ರಾಯ ದಾಖಲಾಯಿತು.

ಬೆಂಗಳೂರಿನ ಎರಡು ದಿನಗಳ ವಿವಿಧ ಪಾಲುದಾರರು, ರಾಜಕೀಯ ಪಕ್ಷಗಳ ಹಾಗೂ ಸಂಘ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ, ''ದೇಶದಲ್ಲಿ ಆರ್ಥಿಕ ಸ್ಥಿರತೆ ಬರಬೇಕಾದರೆ ಒಂದು ರಾಷ್ಟ್ರ-ಒಂದು ಚುನಾವಣೆಯಿಂದ ಮಾತ್ರ ಸಾಧ್ಯ. ಹಾಗೆ ದೇಶಾದ್ಯಂತ ಏಕಕಾಲಕ್ಕೆ ಚುನಾವಣೆ ನಡೆಯುವುದರಿಂದ 7 ಲಕ್ಷ ಕೋಟಿ ರೂಪಾಯಿ ಉಳಿತಾಯ ವಾಗಲಿದೆ,'' ಎಂದು ಹೇಳಿದರು.

''ಲೋಕಸಭೆ ಹಾಗೂ ಎಲ್ಲಾ ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕೆನ್ನುವ ಪ್ರಸ್ತಾವ ಸಮಿತಿಯ ಮುಂದೆ ಪರಿಶೀಲನೆಯಲ್ಲಿದೆ. ಚುನಾವಣಾ ಆಯೋಗ ಕೂಡ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಸಮ್ಮತಿಸಿದೆ. ನೀತಿ ಆಯೋಗ ಕೂಡ ಎನ್‌ಒ ಬಯಸಿದೆ. ಸಾರ್ವಜನಿಕರ ಅಭಿಪ್ರಾಯ ಪಡೆಯುವ ಉದ್ದೇಶದಿಂದ ಈ ಪ್ರಸ್ತಾವ ಪರಿಶೀಲನೆಯಲ್ಲಿದೆ. ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದ ಕಾಲದಲ್ಲಿ ಕೂಡ ಅದರ ಬಗ್ಗೆ ಚರ್ಚೆ ನಡೆಸಲಾಗಿತ್ತು, ಆದರೆ ಜಾರಿಗೊಳಿಸಲಾಗಿರಲಿಲ್ಲ,'' ಎಂದರು.

''ಪ್ರಧಾನಿ ಮೋದಿ ಅವರು ರಾಷ್ಟ್ರದ ಹಿತದೃಷ್ಟಿಯಿಂದ ಏಕಕಾಲದಲ್ಲಿ ಚುನಾವಣೆ ಗಳನ್ನು ಮಾಡಲು ಬಯಸಿದ್ದರು. ಅದಕ್ಕಾಗಿ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿ ವರದಿಯನ್ನು ಈಗಾಗಲೇ ನೀಡಿದೆ. ಅದರ ಸಾಧಕ ಬಾಧಕಗಳ ಬಗ್ಗೆ ಅಧ್ಯಯನ ಮಾಡುವ ಹೊಣೆಯನ್ನು ಜಂಟಿ ಸಂಸದೀಯ ಸಮಿತಿಗೆ ವಹಿಸಲಾಗಿದೆ. ಅದರಂತೆ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಸೇರಿದಂತೆ ಹಲವು ತಜ್ಞರ ಜತೆ ಸಮಿತಿ ಚರ್ಚೆ ನಡೆಸಿದೆ. ನ್ಯಾಯಮೂರ್ತಿಗಳಿಂದಲೂ ಅಭಿಪ್ರಾಯ ಸಂಗ್ರಹ ಮಾಡಲಾಗಿದೆ. ಜತೆಗೆ ಎಲ್ಲಾ ರಾಜ್ಯಗಳಿಂದ ಅಭಿಪ್ರಾಯ ಸಂಗ್ರಹ ಮಾಡಲಾಗುತ್ತಿದೆ,'' ಎಂದು ಚೌಧರಿ ಹೇಳಿದರು.



ಜಂಟಿ ಸಂಸದೀಯ ಸಮಿತಿಯ ಸದಸ್ಯರೊಂದಿಗೆ ರಾಜ್ಯದ ಡಿಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ವೀರಪ್ಪ ಮೊಯ್ಲಿ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತಿತರರು.

ಏಕಕಾಲಕ್ಕೆ ಚುನಾವಣೆ ನಡೆಸುವುದು ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಆರ್ಥಿಕ ಉಳಿತಾಯದ ದೃಷ್ಟಿಯಿಂದಲೂ ಉತ್ತಮವಾದುದು. ಈ ವ್ಯವಸ್ಥೆ ಎಲ್ಲರಿಗೂ ಅನುಕೂಲಕರವಾಗಿದೆ.
-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯಗಳು ದುರ್ಬಲ ಎಂದ ಕಾಂಗ್ರೆಸ್

ಕೇಂದ್ರ ಸರಕಾರದ ಉದ್ದೇಶಿತ 'ಒಂದು ರಾಷ್ಟ್ರ ಒಂದು ಚುನಾವಣೆ' ಪ್ರಸ್ತಾವನೆಯನ್ನು ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಪ್ರಬಲವಾಗಿ ವಿರೋಧಿಸಿ, ರಾಜ್ಯ ವಿಧಾನಸಭೆಯಲ್ಲಿ ಈಗಾಗಲೇ ಅಂಗೀಕರಿಸಿರುವ ನಿರ್ಣಯವನ್ನು ಸಭೆಯಲ್ಲಿ ಓದಿದ ಬಳಿಕ ಸಮಿತಿಯ ಅಧ್ಯಕ್ಷ ಪಿ.ಪಿ. ಚೌಧರಿ ಅವರಿಗೆ ಸಲ್ಲಿಸಿದರು.

'ಒಂದು ದೇಶ ಒಂದು ಚುನಾವಣೆ' ಇದೊಂದು ರಾಜಕೀಯ ಪ್ರೇರಿತವಾಗಿದ್ದು, ರಾಜ್ಯ ಗಳನ್ನು ದುರ್ಬಲಗೊಳಿಸುವ ಮೂಲಕ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರಲಿದೆ. ಕೇಂದ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿರುವವರ ಅನುಕೂಲಕ್ಕೆ ತಕ್ಕಂತೆ ಹೆಣೆಯಲಾಗುತ್ತಿರುವ ಈ ಪ್ರಸ್ತಾವನೆಯನ್ನು ತಿರಸ್ಕರಿಸುತ್ತೇನೆ,'' ಎಂದು ಸ್ಪಷ್ಟಪಡಿಸಿದರು.

''ಒಂದು ವೇಳೆ ರಾಜಕೀಯ ಅಸ್ಥಿರತೆ, ಅವಿಶ್ವಾಸ ಅಥವಾ ಬಹುಮತದ ಕೊರತೆಯಿಂದ ಸರಕಾರವೊಂದು ಅರ್ಧಾವಧಿಯಲ್ಲೇ ಉರುಳಿ ಹೋದರೆ ಆಗ ಏನು ಮಾಡುವುದು? ಇದಕ್ಕೆ ಪರಿಹಾರ ಎಲ್ಲಿದೆ? ಒಂದೊಂದು ರಾಜ್ಯದಲ್ಲಿ ಒಂದೊಂದು ಅವಧಿಗೆ ಚುನಾವಣೆ ನಡೆಯುತ್ತದೆ. ನಾನಾ ಕಾಲಾವಧಿಯ ವಿಧಾನಸಭೆ ಚುನಾವಣೆ ಗಳನ್ನು ಒಂದೇ ಬಾರಿಗೆ ನಡೆಸುವುದು ಹೇಗೆ? ಇದು ಕಾರ್ಯಸಾಧುವಲ್ಲ,'' ಎಂದು ಹೇಳಿದರು.

ಪ್ರಾದೇಶಿಕ ಪಕ್ಷಕ್ಕೆ ಧಕ್ಕೆಯಾಗದಿರಲಿ: ಜೆಡಿಎಸ್

ಸಂಸದ ಎಂ.ಮಲ್ಲೇಶ್‌ಬಾಬು ಅವರ ನೇತೃತ್ವದ ಜೆಡಿಎಸ್ ಪ್ರಮುಖರ ನಿಯೋಗವು,''ಏಕಕಾಲಕ್ಕೆ ನಡೆಯುವ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳ ಅಬ್ಬರದ ಪ್ರಚಾರದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಧಕ್ಕೆಯಾಗದ ರೀತಿಯಲ್ಲಿ ತಿದ್ದುಪಡಿ ತರಬೇಕು. ಸಮ್ಮಿಶ್ರ ಸರಕಾರಗಳ ಸ್ಥಿರತೆಗೆ ಕಾನೂನಿನ ರಕ್ಷಣೆ ಒದಗಿಸಬೇಕು. ಪ್ರಸ್ತಾಪಿತ ಸಾಂವಿಧಾನಿಕ ತಿದ್ದುಪಡಿಯಲ್ಲಿ ಕೇಂದ್ರ ಚುನಾವಣಾ ಆಯೋಗವು ಯಾವುದೇ ರಾಜ್ಯದ ಚುನಾವಣೆ ಮುಂದೂಡಲು ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಲು ವಿಶೇಷ ಅಧಿಕಾರ ನೀಡುವ ಅಂಶವಿದ್ದು, ಇದಕ್ಕೆ ಸೂಕ್ತ ತಿದ್ದುಪಡಿ ಅಗತ್ಯವಿದೆ,'' ಎಂದು ತಿಳಿಸಿತು.

ರಾಜ್ಯ ಕಾಂಗ್ರೆಸ್ ಸರಕಾರ ಮೂರು ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ನಡೆಯಲಿರುವ ಸಮಾರಂಭಕ್ಕೆ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಶನಿವಾರ ಪ್ರತ್ಯೇಕವಾಗಿ ಭೇಟಿ ಮಾಡಿ ಆಹ್ವಾನ ನೀಡಿದರು.

ಶಿಕ್ಷಣ ನೀತಿ ಶಿಫಾರಸು: ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಉಪ ಸಮಿತಿ ರಚನೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬದಲಿಗೆ ರಾಜ್ಯ ಶಿಕ್ಷಣ ನೀತಿ ಜಾರಿ ಮಾಡುವ ಸಂಬಂಧ ಪ್ರೊ.ಸುಖದೇವ್ ಥೋರಟ್ ಆಯೋಗದ ಅಂತಿಮ ವರದಿಯನ್ನು ಪರಿಶೀಲಿಸಿ ಸೂಕ್ತ ಶಿಫಾರಸು ಮಾಡಲು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿ ರಚನೆ ಮಾಡಿ ಸರಕಾರ ಶನಿವಾರ ಆದೇಶ ಹೊರಡಿಸಿದೆ. ಕಾನೂನು ಸಚಿವ ಎಚ್.ಕೆ.ಪಾಟೀಲ್, ಸಮಾಜ ಕಲ್ಯಾಣ ಎಚ್.ಸಿ.ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರನ್ನು ಸಂಪುಟ ಉಪಸಮಿತಿ ಸದಸ್ಯರಾಗಿ ನೇಮಕ ಮಾಡಲಾಗಿದೆ.

ಇಂಧನ ಮಿತವ್ಯಯ ಪ್ರಧಾನಿ ಮೋದಿ ಕರೆಗೆ ಸ್ಪಂದನೆ

ಮೆಟ್ರೊ ಏರಿದ ವಿಜಯೇಂದ್ರ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಧಾನಿ ಮೋದಿ ಅವರ ಮಿತವ್ಯಯ ಕರೆ ಪಾಲನೆಗೆ ಮುಂದಾಗಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶನಿವಾರ ನಾನಾ ಕಾರ್ಯಕ್ರಮಗಳಿಗೆ ಮೆಟ್ರೊದಲ್ಲಿ ಪ್ರಯಾಣಿಸಿದ್ದು ಗಮನ ಸೆಳೆಯಿತು.

ಬೆಂಗಾವಲು ವಾಹನವಿಲ್ಲದೆ ಒಬ್ಬ ಅಂಗರಕ್ಷಕ ರೊಂದಿಗೆ ಮೆಟ್ರೊದಲ್ಲಿ ಪ್ರಯಾಣಿಸಿದ ಅವರು ಅಗತ್ಯವಿರುವ ಕಡೆ ಎಲೆಕ್ಟ್ರಿಕ್ ಕಾರಿನಲ್ಲಿ ಪ್ರಯಾಣಿಸಿ ಇಂಧನ ಮಿತವ್ಯಯಕ್ಕೆ ಪ್ರಯತ್ನ ನಡೆಸಿದರು.

ಮೈಸೂರು ರಸ್ತೆಯ ಕುಂಬಳಗೋಡು ಬಳಿ ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರಶಿಕ್ಷಣ ವರ್ಗದಲ್ಲಿ ಪಾಲ್ಗೊಳ್ಳಲು ಶನಿವಾರ ಬೆಳಗ್ಗೆ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ ಕೆಂಗೇರಿವರೆಗೆ ಪ್ರಯಾಣಿಸಿದರು. ಅಲ್ಲಿಂದ ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರ ಎಲೆಕ್ಟ್ರಿಕ್ ಕಾರಿನಲ್ಲಿ ಕಾರ್ಯಕ್ರಮಕ್ಕೆ ತೆರಳಿದರು. ಬಳಿಕ ಕಾರಿನಲ್ಲಿ ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್‌ಗೆ ಪ್ರಯಾಣಿಸಿ ಗುರುದೇವ ಶ್ರೀ ಶ್ರೀ ರವಿಶಂಕರ ಗುರೂಜಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದರು. ಅದೇ ಕಾರಿನಲ್ಲಿ ಸಮೀಪದ ಮೆಟ್ರೊ ನಿಲ್ದಾಣದಿಂದ ಕೆಂಪೇಗೌಡ ನಿಲ್ದಾಣ ತಲುಪಿದ್ದು ಗಮನ ಸೆಳೆಯಿತು.

ಸಿದ್ದು, ಡಿಕೆಶಿಯೇ ರಾಜೀನಾಮೆ ನೀಡಬೇಕಿತ್ತು

''ತೈಲ ಬೆಲೆ ಏರಿಕೆಗೆ ಕಾರಣವೇನು ಎಂಬುದು ಕಾಂಗ್ರೆಸ್ ಮುಖಂಡರಿಗೆ ಗೊತ್ತಿಲ್ಲವೇ? ಒಂದೊಮ್ಮೆ ರಾಜೀನಾಮೆ ನೀಡುವುದಿದ್ದರೆ ಎರಡು ವರ್ಷಗಳ ಹಿಂದೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ರಾಜೀನಾಮೆ ಕೊಡಬೇಕಿತ್ತು. ಏಕೆಂದರೆ ಅವರು ಅಷ್ಟು ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಿದ್ದಾರೆ. ತೈಲದ ಮೇಲೆ ಮಾರಾಟ ತೆರಿಗೆಯನ್ನು ಹಲವು ಬಾರಿ ಹೆಚ್ಚಿಸಿದ್ದಾರೆ,'' ಎಂದು ತಿರುಗೇಟು ನೀಡಿದರು.

''ಕಾಂಗ್ರೆಸ್‌ನವರು ಮಾತಿನ ಚಟಕೋಸ್ಕರ ಮಾತನಾಡಬಾರದು. ದೇಶದ, ಜಗತ್ತಿನ ಆರ್ಥಿಕ ಸಂಕಷ್ಟದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಧಾನಿಯವರು ರಾಜಕೀಯ ಲಾಭಕ್ಕಾಗಿ ಯಾವುದನ್ನೂ ಮಾಡಲಿಲ್ಲ. ದೇಶದ ಮಧ್ಯಮ ವರ್ಗದವರ ಅನುಕೂಲಕ್ಕಾಗಿ ವೈಯಕ್ತಿಕ ಆದಾಯ ತೆರಿಗೆ ಮಟ್ಟವನ್ನು ಪರಿಷ್ಕರಿಸಿದ್ದಾರೆ. ಈಗ ಯಾವುದೇ ಲೋಕಸಭಾ ಚುನಾವಣೆ ಇಲ್ಲ, ಕಾಂಗ್ರೆಸ್‌ನವರಾಗಿದ್ದರೆ ಚುನಾವಣೆ ಲಾಭ ಪಡೆಯಲು ಆದಾಯ ತೆರಿಗೆ ಮಟ್ಟ ಬದಲಿಸುತ್ತಿದ್ದರು,'' ಎಂದು ಕುಟುಕಿದರು.

ಶಾಸಕ ಎಂ.ಕೃಷ್ಣಪ್ಪ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ರುದ್ರೇಶ್ ಇದ್ದರು.

ಮಹಾರಾಷ್ಟ್ರ ಸಿಎಂ ಫಡ್ನವಿಸ್ ಭೇಟಿ

ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್ ಅವರನ್ನು ವಿಜಯೇಂದ್ರ ಅವರು ಸೌಹಾರ್ದಯುತವಾಗಿ ಭೇಟಿಯಾದರು. ಫಡ್ನವಿಸ್ ಅವರ ದೂರದರ್ಶಿತ್ವದ ನಾಯಕತ್ವ ಮತ್ತು ಪ್ರಗತಿನಿಷ್ಠ ಆಡಳಿತ ವೈಖರಿಗೆ ಅಭಿನಂದನೆ ಸಲ್ಲಿಸಿದರು.

ಜೂ.20ರ ತನಕ ಮತಪಟ್ಟಿಗೆ ಹೆಸರು ಸೇರ್ಪಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಜೂನ್ 20ರಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆರಂಭ ವಾಗಲಿದ್ದು, ಅಲ್ಲಿಯವರೆಗೆ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ರದ್ದು ಹಾಗೂ ತಿದ್ದುಪಡಿಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಯಥಾವತ್ತಾಗಿ ಮುಂದುವರಿಯಲಿದೆ.

ಕೇಂದ್ರ ಚುನಾವಣಾ ಆಯೋಗವು ಇತ್ತೀಚೆಗೆ ರಾಜ್ಯದಲ್ಲೂ ಎಸ್‌ಐಆರ್ ಪ್ರಕ್ರಿಯೆ ಕೈಗೊಳ್ಳುವುದಾಗಿ ಘೋಷಿಸಿದೆ. ಅದರಂತೆ ಜೂ.20ರಿಂದ 29ರವರೆಗೆ ಸಿದ್ಧತೆ, ತರಬೇತಿ, ಮುದ್ರಣ ಕಾರ್ಯ ನಡೆಯಲಿದೆ. ಜೂ.30ರಿಂದ ಜು.29ರ ವರೆಗೆ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡುವ ಪ್ರಕ್ರಿಯೆ ಜರುಗಲಿದೆ. ಅಷ್ಟರೊಳಗೆ ಮತಗಟ್ಟೆಗ ತಾರ್ಕಿಕ ಮರು ಹೊಂದಾಣಿಕೆಯೂ ನಡೆಯಲಿದೆ.

ಆ.5ಕ್ಕೆ ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಆ.5ರಿಂದ ಸೆ.4ರವರೆಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶವಿರಲಿದೆ. ಆ.5ರಿಂದ ಅ.3ರವರೆಗೆ ನೋಟಿಸ್ ಹಂತ, ಆಕ್ಷೇಪಣೆಗಳ ವಿಲೇವಾರಿ ಪ್ರಕ್ರಿಯೆ ನಡೆಯಲಿದೆ. ಅ.7ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ.

ಜೂ.20ರವರೆಗೆ ಆನ್‌ಲೈನ್ ಮೂಲಕ ಇಲ್ಲವೇ ಭೌತಿಕವಾಗಿ ಸಂಬಂಧಪಟ್ಟ ಕಚೇರಿಗಳಲ್ಲಿ ಅರ್ಜಿ ನಮೂನೆ ಸಲ್ಲಿಸಲು ಅವಕಾಶವಿರಲಿದೆ. ನಮೂನೆ ಮುದ್ರಣ ಪ್ರಕ್ರಿಯೆ ಆರಂಭವಾಗುವ ಅಂದರೆ ಜೂ.20ರಿಂದ ಅ.1ರವರೆಗೆ ಅರ್ಜಿ ನಮೂನೆ ಸಲ್ಲಿಕೆ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತವಾಗಲಿದೆ. ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಯಥಾ ಪ್ರಕಾರ ಅರ್ಜಿ ನಮೂನೆಗಳ ಸಲ್ಲಿಕೆ ಮುಂದುವರಿ ಯಲಿದೆ ಎಂದು ಮೂಲಗಳು ತಿಳಿಸಿವೆ.

ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರ ನಿಯೋಜನೆ: ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ 59,050 ಮತಗಟ್ಟೆ ಅಧಿಕಾರಿಗಳನ್ನು ತೊಡಗಿಸಿಕೊಳ್ಳಲು ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ. ಅದರಂತೆ 30,000ಕ್ಕೂ ಹೆಚ್ಚು ಶಿಕ್ಷಕ/ ಶಿಕ್ಷಕಿಯರು, 20,000 ಅಂಗನವಾಡಿ ಕಾರ್ಯಕರ್ತೆಯರನ್ನು ನಿಯೋಜನೆ ಯಾಗುವ ಸಾಧ್ಯತೆ ಇದೆ. ಹಾಗೆಯೇ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸ ಕರು, ಸರಕಾರದ ನಾನಾ ಇಲಾಖೆಗಳ 'ಸಿ' ಶ್ರೇಣಿ ನೌಕರರನ್ನು ಈ ಪ್ರಕ್ರಿಯೆ ಬಳಸಿಕೊಳ್ಳಲು ತಯಾರಿ ನಡೆದಿದೆ. ಈಗಾಗಲೇ ಮತದಾರರ ಮ್ಯಾಪಿಂಗ್ ಕಾರ್ಯಕ್ಕೆ ನೇಮಿಸಿಕೊಂಡ ಶಿಕ್ಷಕರನ್ನೇ ಎಸ್‌ಐಆರ್ ಪ್ರಕ್ರಿಯೆಗೂ ಮುಂದುವರಿ ಸುವ ಸಾಧ್ಯತೆ ಇದೆ ಎಂದು ಹೇಳಿವೆ.

ನಮೂನೆ 6: ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆಗೆ
ನಮೂನೆ 6ಎ: ಅನಿವಾಸಿ ಭಾರತೀಯ ಮತದಾರರು, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆಗೆ
ನಮೂನೆ 7: ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಆಕ್ಷೇಪಣೆ/ ಹೆಸರು ರದ್ದತಿಗೆ
ನಮೂನೆ 8: ಮತದಾರರ ವಿಳಾಸ ಬದಲಾವಣೆ/ ಪ್ರಸ್ತುತ ಮತದಾರರ ಪಟ್ಟಿಯಲ್ಲಿನ ನಮೂದುಗಳಲ್ಲಿನ ತಿದ್ದುಪಡಿ/ ಬದಲಿ ಮತದಾರರ ಗುರುತಿನ ಚೀಟಿ ನೀಡುವಿಕೆ/ ವಿಶೇಷ ಚೇತನ ವ್ಯಕ್ತಿಗಳನ್ನು ಗುರುತಿಸಲು

ರಾಜ್ಯದಲ್ಲಿ ಜೂ.20ರಿಂದ ಎಸ್‌ಐಆರ್ ಪ್ರಕ್ರಿಯೆ ಅಧಿಕೃತವಾಗಿ ಆರಂಭವಾಗಲಿದೆ. ಅಲ್ಲಿಯವರೆಗೆ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ, ರದ್ದು, ತಿದ್ದುಪಡಿ ಇತರೆ ಅರ್ಜಿ ನಮೂನೆ ಸಲ್ಲಿಕೆಗೆ ಅವಕಾಶವಿರಲಿದೆ.
- ವಿ.ಅನ್ಬುಕುಮಾರ್ ರಾಜ್ಯ ಮುಖ್ಯ ಚುನಾವಣಾಧಿಕಾರಿ

81.88 ಲಕ್ಷ ಫಲಾನುಭವಿಗಳಿಗೆ ನೆರವು ಸ್ಥಗಿತ: ಅಶೋಕ್

■ **ವಿಕ ಸುದ್ದಿಲೋಕ** ಬೆಂಗಳೂರು

ಖಜಾನೆ ಖಾಲಿಯಾಗಿ ಅನಾಥರು, ವೃದ್ಧರು ಸೇರಿದಂತೆ ನಾನಾ ಅಸಹಾಯಕ ವರ್ಗಗಳಿಗೆ ನೀಡುವ ಸಹಾಯಧನ, ಪಿಂಚಣಿ ಮೂರು ತಿಂಗಳಿನಿಂದ ಸ್ಥಗಿತಗೊಂಡಿದ್ದರೂ ಸಾಧನಾ ಸಮಾವೇಶ ನಡೆಸಲು ಕಾಂಗ್ರೆಸ್ ನಾಯಕರು ಹೊರಟಿದ್ದಾರೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಶನಿವಾರ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿ, ''ಸಿಎಂ ಸಿದ್ದರಾಮಯ್ಯ ನವರ ಸರಕಾರ ತಾನು ಮಾಡಿದ ಪಾಪಗಳಿಗಾಗಿ ಸಮಾವೇಶ ನಡೆಸಿ ಸಂಭ್ರಮಾಚರಣೆ ಮಾಡುತ್ತಿದೆ,'' ಎಂದು ಕಿಡಿ ಕಾರಿದರು.

''ಎರಡು ತಿಂಗಳ ಗೃಹಲಕ್ಷ್ಮೀ ಮೊತ್ತ 5,000 ಕೋಟಿ ರೂ., ಅನ್ನಭಾಗ್ಯದ ಒಂದು ತಿಂಗಳ 700 ಕೋಟಿ ರೂ., ಅನಾಥ ಮಕ್ಕಳ 73 ಕೋಟಿ ರೂ. ನೆರವು ಇನ್ನೂ ಬಿಡುಗಡೆಯಾಗಿಲ್ಲ, ಸಮೀಕ್ಷೆ ಹೆಸರಲ್ಲಿ ರೈತರಿಗೆ ಪರಿಹಾರ ಕೊಟ್ಟಿಲ್ಲ, ಕಂದಾಯ ಇಲಾಖೆಯು 12 ಬಗೆಯ ಪಿಂಚಣಿಗಳನ್ನು ಮೂರು ತಿಂಗಳಿಂದ ಪಾವತಿಸಿಲ್ಲ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

''ಸಾಮಾಜಿಕ ಭದ್ರತಾ ಯೋಜನೆಗಳಡಿ 81.88 ಲಕ್ಷ ಫಲಾನುಭವಿಗಳಿದ್ದು, ಮಾಸಿಕ 894 ಕೋಟಿ ರೂ. ನೀಡಬೇಕಿದೆ. ಬಜೆಟ್‌ನಲ್ಲಿ 10,736 ಕೋಟಿ ರೂ. ಮೀಸಲಿಟ್ಟರೂ ಈ ಹಣ ಫಲಾನುಭವಿಗಳಿಗೆ ತಲುಪಿಲ್ಲ, ನಾನು ಕಂದಾಯ ಸಚಿವನಾಗಿದ್ದಾಗ, ಆ್ಯಸಿಡ್ ದಾಳಿಗೊಳಗಾದ ಹೆಣ್ಣುಮಕ್ಕಳ ನೆರವಿಗೆ ತಿಂಗಳಿಗೆ 10,000 ರೂ. ನೀಡಲು ಕ್ರಮ ವಹಿಸಿದ್ದೆ,'' ಎಂದರು.

''ಆಶಾ ಕಾರ್ಯಕರ್ತೆಯರಿಗೆ 10,000 ರೂ. ಗೌರವಧನ ನೀಡುವ ಭರವಸೆ ಇನ್ನೂ ಈಡೇರಿಲ್ಲ, ಬೇಡಿಕೆ ಈಡೇರದೇ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗಿದ್ದಾರೆ,'' ಎಂದು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್‌ನಂತೆ ಮೋದಿ ಚಿನ್ನದ ತುಲಾಭಾರ ಮಾಡಿಸಿಕೊಂಡಿಲ್ಲ

ಮೋದಿ ದೇಣಿಗೆ ಸಂಗ್ರಹಿಸಿಲ್ಲ, ನಿಧಿ ಕೇಳಿಲ್ಲ

■ **ವಿಕ ಸುದ್ದಿಲೋಕ** ವಿಜಯಪುರ

ದೇಶಕ್ಕೆ ಆರ್ಥಿಕ ಸಂಕಷ್ಟ ತಪ್ಪಿಸಲು ಕಾಂಗ್ರೆಸ್‌ನಂತೆ ಮೋದಿ ಜನರಿಂದ ದೇಣಿಗೆ ಕೇಳಿಲ್ಲ, ರಕ್ಷಣಾ ನಿಧಿ ಸಂಗ್ರಹಿಸಿಲ್ಲ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ''ಕಾಂಗ್ರೆಸ್‌ನವರಂತೆ ದೇಶದ ಹೆಸರು ಹೇಳಿ ಚಿನ್ನದ ತುಲಾಭಾರವನ್ನು ಪ್ರಧಾನಿ ಮೋದಿ ಮಾಡಿಸಿಕೊಂಡಿಲ್ಲ, ಬದಲಾಗಿ ಚಿನ್ನದ ಖರೀದಿಯನ್ನು ಮಿತಗೊಳಿಸುವಂತೆ ಜನರಿಗೆ ಮನವಿ ಮಾಡಿದ್ದಾರೆ,''ಎಂದು ಹೇಳಿದ್ದಾರೆ.

''ದೇಶದ ಆರ್ಥಿಕತೆ ಕುಸಿದಿದೆ ಎಂದು ಕಾಂಗ್ರೆಸ್‌ನಂತೆ ಬಿಜೆಪಿ ಎಂದೂ ಕೈಚಲ್ಲಿ ಕುಳಿತಿಲ್ಲ, ತುರ್ತು ಪರಿಸ್ಥಿತಿ ಹೇರಿಲ್ಲ, ಕೋವಿಡ್‌ನಂತಹ ಸಂಕಷ್ಟದ ಸಮಯ ದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೆ ದೇಶದ ಪರಿಸ್ಥಿತಿಯನ್ನು ಊಹಿಸಲು ಸಾಧ್ಯವಾಗಿರದಷ್ಟು ಕೆಟ್ಟಿರುತ್ತಿತ್ತು. ಈ ಯುದ್ಧದಿಂದ ಸಂಭವಿಸುತ್ತಿರುವ ಹಾನಿಗೆ ದೇಶದಲ್ಲಿ ಅರಾಜಕತೆ ಸೃಷ್ಟಿಯಾಗುವಂತೆ ಮಾಡುತ್ತಿತ್ತು,''ಎಂದು ಟೀಕಿಸಿದ್ದಾರೆ.

''1962ರಲ್ಲಿ ಚೀನಾ ನಡುವೆ ನಡೆದ ಯುದ್ಧದ ಸಂದರ್ಭದಲ್ಲಿ ನೆಹರೂ ಅವರ ವಿವೇಚನಾರಹಿತ ನಿರ್ಧಾರದಿಂದಾಗಿ ಭಾರತ ಸೋಲು ಕಂಡಿತ್ತು. ಪರಿಣಾಮ ದೊಡ್ಡ ಪ್ರಮಾಣದಲ್ಲಿ ರಕ್ಷಣಾ ನಿಧಿ ಸಂಗ್ರಹಿಸಲು ಮುಂದಾಗಿತ್ತು. 1963ರಲ್ಲಿ ಸಿಎಂ ಆಗಿದ್ದ ಎಸ್.ನಿಜಲಿಂಗಪ್ಪ ಅವರು ರಾಜ್ಯಾದ್ಯಂತ ಸಂಚರಿಸಿ ರಕ್ಷಣಾ ನಿಧಿ ಸಂಗ್ರಹಿಸಿ ಕೊಡುವುದಾಗಿ ವಾಗ್ದಾನ ಮಾಡಿದ್ದರು. ವಿಜಯಪುರದಲ್ಲಿ ಕೆ.ಬಿ.ಚೌಧರಿ ಸಂಸದರಾಗಿದ್ದಾಗ ಇಂದಿರಾ ಹಾಗೂ ಎಸ್.ನಿಜಲಿಂಗಪ್ಪ ಅವರಿಗೆ ಜನ ಚಿನ್ನದಿಂದ ತುಲಾಭಾರ ಮಾಡಿದ್ದರು. ಭೀಕರ ಬರಗಾಲದಲ್ಲಿ ಜಿಲ್ಲೆಯ ಜನ ರಕ್ಷಣಾ ನಿಧಿಗೆ ಮೈಮೇಲಿನ ಚಿನ್ನಾಭರಣ ಅರ್ಪಿಸಿದ್ದರು. ಆದರೆ, ದೇಶದಲ್ಲಿ ನರೇಂದ್ರ ಮೋದಿ ಸರಕಾರ ಬಂದ ಬಳಿಕ ಜನರಿಂದ ನಯಾಪೈಸೆ ನಿಧಿ ಸಂಗ್ರಹಿಸಿಲ್ಲ,'' ಎಂದಿದ್ದಾರೆ.

ವಿಜಯಪುರ-ಬೆಂಗಳೂರು ನಡುವೆ ರೈಲು: ಸಚಿವ ಪಾಟೀಲ್ ಸಂತಸ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಜಯಪುರ ಮತ್ತು ಬೆಂಗಳೂರು ನಡುವೆ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮಾರ್ಗವಾಗಿ ರೈಲು ಸಂಚಾರ ಕಲ್ಪಿಸಬೇಕೆಂಬ ಸಚಿವ ಎಂ.ಬಿ. ಪಾಟೀಲ್ ಅವರ ಮನವಿಗೆ ರೈಲ್ವೆ ಇಲಾಖೆ ಸ್ಪಂದಿಸಿದ್ದು, ಜೂ.28ರವರೆಗೆ ವಿಶೇಷ ರೈಲು ಸಂಚಾರ ಆರಂಭಿಸಲು ಮುಂದಾಗಿದೆ.

ಕೇಂದ್ರ ಸರಕಾರದ ಸ್ಪಂದನೆಗೆ ಎಂ.ಬಿ.ಪಾಟೀಲ್ ಅವರು ಸಂತಸ ವ್ಯಕ್ತಪಡಿಸಿದ್ದು, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ.

ಬೆಂಗಳೂರು - ವಿಜಯಪುರ ನಡುವೆ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕ ರೈಲು ಸೇವೆ ಆರಂಭಿಸುವುದು ಜನರಿಗೆ ಹೆಚ್ಚು ಉಪಯುಕ್ತವಾಗಲಿದೆ ಎಂಬುದಾಗಿ ಎಂ.ಬಿ.ಪಾಟೀಲ್ ಕಳೆದ ಏಪ್ರಿಲ್ ಮೊದಲ ವಾರದಲ್ಲಿ ಕೇಂದ್ರ ಸಚಿವರಿಬ್ಬರಿಗೂ ಪತ್ರ ಬರೆದಿದ್ದರು.

ಸದ್ಯ ಆರಂಭಿಸುತ್ತಿರುವ ವಿಶೇಷ ರೈಲು ವಿಜಯಪುರದಿಂದ ಹೊರಟು ಬೆಂಗಳೂರಿನ ಯಶವಂತಪುರ ನಿಲ್ದಾಣವನ್ನು ಬೆಳಗಿನ ಜಾವ 4 ಗಂಟೆಗೆ ತಲುಪಲಿದೆ. ಈ ಸಮಯದಲ್ಲಿ ಪ್ರಯಾಣಿಕರು ತಮ್ಮ ಮನೆಗಳಿಗೆ ತಲುಪುವುದು ಕಷ್ಟವಾಗಲಿದೆ. ಹಾಗಾಗಿ, ಬೆಳಗ್ಗೆ 5.30ರಿಂದ 6 ಗಂಟೆ ನಡುವೆ ಯಶವಂತಪುರಕ್ಕೆ ತಲುಪುವಂತೆ ವೇಳಾಪಟ್ಟಿಯಲ್ಲಿ ಸೂಕ್ತ ಬದಲಾವಣೆ ಮಾಡಬೇಕು ಎಂದೂ ಅವರು ಪತ್ರದಲ್ಲಿ ವಿನಂತಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎಂ.ಬಿ.ಪಾಟೀಲ್, ''ವಿಜಯಪುರ ಮತ್ತು ಬೆಂಗಳೂರು ನಡುವೆ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮಾರ್ಗಗಳ ಮೂಲಕ ರೈಲು ಓಡಿಸಬೇಕು ಎಂಬ ನಮ್ಮ ಮನವಿಗೆ ಕೇಂದ್ರ ಸರಕಾರ ಸ್ಪಂದಿಸಿರುವುದು ಸಂತಸ ತಂದಿದೆ,'' ಎಂದಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
No. KMCRI/SUP-6/82/2026-27 Dated 16-05-2026
ಇ-ಮರು ಟೆಂಡರ್ ಪ್ರಕಟಣೆ
(ಮಾನವ ಸಂಪನ್ಮೂಲ ಸೇವೆಗಳ ಟೆಂಡರ್)
1) ಇಂಡೆಂಟ್ ನಂ. DME/2026-27/SE0698/Call-02
2) ಇಂಡೆಂಟ್ ನಂ. DME/2026-27/SE0700/Call-02
2026-27 ನೇ ಸಾಲಿಗಾಗಿ ಕೆ.ಎಂ.ಸಿ.ಆರ್.ಆಯ್ ಹುಬ್ಬಳ್ಳಿ ಆವರಣದಲ್ಲಿರುವ ವಿವಿಧ ಆಸ್ಪತ್ರೆ ಕಟ್ಟಡ ವಿಭಾಗಗಳಿಗೆ ಅಗತ್ಯವಿರುವ ಆಯಾ ವಾರ್ಡಬಾಯ್ ಮಾನವ ಸಂಪನ್ಮೂಲ ಸೇವೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಪ್ಯಾಕೇಜ್ 01 ಮತ್ತು 03ರ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ. ಪ್ರತ್ಯೇಕ ಇ.ಎಂ.ಡಿ. ಮೊತ್ತದೊಂದಿಗೆ ಈ ಮರು ಟೆಂಡರ್ ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸತಕ್ಕದ್ದು, ಮರು ಟೆಂಡರ್ ಶುಲ್ಕ ಮತ್ತು ಇತ್ಯಾದಿ ವಿವರಗಳನ್ನು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/- (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ-573201
Ph:08172-261640 Email ID:eerdwsd.hsn@gmail.com
ದ್ವಿ -ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ: 01/2026-27 ದಿನಾಂಕ: 14.05.2026
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ ರವರಿಂದ 2215 MVS O&M ಯೋಜನೆಯಡಿ 2026-2027 ನೇ ಸಾಲಿನಲ್ಲಿ ಅನುಮೋದನೆಯಾಗಿರುವ ಹೊಳೆನರಸೀಪುರ ತಾಲ್ಲೂಕಿನ ಕಾಮಗಾರಿಗಳಿಗೆ ಈ ಕೆಳಕಂಡಂತೆ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳು ಹೊಳೆನರಸೀಪುರ ತಾಲ್ಲೂಕಿನ 02 ಕಾಮಗಾರಿಗಳು ಸದರಿ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ: 15.05.2026 ರ ಬೆಳಿಗ್ಗೆ 11:00 ರಿಂದ https://kppp.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 25.05.2026 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 22.05.2026 ರಂದು ಬೆಳಿಗ್ಗೆ 11:00 ಗಂಟೆಗೆ ಈ ಕಛೇರಿಯಲ್ಲಿ ಸದರಿ ಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ : ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾಸನ ಜಿಲ್ಲಾ ಪಂಚಾಯತ್ ಕಟ್ಟಡ, ಎನ್.ಆರ್ ವೃತ್ತ ಹಾಸನ. ದಿನಾಂಕ:29.05.2026 ಸಂಜೆ 05.00 ಕ್ಕೆ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ:30.05.2026 ರಂದು ಸಂಜೆ 05:30 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ:01.06.2026 ರ ಸಂಜೆ 05:30 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ
ವಾಸಾಸಂಇ/ಹಿಸನಿ/ಹಾಸನ/140/ಕೆಎಸ್‌ಎಂಸಿಎ/2026-27

ತೋಟಗಾರಿಕೆ ಇಲಾಖೆ
ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು - 560 004.
ಸಂಖ್ಯೆ: ತೋಇ/ತೋಅ/ಸತೋನಿ2/E-2148129/2026-27 ದಿನಾಂಕ: 16.05.2025
ಎಂಪ್ಯಾನೆಲ್‌ಮೆಂಟ್ ಪ್ರಕಟಣೆ
(ಹಸಿರು/HASIRU PORTAL ಮೂಲಕ)
ತೋಟಗಾರಿಕೆ ಇಲಾಖೆ ವತಿಯಿಂದ 2026-27 ಮತ್ತು 2027-28ನೇ ಸಾಲುಗಳಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಫಲಾನುಭವಿ ಆಧಾರಿತ ಕಾರ್ಯಕ್ರಮದಡಿ ತೋಟಗಾರಿಕೆ ಬೆಳೆಗಳಿಗೆ ಉಪಯೋಗಿಸುವ ವಿವಿಧ ಸಾಮಗ್ರಿ/ಉತ್ಪನ್ನಗಳಾದ **ಕಾರುಗೇಟೆಡ್ ಬಾಕ್ಸ್, ಪ್ಲಾಸ್ಟಿಕ್ ಕ್ರೇಟ್ಸ್, ಪುನೆಟ್ ಬಾಕ್ಸ್, ಹವಾಮಾನ ಆಧಾರಿತ ಘಟಕ ಮತ್ತು ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕಗಳನ್ನು** ಪೂರೈಸಿಕೊಳ್ಳುವ ರೈತರಿಗೆ ಸಹಾಯಧನವನ್ನು ನೀಡಲು ಅನುಕೂಲವಾಗುವಂತೆ ಉತ್ಪಾದಕರು/ ಸರಬರಾಜುದಾರರನ್ನು ಎಂಪ್ಯಾನಲ್ ಮಾಡಲು HASIRU PORTAL ಮುಖಾಂತರ (EOI) ಅನ್ನು ಆಹ್ವಾನಿಸಲಾಗಿದೆ. ಆಸಕ್ತರು ಈ Website: https://hasiru.karnataka.gov.in ನಲ್ಲಿ **ದಿನಾಂಕ: 16.05.2026**ರಿಂದ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಅವಶ್ಯವಿರುವ ದಾಖಲೆಗಳನ್ನು ಸಲ್ಲಿಸಲು **ದಿನಾಂಕ: 17.06.2026** ಅಂತಿಮ ದಿನಾಂಕವಾಗಿರುತ್ತದೆ.
ಸಹಿ/-
ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು)
ವಾಸಾಸಂಇ/ವಾ.ಪ್ರ/711/ಎಂಎಎ/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಪ್ರವ್ಯ(ತಾ)/ಉಪ್ರವ್ಯ (ಎಪಿಸಿಸಿ&ಪ್ರೊ)/ಕಾನಿಇಂ-ಪ್ರೊ2/ಸಕಾನಿಇಂ-6/2026-27/850-865 ದಿನಾಂಕ: 16.05.2026
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್** ಅಡಿಯಲ್ಲಿ, **ಶೇಕಡಾವಾರು ದರ (Percentage Rate)** ಆಧಾರಿತವಾಗಿ, ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ / ಕಾಮಗಾರಿಯ ವಿವರ
ಕವಿಪ್ರನಿನಿ/2026-27/ಎಸ್‌ಎಸ್/ವರ್ಕ್_ಇಂಡೆಂಟ್3730
ಕಾಮಗಾರಿ-ಎ: ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ **66/11ಕೆವಿ** ಮಳಲಿ ಉಪಕೇಂದ್ರದಲ್ಲಿ **ಹೆಚ್ಚುವರಿ 1x20ಎಂವಿಎ,** 66/11ಕೆವಿ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ. **ಕಾಮಗಾರಿ-ಬಿ:** ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ **66/11ಕೆವಿ ಹಂಗರಹಳ್ಳಿ** ಉಪಕೇಂದ್ರದಲ್ಲಿ **2x6.3ಎಂವಿಎ,** 66/11ಕೆವಿ ವಿದ್ಯುತ್ ಪರಿವರ್ತಕಗಳನ್ನು **2x20ಎಂವಿಎ,** 66/11ಕೆವಿ ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಸಿ:** ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ **66/11ಕೆವಿ ಬೈಚನಹಳ್ಳಿ** ಉಪಕೇಂದ್ರದಲ್ಲಿ **2x8ಎಂವಿಎ,** 66/11ಕೆವಿ ವಿದ್ಯುತ್ ಪರಿವರ್ತಕಗಳನ್ನು **2x20ಎಂವಿಎ,** 66/11ಕೆವಿ ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಡಿ:** ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ **66/11ಕೆವಿ ಗಂಗೂರು** ಉಪಕೇಂದ್ರದಲ್ಲಿ **ಹೆಚ್ಚುವರಿ 1x20ಎಂವಿಎ,** 66/11ಕೆವಿ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ. **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಪೂರೈಕೆ ಮತ್ತು ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು,

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್ ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ **ದಿನಾಂಕ: 18.05.2026 ರಂದು 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಕವಿಪ್ರನಿನಿ, ನಿಗಮ ಕಛೇರಿ, 11ನೇ ಮಹಡಿ, ಇಂಧನ ಭವನ, ಆನಂದ್‌ರಾವ್ ವೃತ್ತ, ಬೆಂಗಳೂರು-560009

ನಗರಸಭಾ ಕಾರ್ಯಾಲಯ, ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ - 562123
ದೂರವಾಣಿ: 08023718487, E-mail: itstaff_ulb_mnhalli@yahoo.com
ಸಂಖ್ಯೆ:ಮಾ.ನ.ಕಾ/ತಾ.ಶಾ./ವಿದ್ಯುತ್/ಕಾಮಗಾರಿ/03/2026-27 ದಿನಾಂಕ: 16.05.2026
ಟೆಂಡರ್ ಪ್ರಕಟಣೆ
ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ **2026-27** ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ: INDENT58379-CALL-2, INDENT58364(Category-2A), INDENT58125(Others), INDENT58351(Category-2A), INDENT57316(Category-2A), INDENT56237-CALL2, INDENT58108 (Others), INDENT58109(SC Reserved), INDENT58110 (SC Reserved), INDENT58111(Others), INDENT58112(Others), INDENT58113(Others), ಮಾಹಿತಿಯನ್ನು ಪಡೆಯಲು ದಿನಾಂಕ: **01.06.2026 ಸಂಜೆ 5.30** ಗಂಟೆಯವರೆಗೆ 2) ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 03.06.2026 ಸಂಜೆ 5.30** ವರೆಗೆ. 3)ಟೆಂಡರ್ ಬಿಡ್‌ನ್ನು ತೆರೆಯುವ **ದಿನಾಂಕ: 05.06.2026 ಬೆಳಿಗ್ಗೆ 11.00** ಗಂಟೆಗೆ. 4) ಹೆಚ್ಚಿನ ಮಾಹಿತಿಗಾಗಿ **ಕೆ.ಪಿ.ಪಿ.ಪಿ** ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/-
ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾ.ಪ್ರ/713/ಶಿರಡಿ ಸಾಯಿ/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಶಿವಮೊಗ್ಗ:
ಡಿ.ದೇವರಾಜ ಅರಸು ಭವನ, ಬಾಲರಾಜ್ ಅರಸ್ ರಸ್ತೆ, ಕೆ.ಇ.ಬಿ ಸರ್ಕಲ್,
ಇ-ಮೇಲ್ : dobemshimoga@gmail.com ದೂ : (08182) 222129.
ನಂ.ಜಿಹಿಂವಕಿ/ಎ-6/ಮಾ.ಸೇ.ಟೆಂಡರ್/ಸಿ.ಆರ್-29/2026-27 ದಿನಾಂಕ: 15.05.2026
ಟೆಂಡರ್ ಪ್ರಕಟಣೆ
2026-27ನೇ ಸಾಲಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಇಲಾಖೆ ವ್ಯಾಪ್ತಿಗೆ ಒಳಪಡುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಸತಿಶಾಲೆಗಳು/ಕಾಲೇಜಿನಲ್ಲಿ ಖಾಲಿ ಇರುವ ವಿವಿಧ ವೃಂದದ ಗ್ರೂಪ್ 'ಡಿ' ಮತ್ತು ಬೋಧಕೇತರ ಹುದ್ದೆಗಳಾದ ಪ್ರ.ದ.ಸ. ದ್ವಿ.ದ.ಸ, ಸ್ಟಾಫ್ ನರ್ಸ್, ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಹಾಗೂ ಡಿ ದರ್ಜೆ ಸಹಾಯಕ ಹುದ್ದೆಗಳಿಗೆ ಮತ್ತು ಜಿಲ್ಲೆಯ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್ (ಗ್ರೇಡ್-2 ಹುದ್ದೆಗಳಿಗೆ ಮಾನವಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.
ವೇಳಾಪಟ್ಟಿ : 1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ : ಸಂ/ಹಿಂವಕಇ/ಎ-6/ಮಾಸೇಟೆಂಡರ್/ಸಿಆರ್-29/2026-27 2: 15.05.2026. 2) ಟೆಂಡರ್‌ಗಿಟ್ಟ ಮೊತ್ತ: ರೂ. 1233.45 ಲಕ್ಷಗಳು. 3) ಇಎಂಡಿ ನಿಗಧಿಪಡಿಸಿರುವ ಮೊತ್ತ : ರೂ. 12.33 ಲಕ್ಷಗಳು. 4) ಇ-ಪೋರ್ಟಲ್ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ : ದಿ. 16.06.2026 ರಂದು ಸಂಜೆ 4.00 ಗಂಟೆಯೊಳಗೆ. 5) ಪ್ರೀ-ಬಿಡ್ ಸಭೆ ನಡೆಸುವ ದಿನಾಂಕ, ಸಮಯ ಮತ್ತು ಸ್ಥಳ : ದಿನಾಂಕ:25.05.2026 ರಂದು ಬೆಳಗ್ಗೆ 11.00 ಗಂಟೆಗೆ. ಜಿಲ್ಲಾ ಹಿಂ.ವ.ಕ.ಇಲಾಖೆ ಕಛೇರಿ, ಶಿವಮೊಗ್ಗ. 6) ಇ-ಪೋರ್ಟಲ್ ನಲ್ಲಿ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ : ದಿನಾಂಕ 18.06.2026 ಬೆಳಿಗ್ಗೆ 11.00 ಗಂಟೆಗೆ. (ದಿನಾಂಕ ಮತ್ತು ಸಮಯ ಬದಲಾವಣೆಗ ಒಳಪಟ್ಟಿರುತ್ತದೆ. 7) ಇ-ಪೋರ್ಟಲ್ ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : ನಂತರದಲ್ಲಿ ತಿಳಿಸಲಾಗುವುದು. 8) ಇ-ಪೋರ್ಟಲ್ ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : ನಂತರದಲ್ಲಿ ತಿಳಿಸಲಾಗುವುದು. 9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : Website: https://kppp.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳು, ಡಿ.ದೇವರಾಜ ಅರಸು ಭವನ, ಬಾಲರಾಜ್ ಅರಸ್ ರಸ್ತೆ, ಕೆ.ಇ.ಬಿ ಸರ್ಕಲ್ ಶಿವಮೊಗ್ಗ e-mail- dobcmshimoga@gmail.com ದೂ : (08182) 222129..
ಸಹಿ/-
ಜಿಲ್ಲಾ ಅಧಿಕಾರಿಗಳು, ಹಿಂ.ವ.ಕ.ಇಲಾಖೆ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.73.05/ ಝೇಂಕಾರ್/2026-27

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಗ್ರೇಟರ್ ಬೆಂಗಳೂರು ಹೆಸರಲ್ಲಿ ಭೂದಂಧೆ: ಡಿಕೆಶಿ ವಿರುದ್ಧ ಆಕ್ರೋಶ

ಟೌನ್‌ಶಿಪ್‌ಗೆ ದೊಡ್ಡಗೌಡರ ಗುಟುರು

■ **ವಿಕ ಸುದ್ದಿಲೋಕ** ಬೆಂಗಳೂರು

ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ 'ಗ್ರೇಟರ್ ಬೆಂಗಳೂರು ಇಂಟೆಗ್ರೇಟೆಡ್ ಟೌನ್‌ಶಿಪ್' ವಿರುದ್ಧ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಹೋರಾಟದ ಘೋಷಣೆ ಮಾಡಿದ್ದಾರೆ.

''ಟೌನ್‌ಶಿಪ್ ಹೆಸರಿನಲ್ಲಿ ಭೂದಂಧೆ ನಡೆಯುತ್ತಿದ್ದು, ರೈತರ ಜಮೀನು ವಶಪಡಿಸಿಕೊಂಡು ಅನ್ಯಾಯ ಮಾಡಲು ಬಿಡುವುದಿಲ್ಲ,'' ಎಂದು ಗುಡುಗಿದ್ದಾರೆ.

ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ದೇವೇಗೌಡರು, ''ಸಾಮಾಜಿಕ ನ್ಯಾಯದ ಪ್ರತಿಪಾದಕರಾದ ತಾವು ಬೆಂಗಳೂರು ನಗರದ ಉಸ್ತುವಾರಿ ವಹಿಸಿರುವ ವ್ಯಕ್ತಿ ಒತ್ತಡಕ್ಕೆ ಮಣಿದು ರೈತರಿಗೆ ಅನ್ಯಾಯ ಮಾಡಬೇಡಿ,'' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

''ಟೌನ್‌ಶಿಪ್ ಹೆಸರಿನಲ್ಲಿ ರೈತರ ಜಮೀನು ಕಿತ್ತುಕೊಂಡು ದಂಧೆ ನಡೆಸಲು ಹೊರಟಿದ್ದಾರೆ. ಈ ದಂಧೆ ವಿರುದ್ಧ ಹೋರಾಟ ಕೈಗೆತ್ತಿಕೊಳ್ಳುತ್ತೇನೆ. ದೇವೇಗೌಡರು ಸಭೆಯಲ್ಲಿ ಅಳುತ್ತಿದ್ದರು ಎಂದು ಈ ಹಿಂದೆ ಕೆಲವರು ವ್ಯಂಗ್ಯ ಮಾಡುತ್ತಿದ್ದರು. ಆದರೆ, ಈ ವ್ಯವಸ್ಥೆಯನ್ನು ನೋಡಿ ನಾನು ನಗುತ್ತಿದ್ದೇನೆ. ಇಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದು ಯಾರಿಗೂ ಕಾಣದಿರುವುದು ಅತೀವ ನೋವು ತಂದಿದೆ,'' ಎಂದು ಬೇಸರ ವ್ಯಕ್ತಪಡಿಸಿದರು.

''ರೈತರು ಹೊಡೆದರೆ ಹೊಡೆಸಿಕೊಳ್ಳುವೆ. ಬಟ್ಟೆ ಹರಿಯಬಹುದು ಎಂದು ಒಬ್ಬರು ಹೇಳಿಕೊಂಡಿದ್ದಾರೆ. ಅವರು ಹೋಗಿ ರೈತರಿಂದ ಹೊಡೆಸಿಕೊಂಡು ಬರಲಿ, ಆಮೇಲೆ ನಾನು ಹೋಗಿ ಮಾತನಾಡುತ್ತೇನೆ,'' ಎಂದು ನೇರವಾಗಿ ಹೆಸರು ಹೇಳದೆಯೇ ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಗುಟುರು ಹಾಕಿದರು.

''ಕುಮಾರಸ್ವಾಮಿ ಹಿಂದೆ ಘೋಷಣೆ ಮಾಡಿದ್ದ ಟೌನ್‌ಶಿಪ್ ಅನ್ನು ಈಗ ನಾನು ಮಾಡುತ್ತಿದ್ದೇನೆ ಎಂದು ಆ ವ್ಯಕ್ತಿ (ಡಿಸಿಎಂ) ಹೇಳಿದ್ದಾರೆ. ಆಗ ಕುಮಾರಸ್ವಾಮಿ ಮಾಡಲು ಹೊರಟಿದ್ದು ಏನು? ಈಗ ಈ ವ್ಯಕ್ತಿ ಈಗ ಮಾಡುತ್ತಿರುವ ದಂಧೆ ಏನು? ಎಲ್ಲವೂ ಜನರಿಗೆ ಅರ್ಥವಾಗಿದೆ. ನಾನು ಹೋರಾಟ ಮಾಡುತ್ತೇನೆ,'' ಎಂದು ಹೇಳಿದರು.

''ಬೆಂಗಳೂರು ನಗರದ ಮೇಲಿನ ಒತ್ತಡ ತಗ್ಗಿಸಲು ಕುಮಾರಸ್ವಾಮಿ ಅವರು ಅಧಿಕಾರದಲ್ಲಿದ್ದಾಗ ಐದು ಟೌನ್‌ಶಿಪ್‌ಗಳನ್ನು ಮಾಡಲು ಹೊರಟಿದ್ದರು. ಆಗ ಕಾಂಗ್ರೆಸ್ ಪಕ್ಷದ ನಾಯಕರು ದೊಡ್ಡ ಅಪಪ್ರಚಾರ ನಡೆಸಿ, ಸತ್ಯಶೋಧನ ಸಮಿತಿ ರಚಿಸಿ ತನಿಖೆ ಮಾಡಿದರು. ಆದರೆ, ವರದಿಯಲ್ಲಿ ಯಾವ ಸತ್ಯ ಹೊರಗೆ ಬಂತು ಎಂಬುದು ದೇವರಿಗೇ ಗೊತ್ತು. ರೈತರೂ ಜಮೀನು ಬಿಟ್ಟುಕೊಡಲು ಒಪ್ಪದ ಕಾರಣ ಆಗ ಕುಮಾರಸ್ವಾಮಿಯವರು ಐದು ಟೌನ್‌ಶಿಪ್ ಯೋಜನೆಗಳನ್ನು ಕೈಬಿಟ್ಟರು. ಯೋಜನೆಯನ್ನು ತಕ್ಷಣವೇ ಕೈಬಿಡಬೇಕು,'' ಎಂದು ಆಗ್ರಹಿಸಿದರು.

ಸಿದ್ದು ಹೊಗಳಿಕೆ

''ಸಿದ್ದರಾಮಯ್ಯ ಅವರು ಹಿಂದೆ ನನ್ನೊಟ್ಟಿಗೆ ಕೆಲಸ ಮಾಡಿದ್ದಾರೆ. ಅವರ ಸಾಮಾಜಿಕ ನ್ಯಾಯದ ಬಗ್ಗೆ ನನಗೆ ಅರಿವಿದೆ,'' ಎಂದು ಮುಖ್ಯಮಂತ್ರಿಗಳ ಬಗ್ಗೆ ಒಳ್ಳೆಯ ಮಾತನಾಡಿದ ದೇವೇಗೌಡರು, ಬಡವರು, ಹಿಂದುಳಿದವರ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರೇ ಸರಿಯಾದ ನಿರ್ಧಾರ ಮಾಡುವ ಸಮಯ ಇದಾಗಿದೆ. ಬೆಂಗಳೂರು ನಗರದ ಹೊಣೆಗಾರಿಕೆ ಗೊತ್ತಿರುವ ವ್ಯಕ್ತಿ ಒತ್ತಡಕ್ಕೆ ಮಣಿದು ಜನಸಾಮಾನ್ಯರಿಗೆ ಅನ್ಯಾಯ ಮಾಡಲು ಬಿಡಬೇಡಿ,'' ಎಂದು ಮನವಿ ಮಾಡಿದರು.

20 ಸಾವಿರ ಎಕರೆ ಒಡೆಯ!

''ಟೌನ್ ಶಿಪ್ ಹೆಸರಿನಲ್ಲಿ ಫಲವತ್ತಾದ ಭೂಮಿಯನ್ನು ಹೊಡೆಯಲು ಹೊರಟಿದ್ದಾರೆ. ರೈತರಿಂದ ಭೂಮಿ ಕಿತ್ತುಕೊಂಡು ಯಾರಿಗೆ ಕೊಡಲು ಹೊರಟಿದ್ದಾರೆ? ಬೆಂಗಳೂರು ನಗರದ ಸುತ್ತಮುತ್ತ 20 ಸಾವಿರ ಎಕರೆ ಭೂಮಿ ಯಾರ ಹೆಸರಿನಲ್ಲಿದೆ? ಈ ಬಗ್ಗೆ ತನಿಖೆ ನಡೆಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈಗಾಗಲೇ ಪತ್ರ ಬರೆದಿದ್ದೇನೆ. ನಗರದ ಉಸ್ತುವಾರಿ ಹೊತ್ತಿರುವ ವ್ಯಕ್ತಿಯು ಒತ್ತಡಕ್ಕೆ ಮಣಿದು ಸರಕಾರ ಜನರಿಗೆ ಅನ್ಯಾಯ ಮಾಡಲು ಹೊರಟಿದೆ. ಬಿಡದಿ ರೈತರ ಸಮಸ್ಯೆಯನ್ನು ಸರಕಾರದಲ್ಲಿ ಯಾರೂ ಕೇಳುತ್ತಿಲ್ಲ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಡದಿಗೆ ಬರಲು ಸಿಎಂಗೆ ಆಹ್ವಾನ

''ಬಿಡದಿಯ ರೈತರ ಪರಿಸ್ಥಿತಿಯನ್ನು ಒಮ್ಮೆ ನೀವೇ ಖುದ್ದಾಗಿ ಬಂದು ನೋಡಿ,'' ಎಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ ದೇವೇಗೌಡರು; ''ನಾನು ಬರುತ್ತೇನೆ, ನೀವೂ ಬನ್ನಿ. ಸ್ಥಳಕ್ಕೆ ಭೇಟಿ ನೀಡೋಣ. ಈವರೆಗೂ ಸ್ಥಳೀಯ ಶಾಸಕ, ಜಿಲ್ಲಾಧಿಕಾರಿ, ತಹಸೀಲ್ದಾರ್ ಸೇರಿ ಯಾರೊಬ್ಬರೂ ಆ ಜನರ ಸಮಸ್ಯೆ ಆಲಿಸಿಲ್ಲ. ಇಲ್ಲಿ ರೈತರನ್ನು ಬೆದರಿಸಿ ಭೂಮಿ ಕಿತ್ತುಕೊಳ್ಳುವ ದಂಧೆ ನಡೆಯುತ್ತಿದೆ,'' ಎಂದು ಆಪಾದಿಸಿದರು. ''ಆ ವ್ಯಕ್ತಿ ಕನಕಪುರದಲ್ಲಿ ಎಷ್ಟು ಜಮೀನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ನನ್ನ ಬಳಿ ಮಾಹಿತಿ ಇದೆ. ಬೆಂಗಳೂರು ಸುತ್ತಮುತ್ತ ಬಡವರ ಜಮೀನನ್ನು ಕಿತ್ತುಕೊಳ್ಳುವ ಶಕ್ತಿಗಳನ್ನು ಮಟ್ಟ ಹಾಕಬೇಕಿದೆ. ಬಿಡಿಎ ಸೇರಿದಂತೆ ಎಲ್ಲೆಲ್ಲಿ ಅಕ್ರಮ ನಡೆದಿದೆಯೋ ಅಲ್ಲೆಲ್ಲ ನಾನು ಹೋರಾಟ ನಡೆಸುತ್ತೇನೆ. ಈ ಬಗ್ಗೆ ಮುಖ್ಯಮಂತ್ರಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ,'' ಎಂದು ತಿಳಿಸಿದರು.

- ಎಚ್.ಡಿ. ಕುಮಾರಸ್ವಾಮಿ ಮಾಡಿದ್ದೇ ಬೇರೆ, ಈ ವ್ಯಕ್ತಿ ಮಾಡುತ್ತಿರೋ ಕೆಲಸವೇ ಬೇರೆ
- ರೈತರ ಜಮೀನು ಕಿತ್ತುಕೊಳ್ಳಲು ಬಿಡೆನು ಎಂದ ಮಾಜಿ ಪ್ರಧಾನಿ

ಪಾರಂಪರಿಕ ತಾಣವಾಗಿ ಮೇಲ್ದರ್ಜೆಗೆ ಲಕ್ಕುಂಡಿ: ಎಚ್ಕೆಪಿ

ಬೆಂಗಳೂರು: ಲಕ್ಕುಂಡಿಯಿಂದ ಸುಮಾರು ಐದು ದಶಕಗಳ ಹಿಂದೆ ತೆಗೆದುಕೊಂಡು ಹೋಗಿದ್ದ ಪ್ರಾಚ್ಯಾವಶೇಷಗಳನ್ನು ದಿಲ್ಲಿಯ ರಾಷ್ಟ್ರೀಯ ಪ್ರಾಚ್ಯವಸ್ತು ಸಂಗ್ರಹಾಲಯದಿಂದ ವಾಪಸ್ ತಂದು ಲಕ್ಕುಂಡಿಯನ್ನು ಜಾಗತಿಕ ಮಟ್ಟದ ಪಾರಂಪರಿಕ ತಾಣವಾಗಿ ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮ ವಹಿಸುವುದಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಶನಿವಾರ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ''ಕಳೆದೊಂದು ವರ್ಷದ ಅವಧಿಯಲ್ಲಿ ಲಕ್ಕುಂಡಿಯಲ್ಲಿ ಮೂರು ಸಾವಿರ ಪ್ರಾಚ್ಯಾವಶೇಷಗಳನ್ನು ಸಂಗ್ರಹ ಮಾಡಲಾಗಿದ್ದು, ಆ ಜಾಗದ ಗತವೈಭವವನ್ನು ಮರಳಿಸುವ ಪ್ರಯತ್ನವನ್ನು ಜನಾಂದೋಲನವಾಗಿ ಪರಿವರ್ತಿಸಲಾಯಿತು. ಸಾರ್ವಜನಿಕರಿಂದ ಪ್ರಾಚ್ಯ ವಸ್ತುಗಳನ್ನು ಸಂಗ್ರಹ ಮಾಡಲಾಗಿದೆ,'' ಎಂದು ಹೇಳಿದರು.

''ಲಕ್ಕುಂಡಿಯ ಬಾವಿ, ಕಲ್ಯಾಣಿಗಳನ್ನು ದುರಸ್ತಿ ಮಾಡಲಾಗಿದ್ದು, ಪುರಾತನ ದೇವಾಲಯಗಳನ್ನು ಸುರಕ್ಷಿತ ಸ್ಮಾರಕಗಳು ಎಂದು ಘೋಷಣೆ ಮಾಡಲಾಗಿದೆ. ಚಾಲುಕ್ಯರ ಕಾಲದ ಹೊಯ್ಸಳ ವಿಜಯನಗರ ಶೈಲಿಯ ಪ್ರಾಚೀನ ದೇವಾಲಯಗಳ ಶಿಲ್ಪಕಲಾ ವೈಭವವನ್ನು ಮರುಸ್ಥಾಪಿಸಲಾಗಿದೆ. ಇದು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಪ್ರವಾಸಿಗರಿಗೆ ಲಕ್ಕುಂಡಿ ಆಕರ್ಷಣೀಯ ತಾಣವಾಗಿದೆ,'' ಎಂದರು.

ಮಕ್ಕಳನ್ನು ಶಾಲೆಗೆ ಸ್ವಾಗತಿಸಲಿದ್ದಾರೆ ಸಿಎಂ ಸಿದ್ದರಾಮಯ್ಯ: ಮಧು

ಜೂ.1ರಂದು ಶಾಲಾ ಪ್ರಾರಂಭೋತ್ಸವ

■ **ವಿಕ ಸುದ್ದಿಲೋಕ** ಬೆಂಗಳೂರು

ಜೂನ್ 1ರಿಂದ ನೂತನ ಶೈಕ್ಷಣಿಕ ವರ್ಷಕ್ಕೆ ಚಾಲನೆ ಸಿಗಲಿದ್ದು, ರಾಜ್ಯಾದ್ಯಂತ ಶಾಲಾ ಪ್ರಾರಂಭೋತ್ಸವಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನೂತನ ಶೈಕ್ಷಣಿಕ ವರ್ಷದ ಸಿದ್ಧತೆಗಳ ಕುರಿತು 46,000 ಸರಕಾರಿ ಶಾಲೆಗಳ ಶಿಕ್ಷಕರು ಹಾಗೂ ಅಧಿಕಾರಿಗಳೊಂದಿಗೆ ವರ್ಚುವಲ್ ಸಂವಾದ ನಡೆಸಿದ ನಂತರ ಅವರು ಈ ಮಾಹಿತಿ ನೀಡಿದರು.

''ಜೂ.1ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿದ್ಯಾರ್ಥಿಗಳನ್ನು ಶಾಲೆಗೆ ಸ್ವಾಗತಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಯುವ ಮಹಾ ಪೋಷಕ- ಶಿಕ್ಷಕರ ಸಭೆಯನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ನೇರ ಸಂವಾದ ನಡೆಸಲಿದ್ದಾರೆ,'' ಎಂದು ತಿಳಿಸಿದರು.

''ಶಾಲಾ ಪ್ರಾರಂಭೋತ್ಸವದ ವೇಳೆಯೇ ಮುಖ್ಯಮಂತ್ರಿಗಳು ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸಾರ್ವಜನಿಕರಿಗೆ ಶಿಕ್ಷಣಾಧಿಕಾರಿಗಳು ಕೆಪಿಎಸ್ ಶಾಲೆಗಳ ಉದ್ದೇಶ, ಗುಣಮಟ್ಟ ಹಾಗೂ ಅಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಬೇಕು,'' ಎಂದು ಅಧಿಕಾರಿಗಳಿಗೆ ಸೂಚಿಸಿದರು.

''ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಇಲಾಖೆಯ 29-ಅಂಶಗಳ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಸಿಬ್ಬಂದಿಗಳು ಪಾಲಿಸಿದ್ದು, ಪಾರದರ್ಶಕ ಮೌಲ್ಯಮಾಪನ ಮತ್ತು ರಾಜ್ಯಮಟ್ಟದಲ್ಲಿ ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಗಳ ಮೂಲಕ ಉಚಿತವಾಗಿ ನಡೆಸಲಾದ ಪೂರ್ವಸಿದ್ಧತಾ ಪರೀಕ್ಷೆಗಳು ಒಳ್ಳೆಯ ಫಲಿತಾಂಶಕ್ಕೆ ಕಾರಣವಾಗಿವೆ,'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

''ಬಿಸಿಯೂಟ ಯೋಜನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಬೇಕು. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಯಾವುದೇ ಲೋಪ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು'' ಎಂದರು.

''ಶಾಲಾ ಪ್ರಾರಂಭದಲ್ಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಸೇರಿದಂತೆ ಎಲ್ಲಾ ಅಗತ್ಯ ಸಾಮಗ್ರಿಗಳನ್ನು ಸಕಾಲದಲ್ಲಿ ವಿತರಿಸಬೇಕು. ಡಿಡಿಪಿಐ, ಬಿಇಒ, ಸಿಆರ್‌ಪಿ ಮತ್ತು ಬಿಆರ್‌ಪಿ ಅಧಿಕಾರಿಗಳು ಕೇವಲ ಕಡತಗಳ ಪರಿಶೀಲನೆ ಮಾಡದೆ, ಶಾಲೆಗಳಿಗೆ ನಿಯಮಿತವಾಗಿ ಭೇಟಿ ನೀಡಿ ಗುಣಮಟ್ಟದ ಬೋಧನೆ ಮತ್ತು ಶಿಕ್ಷಕರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಬೇಕು,'' ಎಂದು ನಿರ್ದೇಶಿಸಿದರು.

ಎಚ್ಡಿಕೆ ಕುಟುಂಬದಿಂದಲೇ ರಿಯಲ್ ಎಸ್ಟೇಟ್: ಡಿಕೆಶಿ ತಿರುಗೇಟು

■ **ವಿಕ ಸುದ್ದಿಲೋಕ** ಬೆಂಗಳೂರು

''ರಿಯಲ್ ಎಸ್ಟೇಟ್ ವ್ಯವಹಾರದ ಮೂಲಕ ಆಸ್ತಿ ಮಾಡಿಕೊಂಡಿರುವವರು ಕುಮಾರಸ್ವಾಮಿ ಕುಟುಂಬಸ್ಥರೇ ಹೊರತು ನಾನಲ್ಲ,'' ಎಂದು ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ನಾಯಕರ ಆರೋಪಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿರುವವರು ಯಾರು? ಕುಮಾರಸ್ವಾಮಿ ಅವರ ಸಹೋದರ ಪೆರಿಫೆರಲ್ ರಿಂಗ್ ರೋಡ್ ನೆಪದಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿದ್ದಾರೆ. ದೊಡ್ಡ ಗುಬ್ಬಿ, ಚಿಕ್ಕ ಗುಬ್ಬಿ ಭಾಗದಲ್ಲಿ ಜನರನ್ನು ಹೆದರಿಸಿ ಎಕರೆಗೆ ಏಳೆಂಟು ಲಕ್ಷಕ್ಕೆ ಬರೆಸಿಕೊಂಡಿದ್ದಾರೆ. ಈಗ ಈ ಆಸ್ತಿಗಳೆಲ್ಲವೂ ಕೋಟಿ ಕೋಟಿ ಬೆಲೆಬಾಳುತ್ತವೆ,'' ಎಂದು ಆಪಾದಿಸಿದರು.

ಜನ್ಮದಿನಕ್ಕೆ ಅಧಿಕಾರ ಹಸ್ತಾಂತರವಾಗಲಿದೆ ಎಂದು ಕನಸು ಕಾಣುತ್ತಿದ್ದರು ಎಂಬ ದೇವೇಗೌಡರ ವ್ಯಂಗ್ಯದ ಬಗ್ಗೆ ಪ್ರತಿಕ್ರಿಯಿಸಿ, ''ಅವರ ಮಗ(ಕುಮಾರಸ್ವಾಮಿ) ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮಾಡಿದ್ದನ್ನು ದೇವೇಗೌಡರು ನೆನಪಿಸಿಕೊಳ್ಳಲಿ. ಬಳಿಕ ಬೇರೆ ವಿಚಾರದ ಬಗ್ಗೆ ಮಾತನಾಡಲಿ,'' ಎಂದು ತಿರುಗೇಟು ನೀಡಿದರು.

ಹಗಲುಗನಸು: ''ಶುಲ್ಕ ಪಾವತಿಸಿ ಖಾತಾ ಬದಲಾವಣೆಗೆ ಮಾಡಿಕೊಳ್ಳಬೇಡಿ, 2 ವರ್ಷಗಳಲ್ಲಿ ನಾವೇ ಅಧಿಕಾರಕ್ಕೆ ಬರುತ್ತೇವೆ,'' ಎಂಬ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಪ್ರಶ್ನೆಗೆ ಪ್ರತಿಕ್ರಿಯಿಸಿ, ''ಕುಮಾರಸ್ವಾಮಿ ಅವರು ಹಗಲುಗನಸು ಕಾಣುತ್ತಿರುತ್ತಾರೆ,'' ಎಂದು ಹೇಳಿದರು.

''ಬೆಂಗಳೂರು ನಗರದಲ್ಲಿ ಆಡಳಿತ ಸುಧಾರಣೆಗೆ ಐದು ಪಾಲಿಕೆ ಮಾಡಿದ್ದೇವೆ. ನನ್ನ ಕೆಲಸ ಉತ್ತಮವಾಗಿದೆ ಎಂದು ಬಿಜೆಪಿಗರೇ ಖುಷಿ ಪಡುತ್ತಿದ್ದಾರೆ. ಈ ವಿಚಾರದಲ್ಲಿ ಬಿಜೆಪಿಯವರ ಸಲಹೆ ಪಡೆದು ಕೆಲಸ ಮಾಡುತ್ತಿದ್ದೇನೆ. ಆದರೆ, ಕುಮಾರಸ್ವಾಮಿ ಅವರು ತಮ್ಮ ಕಾಲದಲ್ಲಿ ಇಂತಹ ಕೆಲಸ ಮಾಡುವ ಅವಕಾಶ ಸಿಗಲಿಲ್ಲ ಎಂಬ ಅಸೂಯೆಯಲ್ಲಿ ಕೈ ಹಿಸುಕಿಕೊಂಡು ಟೀಕೆ ಮಾಡುತ್ತಿದ್ದಾರೆ. ಅವರಿಗೆ ಹೊಟ್ಟೆಯುರಿ ಬಿಟ್ಟು ಬೇರೆ ಏನು ಇಲ್ಲ'' ಎಂದು ಕಿಡಿಕಾರಿದರು.

AMITY UNIVERSITY
AMITY UNIVERSITY BENGALURU

Placement Driven & Industry Integrated
Leadership Journey Starts Here

- **70+ Companies have visited** the campus for placements including Jio BP, TCS, Sheenlac Paints, HiveMinds, DeltaX, SBI Mutual Fund, Café Coffee Day, Policy Bazaar, Cognizant, Infosys, ICICI Lombard, Tata Technologies, Capgemini, JTP, Magic Pin, Mojo Hunt, Axis Bank...
- **Extensive SBW (Skill Building Workshops),** ICT enabled PPM (Pre-Placement Mock Sessions), Student Centric PMM (Profile Mapping Matrix), Exclusive Triple C Model (Corporate Counselling Club)...
- **CEO Dinner Series,** Industry Mentorship and Conversation Programs
- **A unique 3-tier mentorship model** with guidance from a corporate leader, alumni and faculty
- **Behavioural science modules** and language proficiency programs
- **Involvement of industry professionals** as panelists in admission interviews
- **Career networking opportunities** with 750,000+ well-heeled alumni
- **Optional 5-week Study Abroad Program** in New York, Singapore, London or Dubai
- **Market-driven curricula** to bridge academia & industry
- **Diverse Centres of Excellence** in emerging fields for research depth & domain expertise and student special clubs like GitHub, Google Developer, Environmental Awakening...
- **Several Govt funded research projects** in collaboration with CSIR, ICMR, DST, BRNS...
- **35+ Cutting-edge laboratories** and next-gen immersive learning studios & moot court
- **235+ Distinguished faculty, scientists & staff** shaping the learning experience
- **Amity Innovation Incubator** on campus to encourage entrepreneurial outlook

World-class Amity Bengaluru Campus

2026 ADMISSIONS OPEN FOR 50+ UG & PG PROGRAMMES IN

- Animation & Visual Effects
- Applied Sciences
- Biotechnology
- Business Analytics & AI
- Commerce
- Computer Sc / IT
- Construction Project Mgmt
- Cyber Security
- Data Sciences
- English Literature
- Fashion Design
- Law
- Liberal Arts
- Management
- Media & Communication
- Microbial Technology
- Pharmacy
- Psychology
- Real Estate & Urban Infrastructure
- Engineering
  - CSE
  - CSE (Cloud Computing / Data Analytics / DevOps / Full Stack Dev / IoT / Robotics)
  - AI & ML
  - Electronics & Comm Engg
  - Electrical & Electronics Engg (Electric Vehicle Technology)
  - Embedded System & VLSI
  - Project Management

- Lateral entry & Ph.D programmes also offered
- Bus service available from various key locations
- AC hostel facility available
- Student special interest clubs across diverse domains such as music, community, literary & cultural pursuits

Scholarships	100%	50%	25%
Programmes after Class 12			
Class 12 (agg.)	95%	90%	85%
Programmes after UG (Non-MBA)			
Class 12 (agg.)	95%	90%	-
Graduate (agg.)	80%	75%	-
MBA			
CAT/MAT (%ile)	90	85	80
GMAT/GRE (Score)	650/161	600/157	500/152

For details check the website

APPLY AT : amity.edu/bengaluru
BY : 22ND MAY 2026
CALL : 7303-399-000

AMITY UNIVERSITY BENGALURU, NH 648, DEVANAHALLI - DODDABALLAPUR RD, BENGALURU | E: admissions.blr@amity.edu

ಸಂಚಾರಿ ಪೀಠಕ್ಕೆ ಆಗ್ರಹಿಸಿ ಸಿಜೆಗೆ ಸಿಎಂ ಪತ್ರ

ತ್ವರಿತ ನ್ಯಾಯ ಕಲ್ಪಿಸಲು ಕರಾವಳಿ ಭಾಗದವರ ಮನೆಬಾಗಿಲಿಗೆ ಬರಲಿ ನ್ಯಾಯಾಲಯ

■ **ವಿಕ ಸುದ್ದಿಲೋಕ** ಬೆಂಗಳೂರು

ಕರಾವಳಿ ಭಾಗದ ಜನರಿಗೆ ತ್ವರಿತ ನ್ಯಾಯದಾನ ಕಲ್ಪಿಸುವ ಉದ್ದೇಶದಿಂದ ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಕುರಿತು ಪ್ರಸ್ತಾವದ ಬಗ್ಗೆ ಪರಿಶೀಲನೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರಿಗೆ ಪತ್ರ ಬರೆದಿದ್ದಾರೆ.

''ರಾಜ್ಯದಲ್ಲಿ ನ್ಯಾಯದ ಲಭ್ಯತೆ ಬಲಪಡಿಸುವ ಆಶಯದ ಜವಾಬ್ದಾರಿ ಮತ್ತು ಬದ್ಧತೆಯೊಂದಿಗೆ ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಯಂತಹ ಗಣನೀಯ ಮಹತ್ವದ ಪ್ರಸ್ತಾಪ ಮಾಡಲು ಬಯಸುತ್ತಿದ್ದೇನೆ. ಕರಾವಳಿ ಜಿಲ್ಲೆಗಳ ದಾವೆದಾರರು ಮತ್ತು ವಕೀಲರು ದೂರದ ಬೆಂಗಳೂರಿಗೆ ಪ್ರಯಾಣಿಸಬೇಕಾಗುತ್ತದೆ. ಇದು ಗಣನೀಯ ಆರ್ಥಿಕ ಮತ್ತು ಸಾಗಣೆ ಹೊರೆಗಳನ್ನುಂಟು ಮಾಡುತ್ತದೆ'' ಎಂದು ಅವರು ತಮ್ಮೆರಡು ಪುಟಗಳ ಪತ್ರದಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ.

ಅಲ್ಲದೆ, ''ಮಂಗಳೂರಿನಲ್ಲಿ ಸಂಚಾರಿ ಪೀಠ ಸ್ಥಾಪನೆಯು ನ್ಯಾಯದಾನವನ್ನು ವಿಕೇಂದ್ರೀಕರಿಸುವುದು, ಸಕಾಲಿಕ ಮತ್ತು ಕೈಗೆಟುಕುವ ನ್ಯಾಯದ ಸಾಂವಿಧಾನಿಕ ಭರವಸೆ ಬಲಪಡಿಸುವಲ್ಲಿ ಒಂದು ಪರಿವರ್ತನಾತ್ಮಕ ಹೆಜ್ಜೆಯಾಗಲಿದೆ. ಜತೆಗೆ, ಇದು ಪ್ರಧಾನ ಪೀಠದ ಮೇಲಿನ ಬಾಕಿ ಪ್ರಕರಣಗಳ ಒತ್ತಡಗಳನ್ನು ಗಮನಾರ್ಹವಾಗಿ ತಗ್ಗಿಸುತ್ತದೆ ಮತ್ತು ಶೀಘ್ರ ನ್ಯಾಯದಾನ ಖಾತ್ರಿಯಾಗಲಿದೆ,'' ಎಂದು ತಿಳಿಸಿದ್ದಾರೆ.

''ಕಟ್ಟಡವೇ ಸಂಚಾರಿ ಪೀಠ ಆರಂಭಕ್ಕೆ ಸಿದ್ಧ ಮತ್ತು ಸೂಕ್ತವಾದ ಮೂಲಸೌಕರ್ಯ ಈಗಾಗಲೇ ಲಭ್ಯವಿದೆ. ಮಂಗಳೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುಮಾರು 50,000 ಚದರ ಅಡಿ ವಿಸ್ತೀರ್ಣದ ವಿಶಾಲ ಆವರಣ ಗುರುತಿಸಲಾಗಿದೆ, ನ್ಯಾಯಾಲಯದ ಕಾರ್ಯಾಚರಣೆಗಳಿಗೆ ಅದನ್ನು ತಕ್ಷಣವೇ ಬಳಕೆ ಮಾಡಬಹುದು. ಪೀಠವು ಸುಗಮವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ನಾಗರಿಕ, ಆಡಳಿತಾತ್ಮಕ ಮತ್ತು ಲಾಜಿಸ್ಟಿಕಲ್ ಮೂಲಸೌಕರ್ಯ ಒದಗಿಸಲಾಗುವುದು,'' ಎಂದು ಪತ್ರದಲ್ಲಿ ತಿಳಿಸಲಾಗಿದೆ.

''ಮಂಗಳೂರಿನಲ್ಲಿ ಸಂಚಾರಿ ಪೀಠ ಸ್ಥಾಪಿಸುವುದರಿಂದ ಕರಾವಳಿಯ ನಾಗರಿಕರ ಸಬಲೀಕರಣವಾಗುತ್ತದೆ, ಸಂಸ್ಥೆಗಳಲ್ಲಿ ನಂಬಿಕೆ ಬಲಪಡಿಸುತ್ತದೆ ಮತ್ತು ಸುಲಭ ನ್ಯಾಯದಾನದ ಸಾಮೂಹಿಕ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಕರಾವಳಿ ಪ್ರದೇಶದಲ್ಲಿ ಪೀಠ ಸ್ಥಾಪನೆಯ ಬೇಡಿಕೆಯು ಬಹಳ ಹಿಂದಿನಿಂದಲೂ ಇದೆ. ಈ ಪ್ರಸ್ತಾವನೆಯನ್ನು ಪರಿಗಣಿಸಲು, ಅದಕ್ಕೆ ರಾಜ್ಯ ಸರಕಾರದಿಂದ ಅಗತ್ಯವಿರುವ ಎಲ್ಲಾ ಸಹಕಾರ ನೀಡಲಾಗುವುದು,'' ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ.

ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠದ ಪ್ರಸ್ತಾವನೆ ಕುರಿತು 'ವಿಕ' ಮೇ 3ರಂದು ವಿಶೇಷ ವರದಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

- ಮಂಗಳೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುಮಾರು 50,000 ಚದರ ಅಡಿ ವಿಸ್ತೀರ್ಣದ ವಿಶಾಲ ಆವರಣ ಗುರುತಿಸಲಾಗಿದೆ.
- ಮಂಗಳೂರಿನಲ್ಲಿ ಸಂಚಾರಿ ಪೀಠ ಸ್ಥಾಪಿಸುವುದರಿಂದ ಕರಾವಳಿಯ ನಾಗರಿಕರ ಸಬಲೀಕರಣ ಸಾಧ್ಯ

ಉತ್ತರ ಕನ್ನಡ ಜಿಲ್ಲೆಯ ಸೂಪರ್ ಸ್ಟಾರ್ ರೈತರು

ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ 'ವಿಕ ಸೂಪರ್ ಸ್ಟಾರ್ ರೈತ' ಸಮಾರಂಭದಲ್ಲಿ ಕುಮಟಾ ತಾಲೂಕಿನ ಗಜಾನನ ಹರಿಕಂತ್ರ, ನಾಗರಾಜ ನಾಯ್ಕ, ಮುಂಡಗೋಡು ತಾಲೂಕಿನ ದೇವರಾಜ ನಾಯ್ಕ, ಹೊನ್ನಾವರ ತಾಲೂಕಿನ ನಾಗಪ್ಪ ಕುಪ್ಪುಗೌಡ, ಭಟ್ಕಳ ತಾಲೂಕಿನ ಲಿಂಗಯ್ಯ ಮೊಗೇರ, ಕುಮಟಾ ತಾಲೂಕಿನ ನಾಗವೇಣಿ ಅಂಬಿಗ, ಸಿದ್ದಾಪುರ ತಾಲೂಕಿನ ಮಾಲತಿ ಹೆಗಡೆ ಅವರಿಗೆ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ದಿನಕರ ಶೆಟ್ಟಿ, ಕುಮಟಾ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಭುವನ್ ಭಾಗವತ್, ಕೆಪಿಸಿಸಿ ಕಾರ್ಯದರ್ಶಿ ಸುಷ್ಮಾ ರಾಜಗೋಪಾಲ ರೆಡ್ಡಿ ಉಪಸ್ಥಿತರಿದ್ದರು.

ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ

ವಿಕ ಜ್ಞಾಣ ತಾಣ

ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ಅಂದರೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಭಾರತ ಸರಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಒಂದು ಸ್ವಾಯತ್ತ ಮತ್ತು ಸ್ವಾವಲಂಬಿ ಪ್ರಮುಖ ಪರೀಕ್ಷಾ ಸಂಸ್ಥೆಯಾಗಿದೆ. ಕೇಂದ್ರ ಸಚಿವ ಸಂಪುಟದ ಅನುಮೋದನೆಯೊಂದಿಗೆ ಇದನ್ನು 2017ರ ನವೆಂಬರ್‌ನಲ್ಲಿ ಸ್ಥಾಪಿಸಲಾಯಿತು. ಉನ್ನತ ಮಟ್ಟದ ಪರೀಕ್ಷೆಗಳ ನಿರ್ವಹಣೆ ಈ ಸಂಸ್ಥೆಯ ಹೊಣೆಯಾಗಿದೆ. ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಕಲ್ಪಿಸಲು NEET, JEE Main, UGC-NET, ಮತ್ತು CUET ನಂಥ ಪ್ರಮುಖ ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಇದು ಆಯೋಜಿಸುತ್ತದೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಅನುಷ್ಠಾನ, ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು (CBT) ಸುರಕ್ಷಿತವಾಗಿ ನಡೆಸುವುದು ಎನ್‌ಟಿಎ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ನಿಖರವಾಗಿ ಮೌಲ್ಯೀಕರಿಸಲು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಪರೀಕ್ಷೆ ನಡೆಸುವುದು ಇದರ ಪ್ರಮುಖ ಪಾತ್ರವಾಗಿದೆ.

ಸಹಾಯಕ ಪ್ರಾಧ್ಯಾಪಕ ನಾಪತ್ತೆ

ಬಳ್ಳಾರಿ: ವಿಎಸ್‌ಕೆ ವಿವಿಯ ರಾಜ್ಯಶಾಸ್ತ್ರ ವಿಭಾಗದ ಸಹಾಯ ಪ್ರಾಧ್ಯಾಪಕ ಮೋಹನ್‌ದಾಸ್ ಕಾಣೆಯಾಗಿದ್ದಾರೆ ಎಂದು ಅವರ ಪತ್ನಿ ಜಮಿಮಾ ದೂರಿದ್ದಾರೆ. ''ವಿವಿಯ ಕುಲಪತಿ ಸೇರಿ ಕೆಲ ಸಿಬ್ಬಂದಿಯ ಕಿರುಕುಳದಿಂದ ಮೋಹನ್ ದಾಸ್ ಬೇಸತ್ತಿದ್ದರು. ಕಾಣೆಯಾಗುವ ಮುನ್ನ ಬರೆದಿಟ್ಟಿರುವ ಡೈರಿಯಲ್ಲಿ ತಾವು ಅನುಭವಿಸುತ್ತಿದ್ದ ಕಿರುಕುಳ ಕುರಿತು ನಮೂದಿಸಿದ್ದಾರೆ. ಒಂದು ವರ್ಷದಿಂದ ವೇತನವನ್ನೂ ನೀಡಿಲ್ಲ, ಇದರಿಂದ ನೊಂದ ಪತಿ ಮೇ 12ರಿಂದ ಕಾಣೆಯಾಗಿದ್ದು, ಈ ಬಗ್ಗೆ ಕುಲಪತಿ ಅವರಿಂದ ಯಾವುದೇ ಸ್ಪಂದನೆ ಸಿಗಲಿಲ್ಲ,'' ಎಂದಿದ್ದಾರೆ.

ಶಾಸಕರನ್ನು ಹೊರಗಿಟ್ಟು ಕ್ಷೇತ್ರದಲ್ಲಿ ಸಮಾವೇಶ | ಗೊಂದಲದಲ್ಲಿ ಪಕ್ಷದ ಕಾರ್ಯಕರ್ತರು

ಚಾಮುಂಡೇಶ್ವರಿಯಲ್ಲಿ ಜಿಟಿಡಿಗೆ ಜೆಡಿಎಸ್ ಸಡ್ಡು

■ **ಐತಿಚಂಡ ರಮೇಶ್ ಉತ್ತಪ್ಪ** ಮೈಸೂರು
ramesh.uthappa@timesofindia.com

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶಾಸಕರನ್ನೇ ಧಿಕ್ಕರಿಸಿ ಅದೇ ಪಕ್ಷದ ಸಮಾವೇಶ ನಡೆಯುತ್ತಿರುವುದು ವಿಶೇಷ. ಒಂದೆಡೆ ತಾವು ಜೆಡಿಎಸ್‌ನಲ್ಲಿಯೇ ಇದ್ದೇನೆ ಎಂದು ಜಿ.ಡಿ.ದೇವೇಗೌಡ ಹೇಳುತ್ತಿದ್ದರೂ, ಜಿಲ್ಲೆಯಲ್ಲಿ ಸಾ.ರಾ.ಮಹೇಶ್ ಬಣ 'ಅವರು ನಮ್ಮೊಂದಿಗಿಲ್ಲ' ಎಂದು ಹೇಳುತ್ತಲೇ ಬರುತ್ತಿದ್ದಾರೆ. ಕುಮಾರಸ್ವಾಮಿ ಕೂಡ ಇದಕ್ಕೆ ಧ್ವನಿಗೂಡಿಸಿದ್ದರೂ, ದೊಡ್ಡಗೌಡರು ಜಿಟಿಡಿ ಬಗ್ಗೆ ಸಾಫ್ಟ್ ಆಗಿದ್ದಾರೆ. ಇದರ ನಡುವೆ ಯಾರ ಪರ ಹೋಗಬೇಕು ಎನ್ನುವುದನ್ನು ತಿಳಿಯದೆ ಪಕ್ಷದೊಳಗಿನ ಮೇಲಾಟದಿಂದ ಕಾರ್ಯಕರ್ತರು ಕಂಗಾಲಾಗಿದ್ದಾರೆ.

ಇದು ಇಂದು ನಿನ್ನೆಯ ಕಥೆಯಲ್ಲ, ಕಳೆದ ಏಳೆಂಟು ವರ್ಷಗಳಿಂದಲೂ ಈ ಗೊಂದಲ ಮುಂದುವರಿದಿದೆ. ಚುನಾವಣೆ ಕಾಲಕ್ಕೆ ಒಂದಾಗುವಂತೆ ನಟಿಸುವ ನಾಯಕರು ಮತ್ತೆ ಒಂದೇ ಪಕ್ಷದಲ್ಲಿದ್ದರೂ ಪ್ರತಿಪಕ್ಷಗಳ ನಾಯಕರಂತೆ ವರ್ತಿಸುತ್ತಾರೆ. ಅವರೇ ಪರಸ್ಪರ ಕೆಸರು ಎರಚುತ್ತಾರೆ. ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರೇ ತಮ್ಮ ಪಕ್ಷದ ಶಾಸಕರು ತಮ್ಮೊಂದಿಗಿಲ್ಲ ಎಂದು ಬಹಿರಂಗ ಹೇಳಿಕೆ ಕೊಡುತ್ತಾರೆ. ಮತ್ತೊಂದೆಡೆ ಜೆಡಿಎಸ್‌ನಿಂದ ಗೆದ್ದ ಜಿ.ಟಿ.ದೇವೇಗೌಡರು ತಮ್ಮ ಪಕ್ಷದ ಕಾರ್ಯಕ್ರಮಗಳಲ್ಲಿ ಭಾಗವಹಿಸದೆ ಅಂತರ ಕಾಯ್ದುಕೊಳ್ಳುತ್ತಾರೆ. ದಸರಾ ಉದ್ಘಾಟನಾ ಸಮಾರಂಭ ಸೇರಿದಂತೆ ಅವಕಾಶ ಇದ್ದ ಕಡೆಯೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಾಡಿ ಹೊಗಳಿ ಪಕ್ಷದ ಮುಖಂಡರಿಗೆ ನಿರಂತರ ಮುಜುಗರ ಮಾಡುತ್ತಾರೆ.

ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹಾಗೂ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅವರು ಜಿ.ಟಿ.ದೇವೇಗೌಡರು ಜೆಡಿಎಸ್‌ನಲ್ಲಿ ಇಲ್ಲ ಎಂದು ಸಮಯ ಸಿಕ್ಕಾಗೆಲ್ಲ ಟಾಂಗ್ ಕೊಡುತ್ತಲೇ ಬಂದಿದ್ದಾರೆ.

ಮತ್ತೆ ಒಂದಾಗುತ್ತಾರೆ

ಇದೇ ಸ್ಥಿತಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿಯೂ ಇತ್ತು. ಜಿ.ಟಿ.ದೇವೇಗೌಡರು ಕಾಂಗ್ರೆಸ್‌ನಿಂದ ಸ್ಪರ್ಧಿಸುತ್ತಾರೆ ಎಂದೇ ಹೇಳಲಾಗಿತ್ತು. ಆದರೆ, ಕೊನೆ ಗಳಿಗೆಯಲ್ಲಿ ಜೆಡಿಎಸ್‌ನಲ್ಲಿ ರಾಜಿಯಾಯಿತು. ಎಲ್ಲರೂ ಒಂದಾದರು. ಜಿಟಿಡಿ ಗೆದ್ದರು. ಮುಂದಿನ ಚುನಾವಣೆಯಲ್ಲಿಯೂ ಇದೇ ಸ್ಥಿತಿ ಎಂದು ಹೇಳುತ್ತಾರೆ ಕಾರ್ಯಕರ್ತರು. ಬಹಿರಂಗವಾಗಿ ಕಚ್ಚಾಡಿ ಚುನಾವಣೆ ವೇಳೆಗೆ 'ಅನಿವಾರ್ಯ' ಎಂದು ಒಂದಾಗುತ್ತಾರೆ ಎನ್ನುತ್ತಾರೆ.

ಹರೀಶ್ ಗೌಡರು ಬರುತ್ತಾರಂತೆ!

ಈ ಮಧ್ಯ ಸುದ್ದಿಯೊಂದು ಬಲವಾಗಿ ಹರಿದಾಡುತ್ತಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮುಂದಿನ ಬಾರಿ ಜಿಟಿಡಿ ಸ್ಪರ್ಧೆ ಮಾಡುವುದಿಲ್ಲ, ಅವರಿಗೆ ಕುಮಾರಸ್ವಾಮಿ ಟಿಕೆಟ್ ಕೊಡುವುದಿಲ್ಲ. ಈ ಹಿನ್ನೆಲೆಯಲ್ಲಿ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಚಾಮುಂಡೇಶ್ವರಿಯಿಂದ ನಿಲ್ಲುತ್ತಾರೆ ಎನ್ನಲಾಗುತ್ತಿದೆ. ಇದರಿಂದ ಚಾಮುಂಡೇಶ್ವರಿಯನ್ನು ಜಿಟಿಡಿ ಕುಟುಂಬ ಉಳಿಸಿಕೊಂಡಂತೆಯೂ ಆಗುತ್ತದೆ, ಮುಜುಗರವೂ ತಪ್ಪುತ್ತದೆ ಎನ್ನುವ ಲೆಕ್ಕಾಚಾರ ನಡೆಯುತ್ತಿದೆ. ಹರೀಶ್‌ಗೌಡರು ತಮ್ಮ ಆಪ್ತರು ಯಾರನ್ನಾದರು ಹುಣಸೂರಿನಿಂದ ನಿಲ್ಲಿಸುತ್ತಾರೆ. ಚಾಮುಂಡೇಶ್ವರಿ ಹಾಗೂ ಹುಣಸೂರು ಕ್ಷೇತ್ರಗಳ ಉಸ್ತುವಾರಿ ತಮಗೆ ಬಿಡಿ ಎಂದು ಹೇಳಿದ್ದಾರೆ ಎನ್ನಲಾಗುತ್ತಿದೆ.

ಇಂದು ಬಲಪ್ರದರ್ಶನ

ಈ ನಡುವೆ ಭಾನುವಾರ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಅದೇ ಕ್ಷೇತ್ರದ ಶಾಸಕ ಜಿಟಿಡಿ ಅವರನ್ನು ಕರೆದಿಲ್ಲ, ಅವರಿಲ್ಲದೆ ಸಂಘಟನೆಗೆ ಮುಂದಾಗುತ್ತಿರುವುದು ವಿಶೇಷ. ಜಿ.ಡಿ. ಹರೀಶ್‌ಗೌಡರು ಭಾಗವಹಿಸುತ್ತಿದ್ದಾರೆ. ಜೆಡಿಎಸ್ ನೀಡಿದ ಪ್ರಕಟಣೆ ಹಾಗೂ ಬ್ಯಾನರ್‌ಗಳಲ್ಲಿ ಜಿಟಿಡಿ ಭಾವಚಿತ್ರಗಳಿಲ್ಲ, ಈ ಹಿನ್ನೆಲೆಯಲ್ಲಿ ತಮ್ಮದೇ ಕ್ಷೇತ್ರದಲ್ಲಿ, ತಮ್ಮದೇ ಪಕ್ಷದ ಸಮಾವೇಶಕ್ಕೆ ಜಿಟಿಡಿ ಹೋಗುತ್ತಾರೆಯೇ ಅಥವಾ ತಟಸ್ಥರಾಗುತ್ತಾರೆಯೇ ಎನ್ನುವುದು ಕುತೂಹಲ.

ದೊಡ್ಡಗೌಡರ ಭೇಟಿ ಕುತೂಹಲ

ಎಚ್.ಡಿ.ದೇವೇಗೌಡರ ಹುಟ್ಟು ಹಬ್ಬಕ್ಕೂ ಮುನ್ನವೇ ಜಿ.ಟಿ.ದೇವೇಗೌಡರು ಅವರನ್ನು ಭೇಟಿ ಮಾಡಿರುವುದು ತೀವ್ರ ಕುತೂಹಲ ಮೂಡಿಸಿದೆ. ಈ ಕುರಿತು ಎಚ್.ಡಿ. ದೇವೇಗೌಡರು ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ. ಮತ್ತೆ ಒಂದಾಗಲಿದ್ದಾರೆಯೇ ಅಥವಾ ದೂರು ಹೇಳಲು ಹೋಗಿದ್ದಾರೆಯೇ ಎನ್ನುವ ಕುತೂಹಲ ಕಾರ್ಯಕರ್ತರದ್ದು.

ಟಿಕೆಟ್ ಪೈಪೋಟಿ

ಜಿಟಿಡಿ ಅವರಿಗೆ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲ ಎಂದು ಕುಮಾರಸ್ವಾಮಿ ಹಾಗೂ ಸಾ.ರಾ. ಮಹೇಶ್ ಅವರು ಬಹಿರಂಗವಾಗಿ ಹೇಳಿದ ಹಿನ್ನೆಲೆಯಲ್ಲಿ ಈಗಾಗಲೇ ಮುಖಂಡರಲ್ಲಿ ಪೈಪೋಟಿ ಆರಂಭವಾಗಿದೆ. ಕೆಲವರು ಹರೀಶ್‌ಗೌಡರು ಬರಲಿ ಎಂದರೆ ಇನ್ನು ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಜಿಟಿಡಿ ಕುಟುಂಬವನ್ನು ಹೊರತುಪಡಿಸಿ ಹಲವು ನಾಯಕರಿದ್ದಾರೆ. ಇಲ್ಲವೇ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ಕೊಡಿ ಎಂದು ಸಮಾವೇಶ ಪೂರ್ವಭಾವಿ ಸಭೆಯಲ್ಲಿ ಕೆಲವರು ಬಹಿರಂಗವಾಗಿ ಮಾತನಾಡಿದ್ದಾರೆ.

ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರ ಅವಶ್ಯಕತೆ ಇದೆಯೇ ಹೊರತು ನಾಯಕರಲ್ಲ. ಜಿ.ಟಿ.ದೇವೇಗೌಡರಿಗೆ ಸಾಕಷ್ಟು ಅವಕಾಶ ನೀಡಲಾಗಿದೆ. ಆದರೆ, ಅವರಿಂದ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ. ಈಗ ಚಾಮುಂಡೇಶ್ವರಿಯಲ್ಲಿ ಪಕ್ಷ ಸಂಘಟನೆಗೆ ಸಾಮೂಹಿಕ ನಾಯಕತ್ವದಲ್ಲಿ ಮುಂದಾಗಿದ್ದೇವೆ.
-ಸಾ.ರಾ.ಮಹೇಶ್ ಮಾಜಿ ಸಚಿವ ಹಾಗೂ ಜೆಡಿಎಸ್ ಕಾರ್ಯಾಧ್ಯಕ್ಷ

ನಾನು ಈಗಲೂ ಜೆಡಿಎಸ್‌ನಲ್ಲಿಯೇ ಇದ್ದೇನೆ. ಅವರು ಪಕ್ಷ ಸಂಘಟನೆಗೆ ನನ್ನನ್ನು ಕರೆದಿಲ್ಲ, ಆಹ್ವಾನ ನೀಡಿದರೆ ಮುಂದೆ ನೋಡೋಣ. ಮುಂದಿನ ಚುನಾವಣೆಯಲ್ಲಿಯೂ ಜೆಡಿಎಸ್‌ನಿಂದಲೇ ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸುತ್ತೇನೆ.
-ಜಿ.ಟಿ.ದೇವೇಗೌಡ ಶಾಸಕ.

ಬಾಲಕನಿಂದ ವಾಹನ ಚಾಲನೆ: ಮಾಲೀಕರಿಗೆ ₹38,500 ದಂಡ

■ **ವಿಕ ಸುದ್ದಿಲೋಕ** ಬಂಗಾರಪೇಟೆ (ಕೋಲಾರ)

ಬಾಲಕನೊಬ್ಬ ಕಾನೂನು ಉಲ್ಲಂಘನೆ ಮಾಡಿ ಟಾಟಾ ಏಸ್ ಚಲಾಯಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ವಾಹನ ಮಾಲೀಕನಿಗೆ 38,500 ರೂ.ಗಳ ದಂಡ ವಿಧಿಸಿ ಆದೇಶ ನೀಡಿದೆ.

ತಾಲೂಕಿನ ಕಾಮಸಮುದ್ರ ಪೊಲೀಸ್ ಠಾಣಾ ವ್ಯಾಪ್ತಿಯ ಬೋಡಗುರ್ಕಿ ಗ್ರಾಮದ ಕಡೆಯಿಂದ ಕಾಮಸಮುದ್ರಕ್ಕೆ ಬಾಲಕನೊಬ್ಬ ಟಾಟಾ ಏಸ್ ವಾಹನ ಚಲಾಯಿಸಿಕೊಂಡು ಬರುತ್ತಿದ್ದ. ಇದನ್ನು ಗಮನಿಸಿದ ಸಬ್‌ಇನ್ಸ್‌ಪೆಕ್ಟರ್ ಬಿ.ಪಿ.ಕಿರಣ್ ಕುಮಾರ್ ವಾಹನವನ್ನು ತಡೆದು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಈ ವೇಳೆ ಚಾಲಕ ಅಪ್ರಾಪ್ತ ವಯಸ್ಕ ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ವಾಹನದ ಮಾಲೀಕ ವರದರಾಜು ಎಂಬುವವರ ವಿರುದ್ಧ ದೂರನ್ನು ದಾಖಲಿಸಿದ್ದರು.

ಪ್ರಕರಣದ ಕುರಿತು ವಿಚಾರಣೆ ನಡೆಸಿದ ಬಂಗಾರಪೇಟೆ ನಗರದ ಪ್ರಧಾನ ಸಿವಿಲ್ ನ್ಯಾಯಾಲಯದ ಘನ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಸುಕಿತಾ ಎಸ್. ಅದ್ನಿ, ವಾಹನ ಮಾಲೀಕ ವರದರಾಜುಗೆ 38,500 ರೂ.ಗಳ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸಂಚಾರಿ ನಿಯಮ ಪಾಲಿಸುವಂತೆ ಪೊಲೀಸರು ನಿರಂತರ ಅರಿವು ಮೂಡಿಸಿದರೂ ತಾಲೂಕಿನಲ್ಲಿ ಇತ್ತೀಚೆಗೆ ಬಾಲಕರು ಬೈಕ್, ಟ್ರ್ಯಾಕ್ಟರ್, ಟೆಂಪೋ ಇತ್ಯಾದಿಗಳನ್ನು ಚಲಾಯಿಸುವುದು ಹೆಚ್ಚಾಗುತ್ತಿದೆ. ನ್ಯಾಯಾಲಯದ ಈ ತೀರ್ಪಿನಿಂದ ಪೋಷಕರು ಎಚ್ಚೆತ್ತುಕೊಳ್ಳುತ್ತಾರೆಯೇ ಎಂಬುದನ್ನು ಕಾದುನೋಡಬೇಕಿದೆ.

ಸಾರಿಗೆ ನೌಕರರಿಂದ ತುಮಕೂರು ಚಲೋ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ ರಾಜ್ಯ ಸರಕಾರ ಅನ್ಯಾಯ ವೆಸಗಿದೆ ಎಂದು ಆರೋಪಿಸಿರುವ ಸಾರಿಗೆ ನಿಗಮಗಳ ಜಂಟಿ ಕ್ರಿಯಾ ಸಮಿತಿ, ಮೇ 19ರಂದು ನಡೆಯಲಿರುವ ಸರಕಾರದ ಸಾಧನಾ ಸಮಾವೇಶದ ಸಂದರ್ಭದಲ್ಲೇ ತುಮಕೂರು ಚಲೋ ಪ್ರತಿಭಟನೆ ಹಮ್ಮಿಕೊಂಡಿದೆ.

ಕಳೆದ ಕೆಲವು ವರ್ಷಗಳಿಂದ ವೇತನ ಸಂಬಂಧಿತ ಬೇಡಿಕೆಗಳನ್ನು ಈಡೇರಿಸುವಂತೆ ಸಾರಿಗೆ ನೌಕರರು ಹೋರಾಟ ನಡೆಸುತ್ತಿದ್ದರೂ, ಸರಕಾರ ಸಮಸ್ಯೆ ಬಗೆಹರಿಸಲು ವಿಳಂಬ ಧೋರಣೆ ಅನುಸರಿಸಿದೆ. ಮಾತ್ರವಲ್ಲದೆ, ಕೈಗಾರಿಕಾ ಒಪ್ಪಂದ ಜಾರಿಗೊಳಿಸಲು ಮೀನಮೇಷ ಎಣಿಸುತ್ತಿದ್ದು, ಕಾರ್ಮಿಕ ವಿರೋಧಿ ನೀತಿ ಅನುಸರಿಸಿದೆ. ಈ ಹಿನ್ನೆಲೆಯಲ್ಲಿ ಸರಕಾರದ ಸಾಧನಾ ಸಮಾವೇಶದ ಸಂದರ್ಭದಲ್ಲಿ ತುಮಕೂರು ಚಲೋ ಪ್ರತಿಭಟನೆ ಹಮ್ಮಿಕೊಂಡಿದ್ದು, ಇದರಲ್ಲಿ ಎಲ್ಲ ಸಾರಿಗೆ ನೌಕರರ ಸಂಘಟನೆಗಳು ಭಾಗವಹಿಸುವಂತೆ ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಬಾಬು ಮ್ಯಾಥ್ಯು, ಪ್ರಧಾನ ಕಾರ್ಯದರ್ಶಿ ವಿಜಯ್ ಭಾಸ್ಕರ್ ಕರೆ ನೀಡಿದ್ದಾರೆ.

ರಾಜ್ಯದ ಎಲ್ಲಾ ಶಾಲೆಗಳಲ್ಲಿ ನಾಡಗೀತೆ ಕಡ್ಡಾಯ

ಬೆಂಗಳೂರು: ರಾಜ್ಯದ ಸರಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ನಿತ್ಯ ಬೆಳಗ್ಗೆ ಪ್ರಾರ್ಥನೆ ವೇಳೆ ನಾಡಗೀತೆಯನ್ನು ಕಡ್ಡಾಯವಾಗಿ ಹಾಡುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಪ್ರತಿ ದಿನ ಲಯಬದ್ಧವಾಗಿ ನಾಡಗೀತೆ ಹಾಡುವ ಜತೆಗೆ ಕನ್ನಡ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ನಾಡಗೀತೆಯ ಅರ್ಥ ವಿವರಿಸುವಂತೆ ಇಲಾಖೆ ಸೂಚಿಸಿದೆ.

ಕರ್ನಾಟಕದ ಏಕತೆ, ಭ್ರಾತೃತ್ವ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ನಾಡಗೀತೆಯನ್ನು ಕಡ್ಡಾಯವಾಗಿ ಹಾಡಬೇಕು. ಸರಿಯಾಗಿ ಹಾಡಲು ಸಂಗೀತ ಶಿಕ್ಷಕರ ಮೂಲಕ ತರಬೇತಿ ಕೊಡಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಮುಂತಾದ ರಾಷ್ಟ್ರೀಯ ಹಬ್ಬಗಳು ಹಾಗೂ ಶಾಲಾ ವಾರ್ಷಿಕೋತ್ಸವಗಳಲ್ಲಿ ನಾಡಗೀತೆ ಹಾಡಿಸುವುದು ಕಡ್ಡಾಯ. ನಿಯಮ ಉಲ್ಲಂಘಿಸಿದರೆ ಆಯಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಹೊಣೆ ಮಾಡಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.

ಎಲ್ಲಾ ಶಾಲೆಗಳ ನೋಟಿಸ್ ಬೋರ್ಡ್‌ನಲ್ಲಿ ಈ ಸುತ್ತೋಲೆಯನ್ನು ಪ್ರದರ್ಶಿಸಬೇಕು. ವಿದ್ಯಾರ್ಥಿಗಳು ಶಿಸ್ತುಬದ್ಧವಾಗಿ ನಾಡಗೀತೆ ಹಾಡುವಂತೆ ಕ್ರಮ ವಹಿಸಬೇಕು. ಪೋಷಕರಿಗೂ ನಾಡಗೀತೆಯ ಮಹತ್ವ ಅರಿಯಲು ಅರಿವು ಮೂಡಿಸಬೇಕು ಎಂದು ಸೂಚಿಸಲಾಗಿದೆ. ಕೆಲ ಶಾಲೆಗಳಲ್ಲಿ ರಾಷ್ಟ್ರಗೀತೆಯನ್ನಷ್ಟೇ ಹಾಡುವ ಮೂಲಕ ನಾಡಗೀತೆಯನ್ನು ಕಡೆಗಣಿಸಲಾಗುತ್ತಿತ್ತು. ಇದೀಗ ನೂತನ ಶೈಕ್ಷಣಿಕ ವರ್ಷದಿಂದ ಪ್ರಾರ್ಥನಾ ಸಮಯದಲ್ಲಿ ಎಲ್ಲಾ ಶಾಲೆಗಳಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ತಿಳಿಸಿದೆ.

ಇಂದು ಬೆಂಗಳೂರು–ಮುಂಬಯಿ ರೈಲಿಗೆ ಚಾಲನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಮುಂಬಯಿನ ಲೋಕಮಾನ್ಯ ತಿಲಕ್ ಟರ್ಮಿನಲ್‌ಗೆ ವಾರಕ್ಕೆರಡು ಬಾರಿ ಸಂಚರಿಸುವ ನೂತನ ರೈಲಿಗೆ ಭಾನುವಾರ ಬೆಳಗ್ಗೆ 10 ಗಂಟೆಗೆ ಚಾಲನೆ ಸಿಗಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ರೈಲ್ವೆ ಖಾತೆ ಸಹಾಯಕ ಸಚಿವ ವಿ. ಸೋಮಣ್ಣ, '' ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಆನ್‌ಲೈನ್ ಮೂಲಕ ನೂತನ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ. ಈ ರೈಲು ಬೆಂಗಳೂರಿನ ಎಸ್‌ಎಂವಿಟಿ, ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಬೆಳಗಾವಿಯಲ್ಲಿ ನಿಲುಗಡೆ ಹೊಂದಿದೆ. ಸದ್ಯ 22 ಗಂಟೆ ಪ್ರಯಾಣ ಅವಧಿ ತಗಲುತ್ತಿದೆ. ಮುಂದೆ ರೈಲು ಪ್ರಯಾಣದ ಅವಧಿಯನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು,'' ಎಂದು ತಿಳಿಸಿದರು.

ಕನ್ನಡದಲ್ಲಿ ರೈಲ್ವೆ ಮುಂಬಡ್ತಿ ಪರೀಕ್ಷೆಗೆ ಅವಕಾಶ ನೀಡದ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, ''ದೇಶದ ಬೇರೆ ರಾಜ್ಯಗಳಲ್ಲೂ ರೈಲ್ವೆ ಆಂತರಿಕ ಮುಂಬಡ್ತಿ 'ಸಿ', 'ಡಿ' ವೃಂದ ಪರೀಕ್ಷೆಯಲ್ಲಿ ಪ್ರಾದೇಶಿಕ ಭಾಷೆಗಳಿಗೆ ಅವಕಾಶವಿಲ್ಲ. ತಮಿಳುನಾಡು, ಆಂಧ್ರ, ತೆಲಂಗಾಣ ಹಾಗೂ ಕೇರಳಗಳಲ್ಲಿಯೂ ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ ಇಂಗ್ಲಿಷ್-ಹಿಂದಿ ಮಾತ್ರ ಇದೆ. ನಾವೇ ಹಿಂದೆ ಕರ್ನಾಟಕದಲ್ಲಿ ಕನ್ನಡದಲ್ಲಿ ಪರೀಕ್ಷೆ ನಡೆಸಿದ್ದೆವು. ನೇರ ನೇಮಕಾತಿ ಪರೀಕ್ಷೆಗೆ ಕನ್ನಡದಲ್ಲಿ ಅವಕಾಶವಿದೆ,'' ಎಂದರು.

''ರಾಜ್ಯ ಸರಕಾರ ಅವೈಜ್ಞಾನಿಕವಾಗಿ ವಿವಿಧ ದರ ಏರಿಸಿದ್ದು, ಮಿತವ್ಯಯದ ಬಗ್ಗೆ ಪ್ರಧಾನಿ ಮೋದಿಯವರ ಆಡಳಿತದ ಕುರಿತು ಮಾತನಾಡುವ ನೈತಿಕತೆ ಕಳೆದುಕೊಂಡಿದೆ. ಸಹಕಾರ, ಸಾರಿಗೆ, ಅಬಕಾರಿ, ಹಾಲಿನ ದರ ಹಾಗೂ ಆಸ್ತಿ ನೋಂದಣಿ, ಕೆಇಆರ್‌ಸಿ ದರವನ್ನು ಬೇಕಾಬಿಟ್ಟಿ ಜಾಸ್ತಿ ಮಾಡಿದ್ದು ಜನತೆಗೆ ಗೊತ್ತಿದೆ. ಸಂಕಷ್ಟದ ಸ್ಥಿತಿ ಇರುವಾಗ ಜನತೆ ಸಹಕರಿಸಬೇಕು,'' ಎಂದು ಮನವಿ ಮಾಡಿದರು.

5 ಸಾವಿರ ಬೈಕ್ ಚಲೋ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ವ್ಯಾಪ್ತಿಯ 13 ಹಳ್ಳಿಗಳ ರೈತರು ಜೂ.4ರಂದು ಸುಮಾರು 5 ಸಾವಿರ ಬೈಕ್‌ಗಳ ಮೂಲಕ ವಿಧಾನಸೌಧದವರೆಗೆ ರ‍್ಯಾಲಿ ನಡೆಸಲು ನಿರ್ಧರಿಸಿದ್ದಾರೆ.

ಕೈಗಾರಿಕಾ ಪ್ರದೇಶಗಳಿಗೆ ಭೂ ಸ್ವಾಧೀನ ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸುತ್ತಿರುವ ಧರಣಿ 62ನೇ ದಿನಕ್ಕೆ ಕಾಲಿಟ್ಟಿದ್ದರೂ ಸರಕಾರದಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಸಿಗದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಂಡಿರುವುದಾಗಿ ರೈತ ನಾಯಕರು ತಿಳಿಸಿದ್ದಾರೆ.

ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ ಅವರ ನೇತೃತ್ವದಲ್ಲಿ ಕೈಗಾರಿಕಾ ಭೂ ಸ್ವಾಧೀನ ವಿರೋಧಿ ಹೋರಾಟ ನಡೆಯುತ್ತಿದೆ. ರಾಜ್ಯ ಸರಕಾರ ರೈತರ ಬೇಡಿಕೆಗೆ ಸರಿಯಾದ ಸ್ಪಂದನೆ ನೀಡುತ್ತಿಲ್ಲ, ಹೀಗಾಗಿ ಹೋರಾಟಕ್ಕೆ ತಾರ್ಕಿಕ ಅಂತ್ಯ ಕಾಣಿಸಬೇಕೆಂಬ ಉದ್ದೇಶದಿಂದ ವಿಧಾನಸೌಧ ಚಲೋ ಬೈಕ್ ರ‍್ಯಾಲಿ ನಡೆಸಲಾಗುತ್ತಿದೆ. ಭೂಸ್ವಾಧೀನ ನಿರ್ಧಾರ ವಾಪಸ್ ತೆಗೆದುಕೊಳ್ಳುವವರೆಗೂ ಹೋರಾಟ ಮುಂದುವರಿಸಲು ತೀರ್ಮಾನಿಸಲಾಗಿದೆ.

ವಿಧಾನಸೌಧದವರೆಗೆ ರ‍್ಯಾಲಿ

ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಹಾಸನ, ಬೆಂಗಳೂರು ಗ್ರಾಮಾಂತರ, ತುಮಕೂರು ಸೇರಿದಂತೆ ಒಟ್ಟು 7 ಜಿಲ್ಲೆಗಳ ಸುಮಾರು 5 ಸಾವಿರ ಬೈಕ್‌ಗಳು ಈ ರ‍್ಯಾಲಿಯಲ್ಲಿ ಭಾಗವಹಿಸುವ ಗುರಿ ನೀಡಲಾಗಿದೆ. ಈ ಸಂಬಂಧ ಈಗಾಗಲೇ ಎಲ್ಲ ಜಿಲ್ಲೆಗಳಲ್ಲೂ ಗ್ರಾಮಸಭೆಗಳನ್ನು ನಡೆಸಿದ್ದು, ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಲು ರಾಜ್ಯ ಸರಕಾರಕ್ಕೆ ಯಾವುದೇ ಅವಕಾಶ ಕೊಡಬಾರದು ಎನ್ನುವ ಸಂಕಲ್ಪದೊಂದಿಗೆ ರೈತರನ್ನು ಸಂಘಟಿಸಲಾಗುತ್ತಿದೆ. ಜೂ.4ರಂದು ಈ ಹೋರಾಟಕ್ಕೆ ತಾರ್ಕಿಕ ಅಂತ್ಯ ಹಾಡಲು ನಿರ್ಧರಿಸಲಾಗಿದೆ.

ಕಮರದಿರಲಿ ನೀಟ್ ಆಕಾಂಕ್ಷೆ

» ಮೊದಲ ಪುಟದಿಂದ

ಈ ಬಾರಿ ಪರೀಕ್ಷೆಯನ್ನು ಉತ್ತಮವಾಗಿ ಬರೆದಿದ್ದು, ಸರಕಾರಿ ವೈದ್ಯಕೀಯ ಸೀಟು ಸಿಗುವುದು ಖಚಿತ ಎಂಬ ಭರವಸೆಯಲ್ಲಿ ಇದ್ದಿದ್ದಾಗಿ ಕುಟುಂಬಸ್ಥರು ತಿಳಿಸಿದ್ದಾರೆ. ಆದರೆ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಪರೀಕ್ಷೆ ರದ್ದಾಗಿದ್ದು, ಆಘಾತದಿಂದ ನೊಂದು ಆತ್ಮಹತ್ಯೆಗೆ ಶರಣಾಗಿದ್ದಾನೆ. ಶುಕ್ರವಾರ (ಮೇ 15) ಮಧ್ಯಾಹ್ನ ಪ್ರದೀಪ್ ತನ್ನ ಸಹೋದರಿಯ ಸ್ಕಾರ್ಫ್ ಬಳಸಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾನೆ. ಘಟನೆ ನಡೆದ ಸಮಯದಲ್ಲಿ ಆತನ ಕಿರಿಯ ತಂಗಿ ಕೋಚಿಂಗ್ ಕ್ಲಾಸ್‌ಗೆ ಹೋಗಿದ್ದರು. ಹಿರಿಯ ತಂಗಿ ಸ್ನಾನ ಮುಗಿಸಿ ಹೊರ ಬಂದಾಗ ಪ್ರದೀಪ್ ಫ್ಯಾನ್‌ಗೆ ನೇಣು ಹಾಕಿಕೊಂಡಿರುವುದು ಬೆಳಕಿಗೆ ಬಂದಿದೆ.

3ನೇ ಬಾರಿಗೆ ರಿತಿಕ್ ಪರೀಕ್ಷೆ: ಉತ್ತರ ಪ್ರದೇಶದ ಲಖಿಂಪುರ್ ಖೇರಿಯ 21 ವರ್ಷದ ರಿತಿಕ್ ಮಿಶ್ರಾ ಎಂಬ ವಿದ್ಯಾರ್ಥಿ ಗುರುವಾರ (ಮೇ 14) ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 3ನೇ ಬಾರಿಗೆ ಪರೀಕ್ಷೆ ಬರೆದಿದ್ದ ರಿತಿಕ್, ಈ ಬಾರಿ ಉತ್ತಮ ಅಂಕಗಳನ್ನು ಪಡೆಯುವ ನಿರೀಕ್ಷೆಯಲ್ಲಿದ್ದ.

ದಿಲ್ಲಿಯಲ್ಲಿ ಯುವತಿ ಸಾವು: ದಿಲ್ಲಿಯ ಆಜಾದ್‌ಪುರದಲ್ಲಿ 20 ವರ್ಷದ ಅನಿಷ್ಕಾ ಪಾಂಡೆ ತನ್ನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕಳೆದ ಬಾರಿ ಪರೀಕ್ಷೆಯಲ್ಲಿ ಕೇವಲ 4 ಅಂಕಗಳ ಅಂತರದಲ್ಲಿ ಯುವತಿ ಸೀಟು ವಂಚಿತಳಾಗಿದ್ದಳು.

ಗೋವಾದ ಬಾಲಕ ಆತ್ಮಹತ್ಯೆ: ದಕ್ಷಿಣ ಗೋವಾದ ಮಾರ್ಗೋವ್‌ನಲ್ಲಿ 17 ವರ್ಷದ ಬಾಲಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಡೆತ್‌ನೋಟ್‌ನಲ್ಲಿ ಶೈಕ್ಷಣಿಕ ಒತ್ತಡವೇ ಕಾರಣ ಎಂದು ಬರೆದಿಟ್ಟಿದ್ದಾನೆ.

ಯುವ ಮನಸ್ಸುಗಳನ್ನು ಹತ್ತಿಕ್ಕುತ್ತಿರುವ ವ್ಯವಸ್ಥೆ

ಭಾರತದಲ್ಲಿ ವೈದ್ಯಕೀಯ ಪ್ರವೇಶಕ್ಕೆ 'ನೀಟ್' ಏಕೈಕ ಮಾರ್ಗವಾಗಿರುವುದರಿಂದ, ವಿದ್ಯಾರ್ಥಿಗಳ ಮೇಲಿನ ಪೋಷಕರ ಮತ್ತು ಸಮಾಜದ ಒತ್ತಡ ತೀವ್ರವಾಗಿರುತ್ತದೆ. ಕೋಟಾ ಅಥವಾ ಸಿಕಾರ್‌ನಂತಹ ಕೋಚಿಂಗ್ ಹಬ್‌ಗಳಲ್ಲಿ ಓದಿಸಲು ಅನೇಕ ಕುಟುಂಬಗಳು ತಮ್ಮ ಜೀವಮಾನದ ಉಳಿತಾಯವನ್ನು ವ್ಯಯಿಸುತ್ತವೆ ಅಥವಾ ಜಮೀನು ಮಾರಾಟ ಮಾಡುತ್ತವೆ. ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ವ್ಯವಸ್ಥಿತ ವೈಫಲ್ಯಗಳಿಂದಾಗಿ ಪರೀಕ್ಷೆಗಳು ರದ್ದಾದಾಗ, ವಿದ್ಯಾರ್ಥಿಗಳ ಮಾನಸಿಕ ಸ್ಥಿತಿ ಕುಸಿಯುತ್ತದೆ. ಜೂನ್ 21ಕ್ಕೆ ಮರುಪರೀಕ್ಷೆ ನಿಗದಿಯಾಗಿದ್ದರೂ, ಮೊದಲಿನಿಂದ ಎಲ್ಲವನ್ನೂ ಪ್ರಾರಂಭಿಸುವುದು ವಿದ್ಯಾರ್ಥಿಗಳಿಗೆ ತೀವ್ರ ಮಾನಸಿಕ ಹಿಂಸೆ ಎನಿಸಬಹುದು ಎಂದು ಮನೋವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ಸಾಲಬಾಧೆ: ರೈತ ಆತ್ಮಹತ್ಯೆ

■ **ವಿಕ ಸುದ್ದಿಲೋಕ** ಬೈಲುಕುಪ್ಪೆ (ಮೈಸೂರು)

ಸಾಲಬಾಧೆ ತಾಳಲಾರದೆ ರೈತರೊಬ್ಬರು ವಿಷ ಕುಡಿದು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪಿರಿಯಾಪಟ್ಟಣ ತಾಲೂಕಿನ ಹುಣಸವಾಡಿ ಗ್ರಾಮದ ಮಹಾದೇವ (40) ಮೃತರು. ಅವರಿಗೆ 1.27 ಎಕರೆ ಜಮೀನಿದ್ದು, ಜೋಳ ಇನ್ನಿತರ ಬೆಳೆಗಾಗಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಒಂದು ಲಕ್ಷ ರೂ., ಮೈಕ್ರೊ ಫೈನಾನ್ಸ್ ಸೇರಿದಂತೆ ಇತರ ಸಂಸ್ಥೆಗಳಲ್ಲಿ ಸಾಲ ಪಡೆದಿದ್ದರು ಎನ್ನಲಾಗಿದೆ. ಆದರೆ ಫಸಲು ಲಾಭದಾಯಕವಾಗದ ಹಿನ್ನೆಲೆಯಲ್ಲಿ ಸಾಲ ತೀರಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ನಿ ಹಾಗೂ 4 ವರ್ಷದ ಪುತ್ರಿ ಇದ್ದಾರೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲಾ ಪಂಚಾಯತ್ ಕಟ್ಟಡ, 1ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/02/2026–27 ದಿನಾಂಕ: 16–05–2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ
2026–27 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **25–05–2026 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/707/ಅಡ್ವರ್ಟೈಸ್/2026–27

SANJEEVINI-Karnataka State Rural Livelihood Promotion Society
Skill Development, Entrepreneurship and Livelihood Department
Office of the Mission Director, Sanjeevini-KSRLPS
4, 2nd Floor, MYSUGAR Building, J.C. Road, Near Town Hall
Bengaluru-560002 email: nrlmkarnataka@gmail.com
EXPRESSION OF INTEREST (EOI)
Subject: Inviting Applications under Deen Dayal Upadhya Grameen Kaushalya Yojana 2.0 (DDU-GKY 2.0) project in the State of Karnataka
Sanjeevini - Karnataka State Rural Livelihood Promotion Society (KSRLPS), under the Skill Development, Entrepreneurship and Livelihood Department, Government of Karnataka is implementing Deen Dayal Upadhya Grameen Kaushalya Yojana (DDU-GKY). Sanjeevini – KSRLPS invites proposals from the Agencies who are registered under Ministry of Rural Development, Government of India and are having valid Permanent Registration Number (PRN) for the implementation of Deen Dayal Upadhyaya Grameena Kaushalya Yojana 2.0 (both Regular and Captive Employment) program in the State of Karnataka. The agencies having expertise in skill ecosystem and willingness to impart high quality training and provide placement opportunities are encouraged to submit their proposals. For detailed information and Bank details for application fee you may visit the portal **https://ksrlps.karnataka.gov.in.**
The last date for submitting the proposal along with application fee will be on or before **16.06.2026**. For more information and program guidelines you may visit the MoRD portal **kaushal.rural.gov.in.**
For any queries, you may write to ddugkysrlmkarnataka@gmail.com and nrlmkarnataka@gmail.com
Sd/-
Mission Director
National Livelihood Mission
Karnataka
DIPR/CP/712/CCL/2026-27

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080–2793 4470 / 2793 5412 ಇ–ಮೇಲ್: hosakote.pa@gmail.com URL : www.hosakote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/09/2026–27 ದಿನಾಂಕ: 16.05.2026
ಸಾರ್ವಜನಿಕ ಪ್ರಕಟಣೆ
ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.
***
ಶ್ರೀಮತಿ ನಳಿನಿ ಕೆ.ಎನ್. ಕೋಂ ಶ್ರೀನಿವಾಸ್ ಹೆಚ್. ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕೊಳತೂರು ಗ್ರಾಮದ ಸ.ನಂ. 142/2 ರಲ್ಲಿನ 20 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕಾ ಬೆಳವಣಿಗೆಗಳು ಬಂದಿದ್ದು/ಬರುತ್ತಲಿದ್ದು, "ಉದ್ದೇಶಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ..
ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ಇತರರಿಗೆ/ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.
ವಾ.ಸಾ.ಸಂ.ಇ/ವಾಪ್ರ/714/ಅಡ್ವ/2026–27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ: ಬೆಂಅಪ್ರಾ/ಕಾಅ/ಉತ್ತರ/ಟೆಂಡರ್/198/2026–27 ದಿನಾಂಕ: 16.05.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ http://kppp.karnataka.gov.in ಮೂಲಕ)
ಆಯುಕ್ತರು, ಬೆಂಅಪ್ರಾ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಉತ್ತರ ವಿಭಾಗ, ಬೆಂಅಪ್ರಾ, ಬೆಂಗಳೂರು ಇವರು **ವಾರ್ಡ್ ಸಂ.76 ರಲ್ಲಿನ ಕಾಚರಕನಹಳ್ಳಿ ಮೈದಾನದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕಾಗಿ ಸಲಹಾ ಸೇವೆಗಳನ್ನು ಒದಗಿಸಲು–ಡಿಪಿಆರ್–2 ಸಿದ್ಧಪಡಿಸಲು ಅರ್ಹ ಸಲಹೆಗಾರರಿಂದ** ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ಅಂದಾಜು ಮೌಲ್ಯ (ಜಿಎಸ್‌ಟಿ ಹೊರತುಪಡಿಸಿ): **ರೂ.2066.71 ಲಕ್ಷಗಳು.** ಇಎಂಡಿ: **ರೂ. 1.00 ಲಕ್ಷ (ಇದನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು).** ಟೆಂಡರ್ ಪ್ರಕ್ರಿಯಾ ಶುಲ್ಕ: **ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನೋಡಿ.** ಡಿಪಿಆರ್ ಸಿದ್ಧಪಡಿಸುವ ಅವಧಿ: **1 ತಿಂಗಳು.** ಪ್ರಸ್ತಾವನೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **26.05.2026 ರಂದು 16.00 ಗಂಟೆ ವರೆಗೆ.** ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂ. 080–46010000/68948777 ಸಂಪರ್ಕಿಸಿ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಉತ್ತರ ವಿಭಾಗ, ಬೆಂಅಪ್ರಾ, ಬೆಂಗಳೂರು

ಆಟೋದಲ್ಲಿ ಐಸ್‌ಕ್ರೀಂ ಮಾರುತ್ತಿದ್ದ ಶಿವಾನಂದ ನೀಲಣ್ಣವರ | ಬಹುಕೋಟಿ ವಹಿವಾಟು, ವಂಚನೆ ಶಂಕೆ; ಪೊಲೀಸ್ ಡ್ರಿಲ್ | ತಿಂಗಳಿನಿಂದ ಗೌಪ್ಯ ಕಾರ್ಯಾಚರಣೆ, ಸಿಐಡಿ ತನಿಖೆ ಸಾಧ್ಯತೆ

ಅಂದು ಕಚೇರಿ ಸಹಾಯಕ, ಇಂದು ಕೋಟ್ಯಧೀಶ!

■ **ವಿಕ ಸುದ್ದಿಲೋಕ** ಬೆಳಗಾವಿ

ಶಿವಂ ಅಸೋಸಿಯೇಟ್ಸ್ ಹೆಸರಿನಲ್ಲಿ ನಡೆಯುತ್ತಿದ್ದ ಬಹುಕೋಟಿ ರೂಪಾಯಿ ವಹಿವಾಟು ಪ್ರಕರಣದ ರೂವಾರಿ ಶಿವಾನಂದ ನೀಲಣ್ಣವರ ಒಂದು ಕಾಲದಲ್ಲಿ ಸಹಾಯಕನಾಗಿ ಕೆಲಸ ಮಾಡಿ, ಆಟೋದಲ್ಲಿ ಐಸ್‌ಕ್ರೀಂ ಮಾರಾಟ ಮಾಡಿ ಬದುಕು ಕಟ್ಟಿಕೊಂಡವರು.

ಹುಬ್ಬಳ್ಳಿಯ ಉಣಕಲ್ ಮೂಲದ ಶಿವಾನಂದ ನೀಲಣ್ಣವರ ತಂದೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದವರು. ನಿವೃತ್ತಿ ನಂತರ ಕೆಇಬಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಿಧನರಾಗಿದ್ದರು. ಬಳಿಕ ಆ ಉದ್ಯೋಗ ಶಿವಾನಂದ ಅವರ ಸೋದರನಿಗೆ ದೊರಕಿತ್ತು. ಸೋದರನಿಗೆ ಬೆಳಗಾವಿಗೆ ವರ್ಗಾವಣೆ ಆದ ಹಿನ್ನೆಲೆಯಲ್ಲಿ ಇಡೀ ಕುಟುಂಬವೇ ಬೆಳಗಾವಿಗೆ ಬಂದು ನೆಲೆಸಿತ್ತು.

ಶಿವಾನಂದ ನೀಲಣ್ಣವರ

ದ್ವಿತೀಯ ಪಿಯುಸಿ ವರೆಗೆ ಶಿಕ್ಷಣ ಪಡೆದಿದ್ದ ಶಿವಾನಂದ, ಆರಂಭಿಕ ದಿನಗಳಲ್ಲಿ ರೂರಲ್ ಮೆಡಿಕಲ್ ಕಾಲೇಜಿನಲ್ಲಿ ಕಚೇರಿ ಸಹಾಯಕನಾಗಿ ಕೆಲಸ ಮಾಡಿದ್ದರು. ಬಳಿಕ 2004ರಿಂದ 2006ರವರೆಗೆ ಆಟೋದಲ್ಲಿ ಫ್ರಿಜ್ ಅಳವಡಿಸಿಕೊಂಡು ಐಸ್‌ಕ್ರೀಂ ಮಾರಾಟ ಮಾಡುತ್ತಿದ್ದರು. ನಂತರ ಆ ಉದ್ಯಮ ವಿಸ್ತರಿಸಿ ಐಸ್‌ಕ್ರೀಂ ಫ್ಯಾಕ್ಟರಿ ಆರಂಭಿಸಿದ್ದರು.

2012ರಲ್ಲಿ ಷೇರುಪೇಟೆಯಲ್ಲಿ ಹೂಡಿಕೆ ಆರಂಭಿಸಿದ್ದರಾದರೂ, ಅದರಲ್ಲಿ ನಿರೀಕ್ಷಿತ ಮಟ್ಟದ ಯಶಸ್ಸು ಸಿಗಲಿಲ್ಲ, ನಂತರ 'ಅಕ್ಯೂಮೆನ್' ಆ್ಯಪ್ ಅಭಿವೃದ್ಧಿಪಡಿಸಿ ಅದರ ಮೂಲಕ ಸಾರ್ವಜನಿಕರಿಂದ ಹಣ ಸ್ವೀಕರಿಸಲು ಆರಂಭಿಸಿ, ಹಂತಹಂತವಾಗಿ ಬೆಳೆದು ಕೋಟ್ಯಂತರ ರೂಪಾಯಿ ವಹಿವಾಟು ನಡೆಸಲು ಶುರು ಮಾಡಿದ್ದರು.

ತನಿಖೆ ಹೊಣೆ ಸಿಐಡಿಗೆ?

ಶಿವಂ ಅಸೋಸಿಯೇಟ್ಸ್ ಪ್ರಕರಣ ಅಂತಾರಾಜ್ಯ ನಂಟಿನ ಕೇಸ್ ಎಂದು ಶಂಕಿಸಿರುವ ಬೆಳಗಾವಿ ಪೊಲೀಸರು ಇದರ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸಲು ಮುಂದಾಗಿದ್ದಾರೆ. ಶುಕ್ರವಾರ ಸಹಕಾರ ಇಲಾಖೆ ಅಧಿಕಾರಿಗಳು ದೂರು ಸಲ್ಲಿಸಿದ ಬಳಿಕ, ಕೆಪಿಐಡಿ ಹಾಗೂ ಬಡ್ಸ್ ಆ್ಯಕ್ಟ್ ಅಡಿ ಪ್ರಕರಣ ದಾಖಲಿಸಿಕೊಂಡ ಮಾಳಮಾರುತಿ ಠಾಣೆ ಪೊಲೀಸರು ಶಿವಾನಂದ ನೀಲಣ್ಣವರ ಅವರನ್ನು ತಡರಾತ್ರಿ ಬಂಧಿಸಿದ್ದು, ಶನಿವಾರ ಅವರ ಕಚೇರಿಯಲ್ಲಿ ಸ್ಥಳ ಮಹಜರು ನಡೆಸಿದ್ದಾರೆ. ಶಿವಂ ಅಸೋಸಿಯೇಟ್ಸ್ ಹಾಗೂ 'ಅಕ್ಯುಮೆನ್' ಆ್ಯಪ್‌ಗೆ ಸಂಬಂಧಿಸಿದ ಬ್ಯಾಂಕ್ ದಾಖಲೆಗಳು, ಕಾಗದ ಪತ್ರ, ಡಿಜಿಟಲ್ ವಹಿವಾಟು ಮತ್ತು ಠೇವಣಿದಾರರ ಪಟ್ಟಿ ಸೇರಿದಂತೆ ಎಲ್ಲ ಮಾಹಿತಿಯನ್ನು ಪೊಲೀಸರು ಜಾಲಾಡಿದ್ದಾರೆ. ಈ ಪ್ರಕರಣದಲ್ಲಿ ಕೋಟ್ಯಂತರ ರೂಪಾಯಿ ವಹಿವಾಟು, ಅನಧಿಕೃತ ಬಡ್ಡಿ ವ್ಯವಹಾರ ಮಾಡಿದ್ದು ಮೇಲ್ನೋಟಕ್ಕೆ ಕಂಡು ಬಂದಿದೆ. ಹೀಗಾಗಿ, ಉನ್ನತ ತನಿಖೆಯ ಅಗತ್ಯ ಇರುವುದರಿಂದ ಪ್ರಕರಣದ ತನಿಖೆ ಕೈಗೆತ್ತಿಕೊಳ್ಳುವಂತೆ ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ಸಿಐಡಿಗೆ ಪತ್ರ ಬರೆದಿದ್ದಾರೆ.

ಈ ಪ್ರಕರಣದಲ್ಲಿ ಸುಮಾರು 35 ಸಾವಿರ ಜನ ಸಿಲುಕಿದ್ದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಎಷ್ಟು ಹಣ ಸಂಗ್ರಹಿಸಲಾಗಿದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಸದ್ಯದ ಮಾಹಿತಿ ಪ್ರಕಾರ 50 ಕೋಟಿ ರೂಪಾಯಿಗೂ ಹೆಚ್ಚು ವಹಿವಾಟು ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಒಟ್ಟು ಎಷ್ಟು ಹಣ ಸಂಗ್ರಹಿಸಲಾಗಿದೆ, ಬಳಿಕ ಹಣ ಎಲ್ಲಿಗೆ ಹೋಗಿದೆ ಎಂಬುದರ ಕುರಿತು ತನಿಖೆ ಮುಂದುವರಿದಿದೆ.

- ಮೊಹಮ್ಮದ್ ರೋಷನ್
ಜಿಲ್ಲಾಧಿಕಾರಿ, ಬೆಳಗಾವಿ

ಇಂತಹ ಪ್ರಕರಣಗಳು ಸಾವಿರಾರು ಜನರಿಗೆ ವಂಚಿಸಿದ ಬಳಿಕ ಇಲ್ಲವೇ ಆರೋಪಿಗಳು ಪರಾರಿಯಾದ ಬಳಿಕ ಬೆಳಕಿಗೆ ಬರುತ್ತದೆ. ಆದರೆ, ಈ ಪ್ರಕರಣದಲ್ಲಿ ಹೂಡಿಕೆದಾರರಿಗೆ ಬಡ್ಡಿ ಹಣ ಸಿಗುತ್ತಿರುವಾಗಲೇ ತನಿಖೆ ಶುರುವಾಗಿದೆ. ಇದರಿಂದ ಠೇವಣಿದಾರರಿಗೆ ಅನುಕೂಲವಾಗಲಿದೆ. ಶಿವಾನಂದನ ಸಹಚರರಿಗೂ ನೋಟಿಸ್ ನೀಡಿ ತನಿಖೆಗೆ ಒಳಪಡಿಸಲಾಗುವುದು.

- ಭೂಷಣ ಬೋರಸೆ
ಪೊಲೀಸ್ ಕಮಿಷನರ್, ಬೆಳಗಾವಿ

ಪ್ರಕರಣ ಹೊರ ಬಂದದ್ದು ಹೇಗೆ?

ಶಿವಂ ಅಸೋಸಿಯೇಟ್ಸ್ ಪ್ರಕರಣ ಕುರಿತು ಅನಾಮಧೇಯ ವ್ಯಕ್ತಿಯೊಬ್ಬರು ಸೆಬಿಗೆ ಪತ್ರ ಬರೆದಿದ್ದು, ಬಳಿಕ ಆ ಮಾಹಿತಿ ಸಿಐಡಿಗೂ ರವಾನೆಯಾಗಿತ್ತು. ಅದರ ಸತ್ಯಾಸತ್ಯತೆ ಪರಿಶೀಲನೆಗಾಗಿ ಬೆಳಗಾವಿ ಪೊಲೀಸರಿಗೆ ಸೂಚನೆ ಬಂದಿತ್ತು. ಪೊಲೀಸರು ಅದನ್ನು ಪರಿಶೀಲಿಸುತ್ತಿರುವಾಗಲೇ, ಶಿವಾನಂದ ನೀಲಣ್ಣವರ ಮಾತನಾಡಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. 'ನನ್ನ ಬಳಿ 15 ಸಾವಿರ ಬಂದೂಕುಗಳಿವೆ' ಎಂಬ ಆತನ ಮಾತುಗಳು ಅನುಮಾನ ಹುಟ್ಟಿಸಿ, ಆತನ ಚಟುವಟಿಕೆ ಹಾಗೂ ಹಣಕಾಸು ವ್ಯವಹಾರಗಳ ಬಗ್ಗೆ ವ್ಯವಸ್ಥಿತ ತನಿಖೆ ಆರಂಭವಾಯಿತು.

ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ

ಶನಿವಾರ ಜಂಟಿ ಸುದ್ದಿಗೋಷ್ಠಿ ನಡೆಸಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹಾಗೂ ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ, ಈ ಪ್ರಕರಣ ತನಿಖೆಯಲ್ಲಿ ತಿಳಿದು ಬಂದ ಮಾಹಿತಿಗಳನ್ನು ಬಹಿರಂಗ ಪಡಿಸಿದರು.

"ಕೇವಲ ಪಿಯುಸಿ ಶಿಕ್ಷಣ ಪಡೆದ ಶಿವಾನಂದ, ಸಾವಿರಾರು ಜನರನ್ನು ತನ್ನ ವ್ಯವಹಾರದಲ್ಲಿ ಬಳಸಿಕೊಂಡಿದ್ದಾನೆ. ಕನಿಷ್ಠ 1 ಲಕ್ಷ ರೂ. ನಗದು ಹೂಡಿಕೆ ಮಾಡಿದರೆ ಶೇ.36ರಷ್ಟು ಬಡ್ಡಿ ಪಾವತಿಸುವುದಾಗಿ ಪ್ರಚಾರ ಮಾಡಿದ್ದ. ಈ ಕುರಿತು ವಿಚಾರಣೆ ನಡೆಸಲಾಗಿದ್ದು, ಠೇವಣಿ ಪಡೆದ ಹಣವನ್ನು ರಿಯಲ್ ಎಸ್ಟೇಟ್ ಉದ್ಯಮ, ಷೇರು ಮಾರುಕಟ್ಟೆ ಹಾಗೂ ಎಪಿಎಂಸಿ ವ್ಯಾಪಾರದಲ್ಲಿ ಹೂಡಿಕೆ ಮಾಡಿ, ಬಂದ ಲಾಭದಲ್ಲಿ ಬಡ್ಡಿ ನೀಡುವುದಾಗಿ ತಿಳಿಸಿದ್ದಾನೆ," ಎಂದು ತಿಳಿಸಿದರು.

"ಹಣಕಾಸು ವಂಚನೆಗೆ ಕಡಿವಾಣ ಹಾಗೂ ಕಾನೂನು ಕ್ರಮ ಜರುಗಿಸುವ ನಿಟ್ಟಿನಲ್ಲಿ ಏಪ್ರಿಲ್ 29ರಂದು ಕೆಪಿಐಡಿ ಅಡಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಶೇಷ ಸೆಲ್ ರಚಿಸಲಾಗಿತ್ತು. ಶಿವಂ ಅಸೋಸಿಯೇಟ್ಸ್ ಚಟುವಟಿಕೆಗಳ ಬಗ್ಗೆ ಕಳೆದ ಒಂದು ತಿಂಗಳಿನಿಂದಲೇ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಗೌಪ್ಯವಾಗಿ ಮಾಹಿತಿ ಸಂಗ್ರಹಿಸುತ್ತಿತ್ತು. ಸಾರ್ವಜನಿಕರಿಂದ ಸಂಗ್ರಹಿಸಲಾಗುತ್ತಿದ್ದ ಠೇವಣಿ ಹಣ, ಅದರ ವರ್ಗಾವಣೆ, ಡಿಜಿಟಲ್ ವ್ಯವಹಾರ ಹಾಗೂ ಹೂಡಿಕೆ ಜಾಲದ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿತ್ತು. ಅದಲ್ಲದೇ, ಸೆಬಿ (ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) ಹಾಗೂ ಆರ್‌ಬಿಐ ಸಂಪರ್ಕಿಸಿ ಶಿವಂ ಅಸೋಸಿಯೇಟ್ಸ್ ಪರವಾನಗಿ, ಚಟುವಟಿಕೆ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿತ್ತು. ಇದಾದ ಬಳಿಕವೇ ತನಿಖೆಗೆ ಆದೇಶಿಸಲಾಗಿತ್ತು," ಎಂದರು.

"ಶಿವಂ ಅಸೋಸಿಯೇಟ್ಸ್‌ನ ನಾಲ್ಕು ಪ್ರಮುಖ ಸ್ಥಳಗಳಲ್ಲಿ ಪರಿಶೀಲನೆ ನಡೆಸಿದಾಗ ಯಾವುದೇ ಕಾನೂನುಬದ್ಧ ಅನುಮತಿ ಇಲ್ಲದೇ ಹಣಕಾಸು ಚಟುವಟಿಕೆ ನಡೆಸಿರುವುದು ಕಂಡುಬಂದಿದೆ. ಸೆಬಿ, ಆರ್‌ಬಿಐ ಹಾಗೂ ಸಹಕಾರ ಸಂಘಗಳ ನಿಯಮಗಳನ್ನು ಪಾಲಿಸಿಲ್ಲ. ಅದಲ್ಲದೇ, ಹೆಚ್ಚಿನ ಬಡ್ಡಿ ಆಮಿಷ ಒಡ್ಡಿ ಜನರನ್ನು ಸೆಳೆಯಲಾಗುತ್ತಿತ್ತು ಎನ್ನುವುದು ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಬಗ್ಗೆ ಎಸಿ ಶ್ರವಣ ನಾಯಕ ಅವರು ತನಿಖಾ ವರದಿ ಸಲ್ಲಿಸಿದ್ದಾರೆ. ಮೇಲ್ನೋಟಕ್ಕೆ ಅಂತಾರಾಜ್ಯ ಪ್ರಕರಣವಾಗಿ ಕಂಡು ಬಂದಿದೆ. ಹೀಗಾಗಿ ಮುಂದಿನ ಕ್ರಮಕ್ಕಾಗಿ ರಾಜ್ಯ ಸರಕಾರಕ್ಕೆ ವರದಿ ಕಳುಹಿಸಲಾಗಿದೆ," ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿದರು. ಪೊಲೀಸ್ ಕಮಿಷನರ್ ಭೂಷಣ ಬೋರಸೆ ಇದ್ದರು.

ಠೇವಣಿದಾರರಿಗೆ ವಿಶ್ವಾಸ!

ಈ ನಡುವೆ ಬೆಳಗಾವಿಯ ಚನ್ನಮ್ಮ ವೃತ್ತದಲ್ಲಿ ಶನಿವಾರ ಬೆಳಗ್ಗೆಯೇ ಜಮಾಯಿಸಿದ ನೂರಾರು ಠೇವಣಿದಾರರು, "ಯಾವುದೇ ಕಾರಣಕ್ಕೂ ಪೊಲೀಸರಿಗೆ ದೂರು ನೀಡುವುದು ಬೇಡ. ಕಾನೂನು ಪ್ರಕಾರ ವಿಚಾರಣೆ ಆರಂಭವಾದರೆ ಆನಂದ ಅಪ್ಪುಗೋಳ ಅವರ ಸೊಸೈಟಿ ವಂಚನೆ ಪ್ರಕರಣದಲ್ಲಿ ಠೇವಣಿದಾರರು ಕೋರ್ಟ್‌ಗೆ ಅಲೆಯುತ್ತಿರುವಂತೆ ನಾವು ವರ್ಷಗಟ್ಟಲೇ ಅಲೆಯುವಂತಾಗುತ್ತದೆ. ಶಿವಾನಂದ ಅವರು ಪೊಲೀಸ್ ಬಂಧನದಿಂದ ಬಿಡುಗಡೆಯಾಗಿ ಬಂದು ವಹಿವಾಟು ಮುಂದುವರಿಸುತ್ತಾರೆ," ಎಂದು ಅಭಿಪ್ರಾಯಪಟ್ಟರು.

ಐಪಿಎಲ್‌ನಲ್ಲಿ ಶುರುವಾಗಿದ್ದು ಎಐ

ಐಪಿಎಲ್ ಎಂದಾಕ್ಷಣ ನಮಗೆ ಕ್ರಿಕೆಟ್ ಬಿಟ್ಟು ಬೇರೆ ಏನೂ ಸೂಚಿಸದು. ನಿಮಗೊಂದು ವಿಷಯ ಗೊತ್ತೆ? ಜಗತ್ತಿನ ಮೊತ್ತ ಮೊದಲ ಕೃತಕ ಬುದ್ಧಿಮತ್ತೆಯ ಕಂಪ್ಯೂಟರ್ ಪ್ರೊಗ್ರಾಮಿಂಗ್ ನಡೆದಿದ್ದು ಐಪಿಎಲ್‌ನಲ್ಲಿ. ಐಪಿಎಲ್ ಅಂದರೆ ಇನ್ಫಾರ್ಮೇಶನ್ ಪ್ರೊಸೆಸ್ಸಿಂಗ್ ಲಾಂಗ್ವೇಜ್. ಕಂಪ್ಯೂಟರನ್ನು ಕೇವಲ ಲೆಕ್ಕ ಮಾಡುವುದಕ್ಕೆ ಬಳಸಲಾಗುತ್ತಿದ್ದ ಆ ದಿನಗಳಲ್ಲಿ ಮೊತ್ತ ಮೊದಲ ಬಾರಿಗೆ ಮನುಷ್ಯರ ಹಾಗೆ ಸಂಕೇತಗಳನ್ನು ಪಾಲಿಸುವುದಕ್ಕೂ ಬಳಸಬಹುದು ಎಂದು ತೋರಿಸಿಕೊಟ್ಟಿದ್ದು ಈ ಪ್ರೊಗ್ರಾಮಿಂಗ್. ಮೊಟ್ಟ ಮೊದಲಿಗೆ ಲಿಂಕ್ಡ್ ಲಿಸ್ಟ್, ಸಂಕೇತಗಳನ್ನು ಬಳಸಿದ ಪ್ರೊಗ್ರಾಮಿಂಗ್ ಲಾಂಗ್ವೇಜ್ ಐಪಿಎಲ್. ಡೈನಾಮಿಕ್ ಮೆಮೊರಿ ಎನ್ನುವ ವಿಚಾರವು ಶುರುವಾಗಿದ್ದೇ ಇಲ್ಲಿಂದ. ಇದರ ಸಿಂಟೆಕ್ಸ್ ರೂಪುರೇಷೆ ಎಲ್ಲವೂ ಅಸೆಂಬ್ಲಿ ಲಾಂಗ್ವೇಜ್ ತರಹದ್ದು. 'ಹ್ಯೂರಿಸ್ಟಿಕ್ ಸರ್ಚ್' (Heuristic search) ಎನ್ನುವ ಕಾನ್ಸೆಪ್ಟ್ ಕೂಡ ಜನ್ಮತಾಳಿದ್ದು ಈ ಪ್ರೊಗ್ರಾಮಿಂಗ್ ಮೂಲಕವೇ. ಒಟ್ಟಿನಲ್ಲಿ ಹೇಳಬೇಕೆಂದರೆ ಅವತ್ತು ಐಪಿಎಲ್ ಆವಿಷ್ಕಾರ ಆಗದೇ ಹೋಗಿದ್ದಿದ್ದರೆ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ನಾವು ಇಷ್ಟು ದೂರ ಬರುತ್ತಿದ್ದೇವೋ ಇಲ್ಲವೋ ಗೊತ್ತಿಲ್ಲ, ನಂತರದಲ್ಲಿ ಎಷ್ಟೇ ಹೊಸ ಹಾಗೂ ಅತ್ಯಾಧುನಿಕ ಪರಿಕರಗಳು ಬಂದಿರಬಹುದು, ಆದರೆ ಎಲ್ಲದಕ್ಕೂ ಮೂಲ ಐಪಿಎಲ್!

ವಿಕ AI ಲೋಕ



ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ **ವಿಕ್ರಂ ಜೋಶಿ**
ಎಐ ವಿಶ್ಲೇಷಕರು

ಸುಳ್ಳು ಕೇಸ್‌ಗಳ ಕಿಲಾಡಿ ಲೇಡಿ ಅರೆಸ್ಟ್!

ಬೆಳಗಾವಿ: ಮದುವೆ ಆಗುವುದಾಗಿ ನಂಬಿಸಿ, ಅತ್ಯಾಚಾರ ಎಸಗಿದ ಬಗ್ಗೆ ಸುಳ್ಳು ಆರೋಪ ಮಾಡಿ, ಪೊಲೀಸ್ ಅಧಿಕಾರಿಗಳು ಹಾಗೂ ಗಣ್ಯ ವ್ಯಕ್ತಿಗಳಿಂದ ಹಣ ವಸೂಲಿಗೆ ಸಂಚು ರೂಪಿಸಿದ್ದ ಮಹಿಳೆಯನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಈ ಕುರಿತು ಮಾಹಿತಿ ನೀಡಿದರು. "ರಾಯಬಾಗ ಮೂಲದ, ಹಾಲಿ ಬೆಳಗಾವಿ ನಿವಾಸಿ ರೇಷ್ಮಾ ಶಂಕರ ಮುತಗಾ ಬಂಧಿತ ಆರೋಪಿ. ಇವರ ವಿರುದ್ಧ ರೌಡಿಶೀಟರ್ ಕೇಸ್ ದಾಖಲಿಸಲಾಗಿದೆ. ಮ್ಯಾಟ್ರಿಮೊನಿ ಆ್ಯಪ್‌ಗಳಲ್ಲಿ ಆಕರ್ಷಕ ಹಾಗೂ ನಕಲಿ ಫೋಟೊ ಹಾಕುತ್ತಿದ್ದ ಈ ಮಹಿಳೆ, ಗಣ್ಯ ವ್ಯಕ್ತಿಗಳು, ಹಣವಂತರನ್ನು ಸಂಪರ್ಕಿಸುತ್ತಿದ್ದಳು. ನಿಗದಿತ ಸ್ಥಳಕ್ಕೆ ಅವರನ್ನು ಕರೆಸಿದ ಬಳಿಕ ಅತ್ಯಾಚಾರ ಎಸಗಿದ ಆರೋಪ ಮಾಡಿ ಹಣ ಕೀಳುವ ಸಂಚು ರೂಪಿಸುತ್ತಿದ್ದಳು. ಹೀಗಿದ್ದರೂ ತನಗೆ ನ್ಯಾಯ ಒದಗಿಸುವಂತೆ ಕೋರಿ ಪೊಲೀಸರ ಬಳಿ ಹೋಗಿ, ಅಲ್ಲಿ ಪೊಲೀಸ್ ಅಧಿಕಾರಿಯೇ ಅತ್ಯಾಚಾರ ಎಸಗಿದ್ದಾರೆ ಎಂದು ಬ್ಲ್ಯಾಕ್‌ಮೇಲ್ ಮಾಡಿ, ಸುಳ್ಳು ದೂರು ದಾಖಲಿಸಿದ್ದಾಳೆ," ಎಂದು ವಿವರಿಸಿದರು.

ರೇಷ್ಮಾ ಮುತಗಾ

"8 ತಿಂಗಳ ಹಿಂದೆ ಕಲ್ಯಾಣ ಎಂಬಾತ ತನ್ನನ್ನು ಮದುವೆಯಾಗುವುದಾಗಿ ಹೇಳಿ ಮೋಸ ಮಾಡಿ ಓಡಿ ಹೋಗಿದ್ದಾನೆ ಎಂದು ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ರೇಷ್ಮಾ ದೂರು ದಾಖಲಿಸಿದ್ದಳು. ಈ ಪ್ರಕರಣದ ವಿಚಾರಣೆ ವೇಳೆ ಘಟಪ್ರಭಾ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಮೆಸೇಜ್ ಮಾಡಿ 'ತಾನು ಒಂದು ಲಕ್ಷ ರೂ. ಕೊಟ್ಟಿದ್ದೇನೆ. ಏಕೆ ನನ್ನ ಕೆಲಸ ಮಾಡುತ್ತಿಲ್ಲ' ಎಂದು ಪ್ರಶ್ನಿಸಿದ್ದಳು. ಈ ಕುರಿತು ಇನ್‌ಸ್ಪೆಕ್ಟರ್ ದೂರು ನೀಡಿದ್ದರು. ಬೈಲಹೊಂಗಲ ಡಿವೈಎಸ್‌ಪಿ ವೀರಯ್ಯ ಹಿರೇಮಠ ನೇತೃತ್ವದಲ್ಲಿ ತನಿಖೆ ಮಾಡಿಸಿದಾಗ ಮಹಿಳೆಯ ಹಲವು ಕೃತ್ಯಗಳು ಬೆಳಕಿಗೆ ಬಂದಿವೆ. ಇಷ್ಟೆಲ್ಲ ಕುತಂತ್ರವನ್ನು ಒಬ್ಬ ಮಹಿಳೆ ಮಾಡಿದ್ದು ಅನುಮಾನಾಸ್ಪದ. ಇದರ ಹಿಂದೆ ಒಂದು ತಂಡ ಇರುವ ಶಂಕೆಯಿದೆ. ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ," ಎಂದು ಎಸ್ಪಿ ರಾಮರಾಜನ್ ತಿಳಿಸಿದರು.

ರೇಷ್ಮಾ ಪ್ರಕರಣಗಳು ಒಂದೆರಡಲ್ಲ!

"ಪಕ್ಕದ ಮನೆ ವ್ಯಕ್ತಿ ನನ್ನನ್ನು ಮದುವೆಯಾಗದೇ ಮೋಸ ಮಾಡಿದ್ದಾನೆ," ಎಂದು ಕುಡಚಿ ಪೊಲೀಸ್ ಠಾಣೆಯಲ್ಲಿ 2012ರಲ್ಲಿ ರೇಷ್ಮಾ ದೂರು ನೀಡಿದ್ದಳು. "ಪೊಲೀಸ್ ಪೇದೆಯೊಬ್ಬರು ನನ್ನನ್ನು ಬಿಟ್ಟು ಹೋಗಿದ್ದಾರೆ," ಎಂದು 2022ರಲ್ಲಿ ಘಟಪ್ರಭಾ ಠಾಣೆಯಲ್ಲಿ, "ವ್ಯಕ್ತಿಯೊಬ್ಬ ನನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ," ಎಂದು 2023ರಲ್ಲಿ ಗಜೇಂದ್ರಗಡ ಠಾಣೆಯಲ್ಲಿ ದೂರು ನೀಡಿದ್ದಳು. ವ್ಯಕ್ತಿ ಮೋಸ ಮಾಡಿದ್ದಾನೆಂದು 2025ರಲ್ಲಿ ಬೆಳಗಾವಿಯ ಕ್ಯಾಂಪ್ ಠಾಣೆಗೆ ನೀಡಿದ್ದ ದೂರು ಧಾರವಾಡ ಉಪನಗರ ಠಾಣೆಗೆ ವರ್ಗಾವಣೆಗೊಂಡಾಗ ಅಲ್ಲಿನ ಇನ್‌ಸ್ಪೆಕ್ಟರ್ ಮೇಲೂ ಲೈಂಗಿಕ ದೌರ್ಜನ್ಯದ ಕೇಸ್ ದಾಖಲಿಸಿದ್ದಾಳೆ," ಎಂದು ಎಸ್ಪಿ ರಾಮರಾಜನ್ ತಿಳಿಸಿದರು.

ಡ್ರಗ್ಸ್ ಕಿಂಗ್‌ಪಿನ್ ದೌಲಗೆ 1 ವರ್ಷ ಜೈಲು

ಬಳ್ಳಾರಿ: ಮಾದಕ ವಸ್ತುಗಳ ಸರಬರಾಜು ಮತ್ತು ಮಾರಾಟ ಜಾಲದಲ್ಲಿ ಗುರುತಿಸಿಕೊಂಡಿದ್ದ ನಗರದ ರಾಣಿ ತೋಟದ ನಿವಾಸಿ ಡಿ.ದೌಲಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಈ ಕುರಿತು ಎಸ್ಪಿ ಡಾ.ಸುಮನ್ ಡಿ ಪೆನ್ನೇಕರ್ ಅವರು ಮಾಹಿತಿ ನೀಡಿದ್ದಾರೆ. "ಈ ಆರೋಪಿ, ನಗರ ಸೇರಿ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಮಾದಕ ಪದಾರ್ಥಗಳ ಸಂಗ್ರಹ, ಸಾಗಣೆ ಮತ್ತು ಮಾರಾಟದ ವ್ಯವಹಾರ ನಡೆಸುತ್ತಿದ್ದ. ಈತನ ವಿರುದ್ಧ 21 ಪ್ರಕರಣಗಳು ದಾಖಲಾಗಿವೆ. ಅಕ್ರಮ ಮಾದಕ ದ್ರವ್ಯ ಸಂಚಾರ ತಡೆ ಕಾಯಿದೆಯಡಿ ಆತನನ್ನು ಬಂಧನದಲ್ಲಿ ಇರಿಸಲು ಬಳ್ಳಾರಿ ವಲಯದ ಐಜಿಪಿ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಪ್ರಸ್ತಾವನೆ ಅಂಗೀಕರಿಸಿದ ಐಜಿಪಿಯವರು ದೌಲನ ಒಂದು ವರ್ಷದ ಬಂಧನಕ್ಕೆ ಆದೇಶಿಸಿದ್ದರು," ಎಂದರು.

"ಹೈಕೋರ್ಟ್ ನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಂಡ ಸಲಹಾ ಸಮಿತಿಯು ಈ ಪ್ರಕರಣದ ವಿಚಾರಣೆ ನಡೆಸಿತು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಮತ್ತು ಹಿರಿಯ ಕಾನೂನು ಸಲಹೆಗಾರ ಬಿ.ಎಸ್.ಪಾಟೀಲ್ ಅವರು ಸರಕಾರದ ಪರವಾಗಿ ವಾದ ಮಂಡಿಸಿದ್ದರು. ವಾದ-ಪ್ರತಿವಾದ ಆಲಿಸಿದ ಸಮಿತಿಯು ಬಂಧನ ಆದೇಶವನ್ನು ಎತ್ತಿಹಿಡಿದಿದೆ. ಇದರನ್ವಯ ದೌಲನನ್ನು 2027 ಫೆ.12ರವರೆಗೆ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗುತ್ತದೆ," ಎಂದು ವಿವರಿಸಿದರು.

ಮೈಸೂರು to ಲಂಡನ್ ಯಾತ್ರೆ

ಮೈಸೂರು: ತಾವು ಕೈಗೊಳ್ಳಲಿರುವ ಮೈಸೂರು ಟು ಲಂಡನ್ ಕೆಟಿಎಂ ಅಡ್ವೆಂಚರ್ 390 ಬೈಕ್ ಯಾತ್ರೆಗೆ ಮೇ 17ರಂದು ಬೆಳಗ್ಗೆ 7.30ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ ಎಂದು ಉದ್ಯಮಿ ನಾಗಾರ್ಜುನ ಅನಂತ ಭಗವಾನ್ ತಿಳಿಸಿದರು.

'ಫೆಲೋಷಿಪ್ ಬಿಯಾಂಡ್ ಬಾರ್ಡರ್ಸ್' ಶೀರ್ಷಿಕೆ ಅಡಿಯಲ್ಲಿ ನಗರದಲ್ಲಿ ಆರಂಭವಾಗುವ ಈ ಯಾತ್ರೆ 60 ದಿನಗಳವರೆಗೆ ಇರಲಿದೆ. ಸುಮಾರು 20 ಸಾವಿರ ಕಿ.ಮೀ ಕ್ರಮಿಸಲಿದ್ದೇನೆ. ಇದು ಜನರನ್ನು, ಸಂಸ್ಕೃತಿ, ಸ್ನೇಹವನ್ನು ಬೆಸೆಯುವ ಉದ್ದೇಶ ಹೊಂದಿದೆ,'' ಎಂದು ಹೇಳಿದರು.

''ನೇಪಾಳ, ಟಿಬೆಟ್‌ಗಳ ಮೂಲಕ ಚೀನಾ, ರಷ್ಯಾ ನಂತರ ಇನ್ನಿತರ ದೇಶಗಳನ್ನು ಹಾದು ಹೋಗಿ ಕೊನೆಗೆ ಲಂಡನ್ ತಲುಪಲಾಗುವುದು. ಈ ಯಾತ್ರೆಗಾಗಿ ಒಂದು ವರ್ಷ ಸಿದ್ಧತೆ ಮಾಡಿಕೊಂಡಿದ್ದೇನೆ. ಈ ಮೂಲಕ ದೇಶ, ವಿದೇಶಗಳ ಬೈಕ್ ಪ್ರೇಮಿಗಳು, ಸಾಹಸ ಯಾತ್ರಿಕರು ಹಾಗೂ ಪ್ರವಾಸಕ್ತರ ಗಮನ ಸೆಳೆಯುವ ಉದ್ದೇಶವೂ ಇದೆ,'' ಎಂದು ವಿವರಣೆ ನೀಡಿದರು.

ಮಳೆಯಾಗದಿದ್ದರೆ ಮುಂಗಾರು ಬೆಳೆ, ಜೀವ ಜಲಕ್ಕೂ ಸಮಸೆ | ಜಲಾಶಯದಿಂದ 3743 ಕ್ಯುಸೆಕ್ ಹೊರ ಹರಿವು

88 ಅಡಿಗೆ ಕುಸಿದ ಕೆಆರ್‌ಎಸ್ ನೀರಿನ ಮಟ್ಟ

■ **ನವೀನ್** ಮಂಡ್ಯ
naveena.channappa@timesofIndia.com

ಜೀವನಾಡಿ ಕೃಷ್ಣರಾಜಸಾಗರದ ನೀರಿನ ಮಟ್ಟ 88 ಅಡಿಗೆ ಕುಸಿದಿದೆ. ಮಳೆ ಕೊರತೆಯಿಂದ ಬರ ಪರಿಸ್ಥಿತಿ ಎದುರಾಗಿರುವ ಹಿನ್ನೆಲೆಯಲ್ಲಿ ಜಲಾಶಯದ ನೀರಿನ ಮಟ್ಟ ದಿನೇದಿನೆ ಕ್ಷೀಣಿಸುತ್ತಿದೆ. ಈ ಮಧ್ಯೆ ಜಲಾಶಯದ ಹಿನ್ನೀರಿನಲ್ಲಿ ಮುಳುಗಿದ್ದ ಲಕ್ಷ್ಮೀನಾರಾಯಣಸ್ವಾಮಿ ದೇಗುಲ ಸಂಪೂರ್ಣ ಗೋಚರಿಸುತ್ತಿದೆ.

ಗರಿಷ್ಠ 124.80 ಅಡಿ ಎತ್ತರದವರೆಗೆ ನೀರು ಸಂಗ್ರಹಿಸಲ್ಪಡುವ ಜಲಾಶಯದ ನೀರಿನ ಮಟ್ಟವು ಶನಿವಾರ(ಮೇ 16) 88.61 ಅಡಿ ದಾಖಲಾಗಿತ್ತು. ಕಳೆದ ವರ್ಷ ಇದೇ ಹೊತ್ತಿಗೆ 90.68 ಅಡಿವರೆಗೆ ನೀರಿತ್ತು. ಪ್ರಸ್ತುತ ಪರಿಸ್ಥಿತಿಯಲ್ಲಿ ಮಡಿಕೇರಿ ಸೇರಿ ವಯನಾಡು ಪ್ರದೇಶದಲ್ಲಿ ಮಳೆಯಾಗದಿದ್ದರೆ ಮುಂಗಾರು ಹಂಗಾಮಿನ ಬೆಳೆಗಳಿರಲಿ, ಕುಡಿಯುವ ನೀರಿಗೂ ಸಮಸ್ಯೆ ಎದುರಾಗುವ ಸಾಧ್ಯತೆಯಿದೆ.

ಕನ್ನಂಬಾಡಿಕಟ್ಟೆಗೆ ನೀರು ಬರುವುದೇ ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳಿಂದ. ಕೊಡಗು, ಹಾಸನ, ವಯನಾಡು ಪ್ರದೇಶಗಳಲ್ಲಿ ಉತ್ತಮ ಮಳೆಯಾದರೆ ಈ 3 ನದಿಗಳ ಮೂಲಕ ಕೆಆರ್‌ಎಸ್ ಜಲಾಶಯಕ್ಕೆ ನೀರು ಹರಿದು ಬರುತ್ತದೆ.

ನೀರಿನ ಮಟ್ಟ 88 ಅಡಿಗೆ ಕುಸಿದಿರುವುದರಿಂದ ಬರಿದಾದಂತೆ ಕಾಣುತ್ತಿರುವ ಕೆಆರ್‌ಎಸ್ ಜಲಾಶಯ.

ಮಳೆಯಾಗದಿದ್ದರೆ ಬೆಳೆಗಳಿಗೆ ನೀರು ಅಲಭ್ಯ

49.452 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವುಳ್ಳ ಕೆಆರ್‌ಎಸ್ ಜಲಾಶಯದಲ್ಲಿ ಸದ್ಯಕ್ಕೆ 15.127 ಟಿಎಂಸಿ ಅಡಿ ನೀರಿದೆ. ಇದರಲ್ಲಿ ಕೇವಲ 6.748 ಟಿಎಂಸಿ ನೀರು ಮಾತ್ರ ಕೃಷಿ ಬಳಕೆಗೆ ಲಭ್ಯವಿದೆ. ಉಳಿಕೆ 8.379 ಟಿಎಂಸಿಯಲ್ಲಿ 4.400 ಟಿಎಂಸಿ ನೀರು ಯಾವುದಕ್ಕೂ ಬಳಕೆಗೆ ಬಾರದ ಸಂಪೂರ್ಣ ಡೆಡ್ ಸ್ಟೋರೇಜ್. ಬಾಕಿ 3.979 ಟಿಎಂಸಿ ಕುಡಿಯುವ ನೀರಿಗಾಗಿ ಮೀಸಲು. ಸದ್ಯಕ್ಕೆ ಬೇಸಿಗೆ ಬೆಳೆಗಳಿಗೆ 5ನೇ ಕಟ್ಟಿನ ನೀರನ್ನು ಮೇ 12ರಿಂದ ಕೊಡಲಾಗುತ್ತಿದೆ. ಇದೇ ಪ್ರಮಾಣದಲ್ಲಿ ಇನ್ನೊಂದು ವಾರ ನಾಲೆಗಳಿಗೆ ನೀರು ಹರಿಸಿದರೆ ಕನಿಷ್ಠ 2 ಟಿಎಂಸಿ ಅಡಿ ನೀರು ಖಾಲಿಯಾಗಲಿದೆ. ಎಲ್ಲಕ್ಕಿಂತ ಮೇಲಾಗಿ ಜಲಾಶಯದ ನೀರಿನ ಮಟ್ಟವು 77 ಅಡಿಗೆ ಕುಸಿದಾಗ ಬೆಳೆಗಳಿಗೆ ನೀರು ಕೊಡುವುದನ್ನು ನಿಲ್ಲಿಸಲಾಗುತ್ತದೆ. 77ರಿಂದ 60 ಅಡಿವರೆಗೆ 17 ಅಡಿಗಳಲ್ಲಿ ಅಂದಾಜು 3.5 ರಿಂದ 4 ಟಿಎಂಸಿ ನೀರು ಲಭ್ಯವಾಗುತ್ತದೆ. 60 ಅಡಿಗಿಂತ ಕೆಳಗಿನ ನೀರು ಡೆಡ್ ಸ್ಟೋರೇಜ್. ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಜಿಲ್ಲೆಗಳ ಜನರ ಕುಡಿಯುವ ನೀರಿಗಾಗಿ ಕೆಆರ್‌ಎಸ್ ಜಲಾಶಯವನ್ನು ಅವಲಂಬಿಸಲಾಗಿದೆ. ಹೀಗಾಗಿ ಮಳೆಯಾಗದಿದ್ದರೆ ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರು ಲಭ್ಯವಾಗುವುದಿಲ್ಲ.

ಕಾವೇರಿ ವಿವಾದ ಸೇರಿದಂತೆ ತುರ್ತು ಸಂದರ್ಭದಲ್ಲಿ ಕೊಡಗಿನ ಹಾರಂಗಿ, ಹಾಸನದ ಗೊರೂರು ಜಲಾಶಯದಿಂದಲೂ ಕಾವೇರಿ, ಹೇಮಾವತಿ ನದಿಗೆ ಬಿಡುಗಡೆ ಮಾಡಿ, ಕೆಆರ್‌ಎಸ್‌ಗೆ ನೀರು ಹರಿಸಲಾಗುತ್ತದೆ.

ಆದರೆ, ಪ್ರಸ್ತುತ ಈ ಎರಡು ಜಲಾಶಯಗಳ ನೀರಿನ ಮಟ್ಟ ಕಡಿಮೆಯಾಗಿದೆ. ಹಾರಂಗಿ ನೀರಿನ ಮಟ್ಟವು 2823.56(ಗರಿಷ್ಠ 2859) ಅಡಿಗೆ ಕುಸಿದಿದ್ದು, 214 ಕ್ಯುಸೆಕ್ ಒಳ ಹರಿವು, 180 ಕ್ಯುಸೆಕ್ ಹೊರ ಹರಿವಿನೊಂದಿಗೆ ಜಲಾಶಯದಲ್ಲಿ ಕೇವಲ 2.241 ಟಿಎಂಸಿ ಅಡಿ ನೀರಿದೆ. ಹಾಸನದ ಗೊರೂರಿನ ಹೇಮಾವತಿ ಜಲಾಶಯದ ನೀರಿನ ಮಟ್ಟ 2893.23(ಗರಿಷ್ಠ 2922) ಅಡಿಗಳಿಗೆ ಇಳಿದಿದೆ. 46 ಕ್ಯುಸೆಕ್ ಒಳ ಹರಿವು, 2450 ಕ್ಯುಸೆಕ್ ಹೊರ ಹರಿವಿದೆ. ಡೆಡ್‌ಸ್ಟೋರೇಜ್ ಕಳೆದು ಸದ್ಯಕ್ಕೆ 11.498 ಟಿಎಂಸಿ ಅಡಿ ನೀರಿದೆ. 124.80 ಅಡಿಯುಳ್ಳ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಶನಿವಾರ(ಮೇ 16) 88.61 ಅಡಿಗೆ ಕುಸಿದಿದೆ. ಜಲಾಶಯಕ್ಕೆ ಕೇವಲ 94 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಕುಡಿಯುವ ನೀರು ಮತ್ತು ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗಾಗಿ ನಾಲೆಗಳಿಗೆ ನೀರು ಹರಿಸಲಾಗುತ್ತಿದೆ. ಹೀಗಾಗಿ ಜಲಾಶಯದಿಂದ ಸದ್ಯಕ್ಕೆ 3743 ಕ್ಯುಸೆಕ್ ಹೊರ ಹರಿವು ಕಾಯ್ದುಕೊಳ್ಳಲಾಗಿದೆ.

ಕಳೆದ 3 ವರ್ಷಗಳಲ್ಲಿ ಮೇ 16ರಂದು ಜಲಾಶಯದ ನೀರಿನ ಮಟ್ಟ

ವರ್ಷ	ನೀರಿನ ಮಟ್ಟ	ಒಳ ಹರಿವು	ಹೊರ ಹರಿವು
2024	80.00	1771	153
2025	90.68	82	3462
2026	88.61	94	3743

ಪ್ರತಿ ತಿಂಗಳು ಕುಡಿಯುವ ನೀರಿಗಾಗಿ 2 ಟಿಎಂಸಿ ನೀರು ಬೇಕು. ಈಗಾಗಲೇ ತೀರ್ಮಾನಿಸಿದಂತೆ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಿ, ಆಗಸ್ಟ್ ಎರಡನೇ ವಾರದವರೆಗೂ ಅಗತ್ಯವಿರುವ ನೀರನ್ನು ಕುಡಿಯುವ ಸಲುವಾಗಿ ಸಂಗ್ರಹಿಸಿಟ್ಟುಕೊಳ್ಳಲಾಗಿದೆ. ಕುಡಿಯುವ ನೀರು ಮತ್ತು ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗಾಗಿಯೂ ಪ್ರಸ್ತುತ ನಾಲೆಗಳಿಗೆ ನೀರು ಹರಿಸಲಾಗುತ್ತಿದೆ.

- **ಡಾ.ಕುಮಾರ** ಜಿಲ್ಲಾಧಿಕಾರಿ, ಮಂಡ್ಯ

ಗೋಚರಿಸಿದ ದೇಗುಲ

ಕೆಆರ್‌ಎಸ್ ನೀರಿನ ಮಟ್ಟವು 88 ಅಡಿಗೆ ಕುಸಿದಿರುವುದರಿಂದ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇಗುಲ ಗೋಚರಿಸುತ್ತಿದೆ. 12 ಕಂಬಗಳ ಮಂಟಪ ಸಹಿತ ಗೋಪುರ ಪೂರ್ಣ ಪ್ರಮಾಣವಾಗಿ ಕಾಣುತ್ತಿದೆ. ಕಳೆದೊಂದು ದಶಕದ ಅವಧಿಯಲ್ಲಿ ಇದು 5ನೇ ಬಾರಿ ಕಾಣುತ್ತಿದೆ. 2019ರಲ್ಲಿ ಕಂಡಿದ್ದ ಈ ದೇವಾಲಯವು 2021, 2023, 2024ರಲ್ಲಿ ಕಂಡಿತ್ತು. ಈಗ ಮತ್ತೆ 2026ರಲ್ಲೂ ಗೋಚರಿಸಿದೆ. ಈ ದೇಗುಲವಿರುವ ಪ್ರದೇಶದಲ್ಲಿ ಆನಂದೂರು ಗ್ರಾಮವಿತ್ತು. ಕನ್ನಂಬಾಡಿಕಟ್ಟೆ ನಿರ್ಮಿಸಿದಾಗ ಇಲ್ಲಿನ ಊರನ್ನು ಸ್ಥಳಾಂತರಿಸಲಾಗಿತ್ತು. ಈ ದೇಗುಲದಲ್ಲಿದ್ದ ವಿಗ್ರಹವನ್ನು ನೆರೆಯ ಮಜ್ಜಿಗೆಪುರ ಗ್ರಾಮಕ್ಕೆ ಕೊಂಡೊಯ್ದು ಪ್ರತಿಷ್ಠಾಪಿಸಲಾಗಿದೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

TIMES TRIBUTE — PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು

ಆಸ್ತಿಗಳು PROPERTY

LAND FOR SALE
FOR sale Around 5 Acre Plots on 4 lane Bengalaru - Gokarna Highway For Eco stays and resort 12 Km To Nirvana beach 20 Km to Gokarna Contact number - 6353237838

BANGALORE PROPERTIES
BASAVESHWARA NAGAR
APARTMENT - Building across Bangalore, having min 2400 sft land with 8-10, 2&3BHK Flats, for Rehabilitation Centre. Contact:9980137821

VARTHUR
1350SFT North West Corner, Commercial Site for Sale, with E Khatha, Further from Varthur Sub-Register Office CONTACT- 99809 88788

YELAHANKA
YELAHANKA, Rajannakunte, Premium Building with 43 Rooms, 12500 Sft for Sale, Further details contact : 6302608936

OUTSIDE BANGALORE
TUMKUR
DOBBASPET, House for sale 30X40 @ Siddalingappa Layout, Ground & 1st Floor, Full concrete house Price: 1.50 Cr. Call Owner : 9663338630

ಉದ್ಯೋಗ RECRUITMENT

SITUATION VACANT
ACADEMIC
GENERAL
ಬೆಂಗಳೂರಿನಲ್ಲಿರುವ ಕಮ್ಮನಹಳ್ಳಿ ಮನೆಯೊಂದಕ್ಕೆ ಮತ್ತು ರಾಜಾಜಿನಗರದಲ್ಲಿರುವ ಪಿ.ಜಿಯೊಂದಕ್ಕೆ ಅಡುಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ. Call: 7349533999 / 9964361800

TEACHER
WANTED Teachers with B.Sc., B.A/ B.Ed., & C. P. Ed Qualification for Green Hill International School, Kodigehalli, Magadi Mn Rd B-112. Ph: 9035771855, 9342703931.
REQD Female Primary Maths & EVS, Social & Hindi High School & PET Teacher. Contact Brilliant High School, HSR layout, 1st Sector, Call 080-22586941 / 6360610680.
WANTED: Teachers in all subjects. Engineering Graduates can also apply. Ph. 9242484476, send Bio data to email: info16bfet@gmail.com

ADARSH GROUP OF INSTITUTIONS
Chamarajpet, Bengaluru-560018.
INVITES APPLICATIONS FOR THE FOLLOWING POSITIONS
SRN ADARSH COLLEGE
• ASSOCIATE PROFESSORS • ASSISTANT PROFESSORS
for Computer Science English / Commerce & Management
Qualification, Experience and Compensation as per UGC norms. Ph.D & NET / KSET preferred.
SRN ADARSH P U COLLEGE
• LECTURERS : for Science/Commerce/Hindi/English and Physical Education
Qualification : M.Com / MA with B.Ed / M.Ed.
ADARSH INSTITUTE OF MANAGEMENT & INFORMATION TECHNOLOGY
• PROFESSORS • ASSO. PROFESSORS • ASST. PROFESSORS for MBA program in areas of Finance, OB and HR, Marketing, General Management & Business Analytics. Qualification, Exp. & compensation as per AICTE norms.
ADARSH SCHOOL - CHICKPET
• COMPUTER TEACHER : 4th to 9th with basic computer Knowledge
• ENGLISH & MATHEMATICS TEACHERS for primary School. Qualification: Diploma/Bachelor in Education with 2-3 Years Teaching Experience
• STUDENT COUNSELLORS • SUB STAFF
SC/ST candidates preferred.
Interested candidates can mail their resumes within 7 days of this advertisement to hr@agieducation.org

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಮತ್ತು ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು. 080-23301363.

INFOMATICS CBSE techno school & PU college Yelahanka, Rajanukunte, is hiring NTT, PGT, PRT teachers for Maths, Science, English, Art & craft, PT, CS/Robotics, Wardens etc. Send your resume to 7760729861

ADMINISTRATION
OFFICE ASSISTANTS
ಬೆಂಗಳೂರು ಉತ್ತರಹಳ್ಳಿಯಲ್ಲಿರುವ ಡೆಂಟಲ್ ಕ್ಲಿನಿಕ್ ಗೆ ಹೆಲ್ಪರ್ ಕೆಲಸಕ್ಕೆ ಸಿಬ್ಬಂದಿ ಅಗತ್ಯವಿದೆ. ತಿಂಗಳ ಸಂಬಳ 13,000/- ಅವಕಾಶವನ್ನು ಬಳಸಿಕೊಳ್ಳಿ ಸಂಪರ್ಕಿಸಿ: 9916011953
OFFICE ASSISTANT: Retired persons also apply. Minimum : PUC with Computer knowledge Location: Vijayanagar, B.lore Call: 93412 89221 / 95911 89221.

LEGAL
ADVOCATE
ಉದ್ಯೋಗವಕಾಶ ಬೆಂಗಳೂರು ಹೆಸರಾಂತ ಕಂಪನಿಗೆ ನುರಿತ ಅನುಭವವುಳ್ಳ ವಕೀಲರು (Advocate) ಬೇಕಾಗಿದ್ದಾರೆ. ಸಂಪರ್ಕಿಸಿ: 9187534379

MARKETING, ADVERTISING & SALES
CUSTOMER SERVICE EXECUTIVES
WANTED BUSINESS EXECUTIVES (Graduates Male / Female with 2 Wheelers Must & Experience in Media Field Preffered) CUSTOMER CARE EXE. TELECALLERS (Females with Good Communication Skills)
ADVERTISING CO. in Basveswarnagar Banglore is Looking For Dynamic Candidates Good Salary + Incentives. Call: 9845411113

OTHER VACANCIES
DRIVERS
WANTED DRIVERS 4 wheeler
A LEADING Pharma Distributor Company near Kengeri. Contact immediately : 9513306536 9916902503

GENERAL
ಜಾಬ್! ಜಾಬ್!! ಜಾಬ್!!! ಹೌಸ್‌ಕೀಪಿಂಗ್ ಸಿಬ್ಬಂದಿಗಳು ಮತ್ತು ಸೂಪರ್ವೈಸರ್ ಪ್ರಸಿದ್ಧ ಆಸ್ಪತ್ರೆಯಲ್ಲಿ ತುರ್ತಾಗಿ ಅಗತ್ಯವಿದೆ. ಬೆಂಗಳೂರು ಕಲ್ಯಾಣ ನಗರದಲ್ಲಿ, ಸಂಬಳ: ಸಿಬ್ಬಂದಿ ರೂ. 19,300/-, ಸೂಪರ್ವೈಸರ್ ರೂ. 23,000/-, ವಯಸ್ಸು: 18 ರಿಂದ 39 ವರ್ಷಗಳು ಕರೆ ಮಾಡಿ: 9250073007 / 9945779607

National Public School, Kanakapura Road, Agaara
RECRUITMENT FOR THE YEAR 2026-27
SANSKRIT TEACHER • SCHOOL COUNSELLOR
SENIOR SECONDARY ACCOUNTANCY & MARKETING
WITH MINIMUM 3 YEARS OF SCHOOL EXPERIENCE
hr@npsagara.com 81231 20934
NO. 118/4, AGARA, KUMBALAGODU ROAD, TATHAGUNI POST, BENGALURU - 560062
www.npsagara.com

ಬೆಂಗಳೂರು ವೃದ್ಧಾಶ್ರಮದಲ್ಲಿ ಕೆಲಸಕ್ಕೆ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಗಂಡಹೆಂಡತಿ ಜೋಡಿಗೆ ತಿಂಗಳಿಗೆ ರೂ. 30,000 ವೇತನ. ಒಬ್ಬರಿಗೆ ರೂ. 15,000 ವೇತನ. ಉಚಿತ ಊಟ ಮತ್ತು ವಸತಿ ಸೌಲಭ್ಯ ನೀಡಲಾಗುತ್ತದೆ. 9010060302, 8095136888

ಬೇಕಾಗಿದ್ದಾರೆ. ಆಫೀಸ್‌ಗಳಿಗೆ, ಶೋ ರೂಂಗಳಿಗೆ ಪಿಯುಸಿ, ಡಿಗ್ರಿಯವರು ನೇರ ನೇಮಕಾತಿ. ಸಂಬಳ– 18000/- ಸಂಪರ್ಕಿಸಿ: ಮೊ. 7760243115.

MULTIPLE VACANCIES
ST. MARTHA'S HOSPITAL
No.5, Nrupathunga Road, Bangalore - 560 001.
We are hiring:
♦ Consultant - Anaesthesia (MD/DNB)
♦ Consultant Radiologist- (MD/DNB)
♦ Senior Consultant- General Medicine (MD/DNB)
♦ Consultant Microbiologist - (MD/DNB)
♦ Part time Medical Oncologist - (DrNB/DM)
♦ Consultant/Junior Consultant - Neurology (DrNB/DM)
♦ Visiting Thoracic Surgeon - MCh (TS/CTVS) /DrNB (TS/CVTS)
♦ Part time Endocrinologist - (DM/DrNB)
♦ Civil Engineer- (B.E/B.Tech in Civil Engineering with 3+ yrs Experience)
Interested candidates may mail to careers@stmarthas.in, 080-40128204

RETIRED PERSONS
WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

WORK FROM HOME
EXCELLENT INCOME TOP MNC in BANGALORE Hiring Rtd Govt, Pvt, Defence, HNI, Bank, Teacher, VRS, NRI, IT, CA, Sr.CITIZEN, HOUSEWIFE Age 30-70 9845673443 8073400868

SERVICES
HOTEL INDUSTRY
ಬೆಂಗಳೂರು ದಾಬಸ್-ಪೇಟೆಯಲ್ಲಿರುವ ಕ್ಯಾಂಟೀನ್ ಒಂದಕ್ಕೆ ತರಕಾರಿ ಹೆಚ್ಚುವವರು, Counter boys, Helper ಬೇಕಾಗಿದ್ದಾರೆ. ಊಟ ವಸತಿ ಉಚಿತ. ಗಂಡಸರಿಗೆ ಆದ್ಯತೆ. ಸಂಪರ್ಕಿಸಿ 9591810812

ಪ್ರವಾಸ TRAVEL
PACKAGE TOURS
10.7.2026, ರಿಂದ 12 ದಿನ ಅಮರನಾಥ, ವೈಷ್ಣೋದೇವಿ, ಶ್ರೀನಗರ, ಅಮೃತಸರ, ಕುರುಕ್ಷೇತ್ರ, ಶ್ರೀಗಂಗಾ ಟೂರಿಸ್ಟ್, 94802 53807/81055 22123.
TOURS & TRAVELS
24-05-26 1 ದಿನ ಸಿದ್ದಗಂಗೆ, ದೇವರಾಯನ ದುರ್ಗ, ಗೊರವನಹಳ್ಳಿ 17-6-26 5 ದಿನ ಶ್ರೀರಂಗಂ, ಪಳನಿ ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವೆಲ್ಸ್9972500645

ಸೇವೆಗಳು SERVICES
REPAIRS/ WATERPROOFING
WATER PROOFING HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

personal
CHANGE OF NAME
I, Jiten Sukhrani, R/O of B1101, Oak Wing, Adarsh Greens, Kogilu, Bengaluru - 560064 have changed my name as Jiten Sukhrani.
I, Ramkumar Sivanandan, S/o Sivanandan Govindan born on 1st March 1982 residing at Flat No 206, Block 1, Ark Serene County, Channasandra Behind MVJ College, VTC: K Channasandra, PO: Kadugodi, Bengaluru, State: Karnataka-560067, have changed my name to Ramkumar Siva vide affidavit dated IN-KA55044208740747Y at Bengaluru.
IT is for general information that I, Guruprasad Malleshwarappa Adguru S/O A Malleshwarappa, R/o 1837/1 Sri Renu Nilaya, 3rd Cross, Chamundeshwari Extension, Tiptur Town, Tumkur, Karnataka - 572201, declare that name of mine has been written as Prasad Amg in PPO No.- 149201900106. The actual name of mine Guruprasad Malleshwarappa Adguru, which may be amended accordingly.
I, Mamatha Raghu W/o Gangappa Raghu R/o No 378, Dasarahosahalli, Doddurkar panhalli, Kolar,kgf (Kolar) - 563162. Have Changed My Name to Mamatha Govindappa for All Purposes.
I,KHADIR Shariff R/o No.14A, 14th B cross, 4th main IAS colony 6th sector HSR layout. JASCOGONY-560102 have changed my name to Khader Shariff for all purposes.
I, Asa Ram Mali D S/o Devaram Mali S R/o K.P. Agrahara Magadi Road, Bangalore Karnataka- 560023, have changed my name to Kailash Mali D.
I Abhishikt Asani S/o Joseph Asani R/o Begur, Bengaluru have changed my name from Abhishikt to Abhishikt Asani for all future purposes

LOST & FOUND
I, SUNIL BALAGAVI, S/o T.B. Balagavi, residing at No.120, MIG, KHB Colony, 2nd Stage, Basaveshwara Nagar, Bengaluru – 560079, have lost my SSLC Marks Card, PUC Marks Card, Degree Marks Cards, and Degree Certificate. If anyone finds the above-mentioned documents, kindly hand them over to the nearest police station.
I, K R Krishna, r/at No.88F Mahalakshmi layout 13th Cross Bangalore 560086 have lost my Original Possession Certificate vide Doc. ID: No.09866 Dated.21.11.2007 and Allotment letter vide Doc. ID: No.55450 Dated.24.06.2006. Police complaint given vide L R Nos. 2170101/2026 and 2170085/2026 dt. 23.04.2026. If found please call 9148013516

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

GALLERIA
BHARATH EDUCATION SOCIETY®
BES Pre-University College of Science, Commerce & Arts
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
Email: principalas018@gmail.com
Website: www.besinstitutions.com
080-26637018 / 98863 52466
Free Integrated Course NEET, JEE, K-CET, COMED-K
Affordable Fee for I & II PUC Science

Sahakara Rathna B.L. Lakke Gowda
Founder
B.E.S Institutions

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka
COURSES OFFERED FOR : 2026-27
PUC: PCMB PCMC HEBA SEBA CEBA HEPS
Languages Offered: English, Kannada, Hindi & Sanskrit
BES EVENING PU COLLEGE OF COMMERCE & ARTS
080-26533736 / 95387 98956 Email: beseveningpucollege@gmail.com
PUC: HEBA HEPS
Sri Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Prof Srinivasa C., Principal, BES PU College
Sri Suresh, Principal, BES Evening PU College
BES-26708

ಜೀವನ ಸಂಗಾತಿ
Love finds it's match.



WANTED BRIDES

WANTED GROOMS

ವೈವಾಹಿಕ MATRIMONIALS
WANTED BRIDES
BY CASTE
VOKKALIGA
ವಧು ಬೇಕಾಗಿದೆ. ಒಕ್ಕಲಿಗ 45 ವರ್ಷ, ಎಂಎಸ್ಸಿ, ಎಂಟೆಕ್, 5.8' ಮಕ್ಕಳಿಲ್ಲದ ವಿಚ್ಛೇದಿತ ಅನುಕೂಲವಂತ ವ್ಯಾಪಾರ ಮಾಡುವ ವರನಿಗೆ ವಧು ಬೇಕಾಗಿದೆ. ಸಂ : 8095732067.
BY PROFESSION
ENGINEERS
Looking for BRIDE
Bangalore-based Software Engineer, 28, 5'7", ambitious and family-oriented, from a cultured Delhi-based family.
Seeks professionally qualified, kind-hearted, and family-oriented bride with modern values.
WhatsApp us at: 9899079825
OTHER PROFESSIONALS
ವಧು ಬೇಕಾಗಿದೆ: 45ರಿಂದ 50 ವರ್ಷದ ವಿಧವೆ ವಧು ಕೆಳ ಕಾಣಿಸಿದ ವರನಿಗೆ ಬೇಕಾಗಿದೆ. ಆಸಕ್ತಿ ಇದ್ದವರು direct ಕರೆ ಮಾಡಿ 7019393233. No Broker.
BY RELIGION
CHRISTIAN
SYRIAN Catholic bridegroom, 1986, 174 cm fair, B.Tech MBA, MNC Bangalore. A fair good-looking qualified bride needed. 99720 05190.
HINDU
HINDU Besta, Kannada, June'84/Pune Born/5'8",Graduate, Never Married, good-looking, Job in RBI Press, Mysore, 20LPA seeks Hindu, Never Married, good-looking bride(34-41), 5'-5'8", Educated, Working, mother tongue Kannada/ Marathi/ Tulu/ Konkani/ others preferred. Caste no bar. Call/WA 7899402978
GENERAL
CASTE NO BAR
54 ವರ್ಷದ ಪುರುಷನಿಗೆ ಸಸ್ಯಹಾರಿ ಆಗಿದ್ದು, ಸಮ ವಯಸ್ಸಿನ / ಕೆಳಗಿನ ವಯಸ್ಸಿನವರಾಗಿದ್ದು, ಯಾವುದೇ ಜಾತಿಯ ಮದುವೆಯಾಗದ, ವಿಧವೆ, ವಿಚ್ಛೇದಿತೆ ಆಗಿರುವಂತ ವಧು ಬೇಕಾಗಿರುತ್ತದೆ. ಸಂಪರ್ಕಿಸಿ: 9742354919.
SC/ST
ಸರವಣ (42 ವರ್ಷ, ವಿಕಲಚೇತನ) ಆದ ನನಗೆ ವಧು ಬೇಕಾಗಿದೆ. ಎಸ್‌ಸಿ ಸಮುದಾಯದವನಾಗಿದ್ದು, ಬೆಂಗಳೂರಿನಲ್ಲಿ ಸ್ವಂತ ಮನೆಯಿದೆ. ಮಾಸಿಕ 40 ಸಾವಿರ ಆದಾಯ. ಸಂ. 78299 87450.

WANTED GROOMS
BY CASTE
BRAHMIN
(ಬ್ರಾಹ್ಮಣ) ವಯಸ್ಸು 34, 23, 25, 24, 30, 10th, PUC, Diploma, Degree ಕಲಿತಿರುವ ವಧುಗಳಿಗೆ ಯಾವುದೇ ಬಿಸಿನೆಸ್ ಅಥವಾ ಉದ್ಯೋಗದಲ್ಲಿದ್ದರೂ ಅಭ್ಯಂತರವಿಲ್ಲ. ಒಳ್ಳೆಯ ಗುಣ ನಡತೆಯ ವರಗಳು ಬೇಕಾಗಿದ್ದಾರೆ. (ಸಪ್ತಪದಿ ಬ್ರಾಹ್ಮಣ ವಧು ವರ ವಿವಾಹ ವೇದಿಕೆ) ಶಿವಮೊಗ್ಗ 8884794406.
ಬ್ರಾಹ್ಮಣ ವಧುವಿನ, 'ಕನ್ಯೆಯ' ವಯಸ್ಸು 24, SSLC ಕಲಿತಿರುವ / ವಯಸ್ಸು 28, PUC / ವಯಸ್ಸು 32, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. ಬ್ರಾಹ್ಮಣ ವಧು-ವರರಿಗಾಗಿ ಸಂಪರ್ಕಿಸಿ. (ಮ್ಯಾರೇಜ್ ಬ್ಯೂರೋ), (M) 9483385177.
GENERAL
CASTE NO BAR
SLIM, Fair, B'ful, Never Married, Punjabi girl, 37, 5'3", born & brought up in Delhi. Working as Strategy Director in MNC in Bangalore, (Rs.60 LPA). Seeks smart, well-settled match based in Bangalore. Contact: 7837483747
2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ. ವಯಸ್ಸು 35 ವರ್ಷ ಜಾತಿ ಭೋವಿ, ನೇರವಾಗಿ ಸಂಪರ್ಕಿಸಿ 9148290400. ಜಾತಿ ವಯಸ್ಸು ಅಭ್ಯಂತರವಿಲ್ಲ.

MARRIAGE BUREAUS
ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಹಿರೇಮಠ್ ಗುರೂಜಿ
94482 29184
78996 25268
ಬ್ರಾಹ್ಮಣ, ಲಿಂಗಾಯತ, GSB, RSB ಇನ್ನಿತರ ಸಸ್ಯಾಹಾರಿ ವಧುಗಳಿಗೆ ಮಾತ್ರ ಉಚಿತ ನೊಂದಾವಣೆ, ವಧುವಿನ ಮದುವೆಗೆ ಹಣಕಾಸಿನ ಆರ್ಥಿಕ ಸಹಾಯವಿದೆ. ವಿಧವೆ, ವಿಚ್ಛೇದಿತರು ಸಂಪರ್ಕಿಸಬಹುದು. (ಸುಮಂಗಳ ಮ್ಯಾರೇಜ್ ಬ್ಯೂರೋ). Ph.: 9483385177.
ವಧು ಬೇಕಾಗಿದ್ದಾರೆ. 69 ವಯಸ್ಸು, ಎಂಎಸ್ಸಿ, ಪಿಹೆಚ್‌ಡಿ ಫಿಸಿಕ್ಸ್, ಸ್ವಂತ ಮನೆ, ಕಾರು, ಪೆನ್ಷನ್ ಬರುತ್ತದೆ.50 ವರ್ಷ ಮೇಲ್ಪಟ್ಟ ಗುಣವಂತ ಮಹಿಳೆ ಬೇಕಾಗಿದ್ದಾರೆ. ಸಂ: 8951346071.

CAUTION
This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.
ADVERTISEMENT MANAGER

SIR ಜಾರಿ ತಡೆಗೆ ಮುಸ್ಲಿಮರ ಒತ್ತಾಯ

■ **ವಿಕ ಸುದ್ದಿಲೋಕ** ಬೆಂಗಳೂರು

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮುಸ್ಲಿಂ ಸಮುದಾಯಕ್ಕೆ 10 ಭರವಸೆಗಳನ್ನು ನೀಡಿದ್ದ ಕಾಂಗ್ರೆಸ್ ಪಕ್ಷವು, ಅಧಿಕಾರಕ್ಕೆ ಬಂದು 3 ವರ್ಷ ಸಮೀಪಿಸಿದರೂ ಒಂದನ್ನು ಮಾತ್ರ ಈಡೇರಿಸಿದೆ. 2ಬಿ ಮೀಸಲು ಮರುಸ್ಥಾಪನೆ, ಗೋಹತ್ಯೆ ನಿಷೇಧ ಕಾಯಿದೆ ರದ್ದತಿ, ರಾಜಕೀಯ ಪ್ರಾತಿನಿಧ್ಯ, ಜಾತಿ-ಧರ್ಮದ ಆಧಾರದ ಮೇಲೆ ದ್ವೇಷ ಹರಡುವ ಸಂಘಟನೆ, ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಸೇರಿದಂತೆ ಇತರೆ ಭರವಸೆಗಳನ್ನು ಈಡೇರಿಸಬೇಕೆಂದು ಸಮುದಾಯದ ಮುಖಂಡರು ಒಕ್ಕೊರಲಿನಿಂದ ಆಗ್ರಹಿಸಿದರು.

ಕರ್ನಾಟಕ ಮುಸ್ಲಿಂ ಸಂಘಟನೆಗಳ ಒಕ್ಕೂಟವು ನಗರದ ಪುರಭವನದಲ್ಲಿ ಶನಿವಾರ ಆಯೋಜಿಸಿದ್ದ ಮುಸ್ಲಿಂ ಸಮಾವೇಶದಲ್ಲಿ 'ಕಾಂಗ್ರೆಸ್ ಸರಕಾರ ಹೇಳಿದ್ದೇನು? ಮಾಡಿದ್ದೇನು? ಮುಂದೇನು?' ಎಂಬ ವರದಿ ಮತ್ತು ಆಗ್ರಹಗಳ ಪಟ್ಟಿ ಬಿಡುಗಡೆ ಮಾಡಿದ ಮುಸ್ಲಿಂ ಮುಖಂಡರು, ಕಾಲಮಿತಿಯಲ್ಲಿ ಈಡೇರಿಸುವಂತೆ ಆಗ್ರಹಿಸಿದರು.

ಬಿಡುಗಡೆ ಮಾಡಿದ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಂಬಂಧಪಟ್ಟ ಸಚಿವರು ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೂ ತಲುಪಿಸಲು ಸಮಾವೇಶದಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಮುಸ್ಲಿಂ ಸಮಾವೇಶದಲ್ಲಿ ವರದಿ ಬಿಡುಗಡೆ

ನಂತರ ಮಾತನಾಡಿದ ಮುಸ್ಲಿಂ ಮುಖಂಡರು, ''ಈ ಸಮಾವೇಶವು ಕಾಂಗ್ರೆಸ್ ಪಕ್ಷದ ವಿರುದ್ಧ ಅಲ್ಲ. ಮುಸ್ಲಿಂ ಸಮುದಾಯಕ್ಕೆ ಕೊಟ್ಟ ಭರವಸೆ ಈಡೇರಿಸಲಾಗಿದೆಯೇ ಎಂಬುದನ್ನು ಜನರ ಮುಂದಿಡುವ ಉದ್ದೇಶವಾಗಿದೆ. ಸರಕಾರಗಳು ಮತ್ತು ಸಮುದಾಯಗಳು ಮುಕ್ತ, ಪ್ರಾಮಾಣಿಕವಾಗಿ ಹಾಗೂ ನ್ಯಾಯ, ಪ್ರಾತಿನಿಧ್ಯ ಮತ್ತು ಸಮಾನ ಅಭಿವೃದ್ಧಿಯ ನಿಟ್ಟಿನಲ್ಲಿ ಹಂಚಿಕೊಂಡ ಬದ್ಧತೆಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿದಾಗ ಬಲಿಷ್ಠ ಪ್ರಜಾಪ್ರಭುತ್ವ ನಿರ್ಮಾಣವಾಗುತ್ತದೆ. ಆ ನಂಬಿಕೆಯೊಂದಿಗೆ ಈ ವರದಿ ಬಿಡುಗಡೆ ಮಾಡಲಾಗಿದೆ,'' ಎಂದು ತಿಳಿಸಿದರು.

> **ಬೇಡಿಕೆಗಳಲ್ಲಿ ಒಂದಾಗಿದ್ದ ಹಿಜಾಬ್ ನಿಷೇಧವನ್ನು ವಾಪಸ್ ಪಡೆಯಲಾಗಿದೆ. ಉಳಿದ ಬೇಡಿಕೆಗಳನ್ನು ಈಡೇರಿಸಿಲ್ಲ. ಅವೆಲ್ಲವನ್ನು ಕಾಲಮಿತಿಯೊಳಗೆ ಈಡೇರಿಸಲು ಸರಕಾರ ತಕ್ಷಣವೇ ಕ್ರಮ ವಹಿಸಬೇಕು.**
>
> **-ಸುಹೈಲ್ ಅಹ್ಮದ್** 'ಸಮಾವೇಶದ ಸಂಚಾಲಕ

''ರಾಜ್ಯದ ಒಟ್ಟು ಜನಸಂಖ್ಯೆ ಶೇ.13ರಷ್ಟಿರುವ ಮುಸ್ಲಿಂ ಸಮುದಾಯ, ಜಾತ್ಯತೀತ ಧ್ವನಿಗಳು ಮತ್ತು ಶಾಂತಿಪ್ರಿಯ ನಾಗರಿಕರೊಂದಿಗೆ ಸೇರಿ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಮಹತ್ವದ ಕೊಡುಗೆ ನೀಡಿದೆ. ಆದ್ದರಿಂದ ರಾಜ್ಯ ಸರಕಾರ ಕೂಡಲೇ ಸಮುದಾಯದ ಆಶೋತ್ತರಗಳನ್ನು ಈಡೇರಿಸಬೇಕು. ಅಲ್ಲದೇ ತನ್ನ ಸಾಂವಿಧಾನಿಕ ಅಧಿಕಾರ ಬಳಸಿ, ಎಸ್‌ಐಆರ್ ಜಾರಿಗೊಳಿಸಲು ಬಿಡಬಾರದು,'' ಎಂದು ಆಗ್ರಹಿಸಿದರು.

ಸಾಮಾಜಿಕ ಹೋರಾಟಗಾರ ಮೊಹಮ್ಮದ್ ಯಾಸೀನ್ ಮಲ್ಪೆ ಮಾತನಾಡಿ, ''ದ್ವೇಷ ಹರಡುವವರನ್ನು ನಿಯಂತ್ರಿಸಲಾಗುವುದು ಎಂದು ಚುನಾವಣೆಗೂ ಮೊದಲು ಕಾಂಗ್ರೆಸ್ ಭರವಸೆ ನೀಡಿತ್ತು. ಆದರೆ, ದ್ವೇಷ ಹರಡುವ ಸಂಘಟನೆಗಳ ವಿರುದ್ಧ ಈವರೆಗೆ ಕ್ರಮ ಕೈಗೊಂಡಿಲ್ಲ. ಗೋ ಹತ್ಯೆ ನಿಷೇಧ ಕಾಯಿದೆ ರದ್ದತಿಯ ಭರವಸೆಯೂ ಇನ್ನು ಈಡೇರಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅನಾಥರ ಕಾಯುವ 'ಶೇರ್'

ಸಿನಿ ವಿಮರ್ಶೆ ■ ಕಿರಣ್ ಚಂದ್ರ

ಶೇರ್

ಮಾರ್ಕೆಟ್‌ನಲ್ಲಿ ಕೂಲಿ ಕೆಲಸ ಮಾಡಿಕೊಂಡಿರುವ ಅನಾಥರ ಗುಂಪಿನ ನಾಯಕ ಶಿವು. ಈ ಮಾರ್ಕೆಟ್ ಸುತ್ತಮುತ್ತ ಕೆಲವು ದಿನಗಳಿಂದ ಜನರು ಕಾರಣವಿಲ್ಲದೆ ಸಾಯುತ್ತಿರುತ್ತಾರೆ. ಮಾರ್ಕೆಟ್‌ನಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿರಬಹುದೆಂದು ಪೊಲೀಸರ ಗುಮಾನಿ. ಶಿವು ಎದುರಾಳಿ ಗ್ಯಾಂಗ್‌ನ ಗಿಲ್ಲಿ ಅಂತಹ ಅಕ್ರಮಗಳಲ್ಲಿ ಮೊದಲಿನಿಂದಲೂ ಫೇಮಸ್.

ಹೀರೋ ಒಮ್ಮೆ ಕೆಲಸಕ್ಕೆಂದು ದೂರದ ಊರಿಗೆ ಹೋಗಿದ್ದಾಗ ಕಿರಿಕ್ ಮಾಡಿಕೊಂಡಿರುತ್ತಾನೆ. ಇವನನ್ನು ಸಂಚು ಹಾಕಿ ಕರೆದೊಯ್ಯಲು ಚಿತ್ರದ ನಾಯಕಿ ಭುವನಾ ಈ ಅನಾಥರ ಗುಂಪು ಸೇರಿಕೊಳ್ಳುತ್ತಾಳೆ. ನಾಯಕನಿಗೆ ಈ ವಿಷ್ಯ ಗೊತ್ತಾಗುವುದರಲ್ಲಿ ಕ್ಲೈಮ್ಯಾಕ್ಸ್ ಬಂದಿರುತ್ತದೆ. ಆದರೆ ಮಾರ್ಕೆಟ್‌ನಲ್ಲಾಗುತ್ತಿರುವ ನಿಗೂಢ ಸಾವುಗಳ ಸಾಲಿಗೆ ಶಿವು ಗೆಳೆಯನ ಸಾವೂ ಸೇರುತ್ತದೆ. ಅಲ್ಲಿಂದ ಕಥೆ ಬೇರೆಯದೇ ತಿರುವು ಪಡೆಯುತ್ತದೆ. ಈ ಸರಣಿ ಸಾವುಗಳ ಹಿಂದಿನ ರಹಸ್ಯವೇನು? ಅದನ್ನು ನಾಯಕ ಹೇಗೆ ಭೇದಿಸುತ್ತಾನೆ ಎನ್ನುವುದೇ ಕಥೆ.

ಅಂಗಾಂಗ ಕಳ್ಳಸಾಗಣೆ ಕುರಿತಾಗಿ ಹೆಣೆದಿರುವ ಥ್ರಿಲ್ಲಿಂಗ್ ಕಥೆಯಲ್ಲಿ ಕಮರ್ಷಿಯಲ್ ಎಲಿಮೆಂಟ್‌ಗಳನ್ನು ಸೇರಿಸಿ ಸಿನಿಮಾ ಮಾಡಿರುವ ನಿರ್ದೇಶಕ ಪ್ರಸಿದ್ಧ್ ಅವರ ಪ್ರಯತ್ನ ಮೆಚ್ಚುವಂಥದ್ದು. ಆದರೆ ಚಿತ್ರಕಥೆಯಲ್ಲಿ ಇನ್ನಷ್ಟು ಹಿಡಿತ ಸಾಧಿಸಬಹುದಿತ್ತು. ಕಿರುತೆರೆಯಲ್ಲಿ ಜನಪ್ರಿಯತೆ ಗಳಿಸಿರುವ ಕಿರಣ್ ರಾಜ್ ಆ್ಯಕ್ಷನ್ ಸೀನ್‌ಗಳಲ್ಲಿ ಅಬ್ಬರಿಸಿದ್ದಾರೆ. ಎಮೋಷನಲ್ ಸನ್ನಿವೇಶಗಳಲ್ಲಿ ಕೊಂಚ ನಾಟಕೀಯ ಅನಿಸುತ್ತಾರೆ. ವಿಲನ್ ಗಿಲ್ಲಿ ಪಾತ್ರದ ಕ್ರಿಸ್ ರೋಡ್ರಿಗ್ ಭರವಸೆ ಮೂಡಿಸುತ್ತಾರೆ. ಬಲರಾಜ್ ವಾಡಿ, ಶೋಭರಾಜ್‌ರಂಥ ದಿಗ್ಗಜ ನಟರು ಹಾಗೂ ಯಶ್ ಶೆಟ್ಟಿ ಪಾತ್ರಗಳ ಪ್ರಾಮುಖ್ಯತೆ ತಗ್ಗಿಸಲಾಗಿದೆ. ಪೊಲೀಸ್ ಪಾತ್ರದಲ್ಲಿ ತನಿಷಾ ಕುಪ್ಪಂಡ ಗಮನ ಸೆಳೆಯುವುದಿಲ್ಲ. ಹಾಡುಗಳಲ್ಲಿ ಹೊಸತನವಿದ್ದರೂ, ಹಿನ್ನೆಲೆ ಸಂಗೀತ ಸದ್ದು ಮಾಡುವುದಿಲ್ಲ. ನಾಯಕಿ ಸುರೇಖಾ ಸಿಂಪಲ್ ಪಾತ್ರದಲ್ಲೂ, ಗ್ಲಾಮರ್ ಲುಕ್‌ನಲ್ಲೂ ಗಮನ ಸೆಳೆಯುತ್ತಾರೆ. ಈ ಪಕ್ಕಾ ಮಾಸ್ ಆ್ಯಕ್ಷನ್ ಥ್ರಿಲ್ಲರ್ ಚಿತ್ರವನ್ನು ಒಮ್ಮೆ ನೋಡಿ ಎಂಜಾಯ್ ಮಾಡಲು ಅಡ್ಡಿ ಇಲ್ಲ.

ತಾರಾಗಣ: ಕಿರಣ್ ರಾಜ್, ಸುರೇಖಾ ವೆಂಕಟೇಶ್, ಕ್ರಿಸ್ ರೋಡ್ರಿಗ್, ಯಶ್ ಶೆಟ್ಟಿ, ತನಿಶಾ ಕುಪ್ಪಂಡ, ಬಲ ರಾಜ್ವಾಡಿ, ಶೋಭರಾಜ್, ವೀಣಾ ಸುಂದರ್.
ನಿರ್ದೇಶನ: ಪ್ರಸಿದ್ಧ್.
ಸಂಗೀತ ನಿರ್ದೇಶನ: ಗುಮ್ಮಿನೇನಿ ವಿಜಯ್ ಬಾಬು.
ಛಾಯಾಗ್ರಹಣ: ಕಿಟ್ಟಿ ಕೌಶಿಕ್. **ಸ್ಟಾರ್:** ★★★

Rating Scale: TRASH ★ | BELOW AVERAGE ★★ | AVERAGE ★★1/2 | ABOVE AVERAGE ★★★ | GOOD ★★★1/2 | VERY GOOD ★★★★ | OUTSTANDING ★★★★1/2 | MASTERPIECE ★★★★★

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Hosur Road, Bengaluru, India-560 029.
Website: http://www.nimhans.ac.in

Ref. No.: NIMH/A&E/EA1/UG/AY 2026-27 Date: 16.05.2026

ADMISSION NOTICE

Online Application are invited for admissions to the following Under Graduate courses for the Academic Year 2026-27:

Sl. No.	Name of the Course	Total Seats	No. of Seats for Institute Supported Category	No. of Seats under Sponsored / Deputed Category
	B.Sc. Courses			
1.	**B.Sc. in Anaesthesia Technology:**	**11**		
	a. All India Category (UR – 03, OBC – 01)	04	04	-
	b. Karnataka Domicile Category (UR – 05, OBC – 01, SC – 01)	07	07	-
2.	**B.Sc. in Nursing:**	**85**		
	a. All India Category (UR – 16, EWS – 03, OBC – 09, SC – 05, ST – 02)	35	35	-
	b. Karnataka State Domicile Category (UR – 22, EWS – 05, OBC – 13, SC – 07, ST – 03)	50	50	-
3.	**B.Sc. in Medical Imaging Technology:**	**11**		
	a. All India Category (UR – 03, OBC – 01,)	04	04	-
	b. Karnataka State Domicile Category (UR – 05, OBC – 01, SC – 01)	07	07	-
4.	**B.Sc. in Clinical Neurophysiology Technology**	**07**		
	a. All India Category (UR – 02)	02	02	-
	b. Karnataka Domicile Category (UR – 03, OBC – 01)	04	04	-
	c. Sponsored Category	01	-	01
	Certificate Course			
1.	**Certificate Course in Panchakarma**	**05***		-
	a. All India Category (UR – 02)	02	02	
	b. Karnataka Domicile Category (UR – 02)	02	02	
	c. Sponsored Category	01		01
	*Each category shall be filled by one male and one female candidate, as per the course requirements.			

The Entrance test will be conducted in Bengaluru city only on 26.07.2026 (Tentative).
Kindly refer to 'Admission Notification for undergraduate courses of the Academic Year 2026-27' or 'UG Prospectus 2026-27' on the NIMHANS Website for more details http://www.nimhans.ac.in

Sd/-, DIRECTOR

ಬೆಂಗಳೂರು ಮತ್ತು ಮುಂಬೈ
ನಡುವಿನ ರೈಲು ಸಂಪರ್ಕದ ಬಲವರ್ಧನೆ

"ಉತ್ತಮ ಸಂಪರ್ಕವು ಜೀವನವನ್ನು ಪರಿವರ್ತಿಸುತ್ತದೆ, ಹೊಸ ಅವಕಾಶಗಳನ್ನು ತೆರೆಯುತ್ತದೆ ಮತ್ತು ರಾಷ್ಟ್ರದ ಪ್ರತಿಯೊಂದು ಮೂಲೆಯಲ್ಲೂ ಆರ್ಥಿಕ ಬೆಳವಣಿಗೆಗೆ ಚಾಲನೆ ನೀಡುತ್ತದೆ"
-ನರೇಂದ್ರ ಮೋದಿ, ಪ್ರಧಾನ ಮಂತ್ರಿಗಳು

ಬೆಂಗಳೂರು-ಮುಂಬೈ ಎಕ್ಸ್‌ಪ್ರೆಸ್‌ಗೆ
ಹಸಿರು ನಿಶಾನೆ

ಸೌಲಭ್ಯಗಳು
- ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಮತ್ತು ಲೋಕಮಾನ್ಯ ತಿಲಕ್ ಟರ್ಮಿನಸ್ ನಡುವಿನ ಸಂಪರ್ಕವನ್ನು ಮತ್ತಷ್ಟು ಬಲಪಡಿಸಿ, ಪ್ರಮುಖ ಅಂತರ್‌ನಗರ ರೈಲು ಸಂಪರ್ಕಕ್ಕೆ ಹೊಸ ಚೈತನ್ಯ ನೀಡುತ್ತದೆ
- ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ವ್ಯಾಪಾರ, ಉದ್ಯಮ ಚಟುವಟಿಕೆಗಳು ಹಾಗೂ ಪ್ರವಾಸೋದ್ಯಮ ವೃದ್ಧಿಗೆ ಉತ್ತೇಜನ ನೀಡಿ, ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತದೆ
- ವಿಶ್ವಾಸಾರ್ಹ ಮತ್ತು ಕೈಗೆಟುಕುವ ರೈಲು ಸಂಪರ್ಕಕ್ಕಾಗಿ ಕಾಯುತ್ತಿದ್ದ ಲಕ್ಷಾಂತರ ಪ್ರಯಾಣಿಕರು, ಉದ್ಯೋಗಸ್ಥರು ಮತ್ತು ಕುಟುಂಬಗಳಿಗೆ ಅನುಕೂಲ ಒದಗಿಸುತ್ತದೆ
- ವಿಮಾನ ಹಾಗೂ ರಸ್ತೆ ಪ್ರಯಾಣಕ್ಕೆ ಹೋಲಿಸಿದರೆ, ರೈಲು ಪ್ರಯಾಣವು ಹೆಚ್ಚು ಆರಾಮದಾಯಕ, ಮಿತ ವ್ಯಯದ ಹಾಗೂ ಪರಿಸರ ಸ್ನೇಹಿ ಪ್ರಯಾಣದ ಆಯ್ಕೆಯಾಗಿದೆ

ಇವರಿಂದ
ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ ಹಾಗೂ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಘನ ಉಪಸ್ಥಿತಿ
ವಿ. ಸೋಮಣ್ಣ
ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು

ಪಿ. ಸಿ. ಮೋಹನ್, ಸಂಸದರು | ತೇಜಸ್ವಿ ಸೂರ್ಯ, ಸಂಸದರು | ಜಿ. ಸಿ. ಚಂದ್ರಶೇಖರ, ಸಂಸದರು, ರಾಜ್ಯಸಭೆ | ಲಹರ್ ಸಿಂಗ್ ಸಿರೋಯಾ, ಸಂಸದರು, ರಾಜ್ಯಸಭೆ | ಜಗ್ಗೇಶ್, ಸಂಸದರು ರಾಜ್ಯಸಭೆ
ನಾರಾಯಣ ಕೊರಗಪ್ಪ, ಸಂಸದರು, ರಾಜ್ಯಸಭೆ | ಎಸ್. ರಘು, ವಿಧಾನಸಭಾ ಸದಸ್ಯರು | ಪುಟ್ಟಣ್ಣ, ವಿಧಾನ ಪರಿಷತ್ ಸದಸ್ಯರು | ಎಚ್. ಎಸ್. ಗೋಪಿನಾಥ್, ವಿಧಾನ ಪರಿಷತ್ ಸದಸ್ಯರು | ರಾಮೋಜಿ ಗೌಡ, ವಿಧಾನ ಪರಿಷತ್ ಸದಸ್ಯರು

ಸರ್. ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು | ರವಿವಾರ 17ನೇ ಮೇ 2026 | ಬೆಳಿಗ್ಗೆ 10:00ಕ್ಕೆ




ಸರ್ವರಿಗೂ ಆದರದ ಸ್ವಾಗತ

ನೈಋತ್ಯ ರೈಲ್ವೆ
www.swr.indianrailways.gov.in | SouthwesternRailway-SWR | sw_railways | @SWRAILWAYHQ | @sw_railways
PUB/133/AAD360/PRB/SWR/2026-27

JOY OF LIVING PRM/KA/RERA/1251/310/PR/050526/008622

DS MAX®

DS MAX
Sky Sukhino
LUXURIOUS 3-BHK APARTMENTS | G+14 FLOORS
MAGADI ROAD
10 MINS. NICE ROAD TOLL
KING SIZE HOMES STARTS @ Rs.93 L*
1423 SQFT
*T & C Apply

ಡಿಎಸ್ ಮ್ಯಾಕ್ಸ್ ಸ್ಕೈ ಸುಖಿನೋ
8880 465 465
www.dsmaxproperties.com

JUST Launched
Visit our website or talk to our advisors for the complete portfolio

2, 3 & 4-BHK APARTMENTS FOR SALE IN VARIOUS LOCATIONS

RERA	Location	Landmark	Price	Phone	Floors
PRM/KA/RERA/1250/304/PR/251024/007179	WHITEFIELD	10 MINS. HOPEFARM METRO	₹ 72.86 L - 1.32 Cr*	8880 461 461	G+14
PRM/KA/RERA/1251/310/PR/210324/006724	SILKBOARD	NEAR SINGASANDRA METRO STN.	₹ 91.27 L - 1.47 Cr*	8880 013 310	G+14
PRM/KA/RERA/1251/472/PR/250225/007524	AIRPORT ROAD	NEAR PRESTIGE TECH IT PARK	₹ 87.89 L - 1.21 Cr*	8880 465 465	G+14
PRM/KA/RERA/1251/310/PR/150223/005721	MYSORE ROAD	NEAR CHALLAGHATTA METRO STN.	₹ 75.00 L - 1.06 Cr*	8880 461 461	G+14
PRM/KA/RERA/1251/308/PR/281125/008287	JIGANI	5 MINS. APC CIRCLE	₹ 60.78 - 95.35 Lakhs*	8880 003 003	G+14
PRM/KA/RERA/1251/310/PR/151223/006489	BANASHANKARI	OPP. NPS SCHOOL (3 & 4-BHK)	₹ 1.45 - 2.17 Cr*	8880 461 461	G+3
PRM/KA/RERA/1250/301/PR/251024/007178	YELAHANKA	5 MINS. RAJANUKUNTE	₹ 54.85 - 97.21 Lakhs*	8880 465 465	G+14
PRM/KA/RERA/1251/308/PR/160824/006973	BANNERGHATTA RD.	NEAR KOPPA GATE	₹ 59.86 - 85.23 Lakhs*	8880 013 310	G+14
PRM/KA/RERA/1251/308/PR/291225/008366	HOSUR ROAD	10 MINS. ELECTRONIC CITY	₹ 62.71 L - 1.01 Cr*	8880 003 003	G+22
PRM/KA/RERA/1251/308/PR/160824/006972	HOSA ROAD METRO	NEAR ELECTRONIC CITY	₹ 80.01 L - 1.44 Cr*	8880 013 310	G+4
PRM/KA/RERA/1251/446/PR/190301/002464	WHITEFIELD	5 MINS. KADUGODI METRO	₹ 78.40 - 86.88 Lakhs*	8880 461 461	G+4
PRM/KA/RERA/1251/308/PR/230126/008427	SARJAPURA	SARJAPUR - ATTIBELE ROAD	₹ 60.01 - 83.25 Lakhs*	8880 003 003	G+4

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in *T & C Apply

CREDAI

ಸಾತ್ವಿಕ್-ಚಿರಾಗ್ ಫೈನಲ್‌ಗೆ

ಥಾಯ್ಲೆಂಡ್ ಓಪನ್

ಬ್ಯಾಂಕಾಕ್: ಥಾಯ್ಲೆಂಡ್ ಓಪನ್ ಸೂಪರ್500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಪುರುಷರ ಡಬಲ್ಸ್ ಫೈನಲ್ ಪ್ರವೇಶಿಸಿದೆ. ಶನಿವಾರ ನಡೆದ ರೋಮಾಂಚಕ ಸೆಮಿಫೈನಲ್ ಪಂದ್ಯದಲ್ಲಿ ವಿಶ್ವದ 4ನೇ ಶ್ರೇಯಾಂಕದ ಭಾರತೀಯ ಜೋಡಿಯು, ಮಲೇಷ್ಯಾದ ಗೋಹ್ ಸಜೆ ಫೀ ಮತ್ತು ನೂರ್‌ಇಜುದ್ದೀನ್ ವಿರುದ್ಧ 19-21, 22-20, 21-16 ಗೇಮ್‌ಗಳಿಂದ ಜಯಭೇರಿ ಬಾರಿಸಿತು. 82 ನಿಮಿಷಗಳ ಕಾಲ ನಡೆದ ಈ ಸುದೀರ್ಘ ಕಾದಾಟದಲ್ಲಿ ಭಾರತೀಯ ಆಟಗಾರರು ಒತ್ತಡದ ನಡುವೆಯೂ ಅದ್ಭುತ ಸಂಯಮದ ಆಟ ಪ್ರದರ್ಶಿಸಿದರು.

''ಇತ್ತೀಚೆಗಷ್ಟೆ ಥಾಮಸ್ ಕಪ್‌ನಲ್ಲಿ ಕಂಚಿನ ಪದಕ ಗೆದ್ದಿರುವುದು ನಮ್ಮ ಆತ್ಮವಿಶ್ವಾಸ ಹೆಚ್ಚಿಸಿದೆ ಮತ್ತು ವರ್ಷದ ಮೊದಲ ಫೈನಲ್ ತಲುಪಿರುವುದು ಸಂತಸ ತಂದಿದೆ,'' ಎಂದು ಚಿರಾಗ್ ಶೆಟ್ಟಿ ಗೆಲುವಿನ ಕುರಿತು ಪ್ರತಿಕ್ರಿಯಿಸಿದ್ದಾರೆ. ಥಾಯ್ಲೆಂಡ್ ಓಪನ್ ಟೂರ್ನಿಯಲ್ಲಿ ಮೂರನೇ ಬಾರಿಗೆ ಫೈನಲ್ ತಲುಪಿರುವ ಸಾತ್ವಿಕ್- ಚಿರಾಗ್ ಜೋಡಿ, ಪ್ರಶಸ್ತಿ ಸುತ್ತಿನ ಸ್ಪರ್ಧೆಯಲ್ಲಿ ಇಂಡೋನೇಷ್ಯಾದ ಲಿಯೋ ರೊಲ್ಲಿ ಕರ್ನಾಂಡೋ ಮತ್ತು ಡೇನಿಯಲ್ ಮಾರ್ಟಿನ್ ಅವರನ್ನು ಎದುರಿಸಲಿದೆ.

ಇಟಾಲಿಯನ್ ಓಪನ್: ಮಳೆ ಬಾಧಿತ ಪಂದ್ಯದಲ್ಲಿ ಮೆಡ್ವೆಡೆವ್ ವಿರುದ್ಧ ಜಯ

ಪ್ರಶಸ್ತಿ ಸುತ್ತಿಗೆ ಜನ್ನಿಕ್ ಸಿನ್ನರ್



ರೋಮ್: ಭಾರಿ ಮಳೆಯ ನಡುವೆ ನಡೆದ ರೋಮಾಂಚಕ ಇಟಾಲಿಯನ್ ಓಪನ್ ಸೆಮಿಫೈನಲ್ ಪಂದ್ಯದಲ್ಲಿ ವಿಶ್ವದ ನಂ.1 ಆಟಗಾರ ಜನ್ನಿಕ್ ಸಿನ್ನರ್, ಡೇನಿಲ್ ಮೆಡ್ವೆಡೆವ್ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದಾರೆ. ಶುಕ್ರವಾರ ರಾತ್ರಿ ಆರಂಭವಾದ ಪಂದ್ಯವು ತೀವ್ರ ಮಳೆಯ ಕಾರಣ ಮೂರನೇ ಸೆಟ್‌ನಲ್ಲಿ (6-2, 5-7, 4-2) ಸ್ಥಗಿತಗೊಂಡಿತ್ತು. ಅಪಾಯಕಾರಿ ಪಿಚ್ ಪರಿಸ್ಥಿತಿಯಿಂದಾಗಿ ಅಂಪೈರ್ ಪಂದ್ಯವನ್ನು ಶನಿವಾರಕ್ಕೆ ಮುಂದೂಡಿದ್ದರು. ಪಂದ್ಯ ಮುಂದುವರಿಸಿದ ಇಟಲಿಯ ಸಿನ್ನರ್, ತಮ್ಮ ಸರ್ವ್ ಅನ್ನು ಯಶಸ್ವಿಯಾಗಿ ಕಾಯ್ದುಕೊಂಡು 6-2, 5-7, 6-4 ರಿಂದ ಗೆಲುವು ಸಾಧಿಸಿದರು. ಈ ಮೂಲಕ ಅವರು ತಮ್ಮ ಸತತ 6ನೇ ಎಟಿಪಿ ಮಾಸ್ಟರ್ಸ್ 1000 ಫೈನಲ್ ತಲುಪಿದ್ದು, ಪ್ರಶಸ್ತಿಗಾಗಿ ನಾರ್ವೆಯ ಕ್ಯಾಸ್ಪರ್ ರೂಡ್‌ರನ್ನು ಎದುರಿಸಲಿದ್ದಾರೆ. ಭಾನುವಾರ ಅವರು ಗೆದ್ದರೆ, ಕೇವಲ 24ನೇ ವಯಸ್ಸಿನಲ್ಲಿ ಎಲ್ಲಾ 9 ಎಟಿಪಿ ಮಾಸ್ಟರ್ಸ್ ಟ್ರೋಫಿಗಳನ್ನು ಗೆದ್ದ ಎರಡನೇ ಆಟಗಾರ (ನೊವಾಕ್ ಜೊಕೊವಿಕ್ ನಂತರ) ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಸೋತರೂ ಮೆಡ್ವೆಡೆವ್ ತಾವೊಬ್ಬ ಬಲಿಷ್ಠ ಆಟಗಾರ ಎಂಬುದನ್ನು ಸಾಬೀತುಪಡಿಸಿದರು. ಪಂದ್ಯ ವೇಳೆ ಸಿನ್ನರ್ ಕೋರ್ಟ್‌ನಲ್ಲೇ ವಾಂತಿ ಮಾಡಿಕೊಂಡರು ಮತ್ತು ಕಾಲಿನ ನೋವಿನಿಂದಾಗಿ ವೈದ್ಯಕೀಯ ವಿರಾಮ (ಮೆಡಿಕಲ್ ಟೈಮ್‌ಔಟ್) ಪಡೆದರು. ಇವೆಲ್ಲಾ ಅಡೆತಡೆಗಳನ್ನು ಮೀರಿ ದೃಢವಾಗಿ ಹೋರಾಡಿದ ಅವರು ಅಂತಿಮವಾಗಿ ಗೆಲುವಿನ ನಗೆ ಬೀರಿದರು.

ಈ ಗೆಲುವಿನೊಂದಿಗೆ ಸಿನ್ನರ್ ಎಲ್ಲಾ ಟೂರ್ನಿಗಳು ಸೇರಿ ಸತತ 28 ಪಂದ್ಯಗಳ ಗೆಲುವಿನ ದಾಖಲೆ ಬರೆದಿದ್ದಾರೆ ಹಾಗೂ ಎಟಿಪಿ ಮಾಸ್ಟರ್ಸ್‌ನಲ್ಲಿ ಅವರ ಗೆಲುವಿನ ಓಟ 33 ಪಂದ್ಯಗಳಿಗೆ ಏರಿಕೆಯಾಗಿದೆ.

ಕ್ರೀಡಾ ಬರಹಗಾರರ ಸಂಸ್ಥೆಗೆ ಅಧ್ಯಕ್ಷರಾಗಿ ಮನುಜಾ ಪುನರಾಯ್ಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕ್ರೀಡಾ ಬರಹಗಾರರ ಸಂಸ್ಥೆಗೆ (ಸ್ವಾಬ್) ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನಗರದಲ್ಲಿ ಶನಿವಾರ ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆನಂದ್ ಫಿಲ್ಲರ್, ಆರ್. ಕೌಶಿಕ್ ಸೇರಿದಂತೆ ಹಲವು ಕ್ರೀಡಾ ಪತ್ರಕರ್ತರ ಸಮ್ಮುಖದಲ್ಲಿ ನೂತನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರನ್ನು 2026- 28ರ ಅಧಿಕಾರಾವಧಿಗೆ ಆಯ್ಕೆ ಮಾಡಲಾಯಿತು.

ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳ ಪಟ್ಟಿ: ಮನುಜಾ ವೀರಪ್ಪ (ಅಧ್ಯಕ್ಷೆ), ಜಿ. ಉನ್ನಿಕೃಷ್ಣ (ಉಪಾಧ್ಯಕ್ಷ), ಗಿರೀಶ್ ದೊಡ್ಡಮನಿ (ಕಾರ್ಯದರ್ಶಿ), ಮಂಜುನಾಥ ಕೆ. (ಜಂಟಿ ಕಾರ್ಯದರ್ಶಿ), ಎನ್. ಸುದರ್ಶನ್ (ಖಜಾಂಚಿ); **ಕಾರ್ಯಕಾರಿ ಸಮಿತಿ ಸದಸ್ಯರ ವಿವರ:** ಅಶ್ವಿನ್ ಅಚಲ್, ಕೌಶಿಕ್ ರಂಗರಾಜನ್, ಆಶಿಶ್ ಪಂತ್, ಸ್ಪಂದನ್ ಕಣಿಯಾರ್, ಚಿತ್ರಾಂಗದ ದತ್ತ ಚೌಧರಿ, ಗುರುರಾಜ್ ಬಿ.ಎಸ್., ವಿಘ್ನೇಶ್ ಭಾರದ್ವಾಜ್.

ಕರ್ನಾಟಕ ಓಪನ್: ಕೀಗನ್‌ಗೆ ಸಿಂಗಲ್ಸ್ ಮುಕುಟ



ಪೂಣಚ್ಚ-ಮೈನೇನಿ ಜೋಡಿಗೆ ಡಬಲ್ಸ್ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಅಮೆರಿಕದ ಅಗ್ರ ಶ್ರೇಯಾಂಕದ ಆಟಗಾರ ಕೀಗನ್ ಸ್ಮಿತ್, ಆಸ್ಟ್ರೇಲಿಯಾದ ಫಿಲಿಪ್ ಸೆಕುಲಿಕ್ ಅವರನ್ನು 6-2, 7-5 ಸೆಟ್‌ಗಳಿಂದ ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಈ ಜಯದೊಂದಿಗೆ ಸ್ಮಿತ್ 50 ಎಟಿಪಿ ಪಾಯಿಂಟ್ಸ್ ಹಾಗೂ 9,500 ಡಾಲರ್ ನಗದು ಬಹುಮಾನ ಪಡೆದರು. ಮತ್ತೊಂದೆಡೆ, ಪುರುಷರ ಡಬಲ್ಸ್ ಫೈನಲ್‌ನಲ್ಲಿ ಭಾರತದ ನಿಕಿ ಕಲಿಯಂಡ ಪೂಣಚ್ಚ ಮತ್ತು ಸಾಕೇತ್ ಮೈನೇನಿ ಜೋಡಿಯು ಪೀಟರ್‌ಬಾರ್ ಮತ್ತು ಗ್ರಿಗೊರಿ ಲೊಮಾಕಿನ್ ವಿರುದ್ಧ 6-2, 6-3 ನೇರ ಸೆಟ್‌ಗಳಿಂದ ಭರ್ಜರಿ ಜಯ ಸಾಧಿಸಿ ಡಬಲ್ಸ್ ಕಿರೀಟವನ್ನು ತಮ್ಮದಾಗಿಸಿಕೊಂಡಿತು.

ಇಂದಿನಿಂದ ಬ್ಯಾಡ್ಮಿಂಟನ್ ಟೂರ್ನಿ

ವಿಜಯಪುರ: ನಗರದ ಡಾ.ಬಿ.ಆರ್. ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ಮೇ 17ರಿಂದ 7 ದಿನಗಳವರೆಗೆ ರಾಜ್ಯ ಮಟ್ಟದ (15 ಹಾಗೂ 17 ವರ್ಷ ವಯೋಮಿತಿ) ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜನೆಯಾಗಿದೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಸಚಿವ ಕುಮಾರ್ ಬಂಗಾರಪ್ಪ ಈ ಕುರಿತು ಮಾಹಿತಿ ನೀಡಿದರು. ''ಪಂದ್ಯಾವಳಿಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲರು ಪಂದ್ಯಾವಳಿಗೆ ಚಾಲನೆ ನೀಡುವರು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸುವರು. ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ,'' ಎಂದರು. ಇದುವರೆಗೂ ಒಟ್ಟು 756 ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಸಾಧನೆ ತೋರುವ ಕ್ರೀಡಾಪಟುಗಳು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಲಿದ್ದಾರೆ.

ಹಾರ್ಸ್ ಪವರ್

ಬೆಂಗಳೂರು ರೇಸ್ ■ ಅಶ್ವಬಂಧು

ಮಿಲಿಯನ್ ಗೆಲುವಿನ ಅವಕಾಶದಲ್ಲಿ ಐರನ್ ಮಿರೇಜ್

ಪ್ರಸನ್ನಕುಮಾರ್ ತರಬೇತಿಯಲ್ಲಿ ಪಳಗಿರುವ ಐರನ್ ಮಿರೇಜ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ 'ವಾರ್ ಹ್ಯಾಮರ್ ಮಿಲಿಯನ್' ಗೆಲ್ಲುವ ಅವಕಾಶ ಹೊಂದಿದೆ. ಆರು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ವಿಂಡ್‌ಕ್ಲೀವರ್ 1, ಬ್ಲೀರುಥ್ ಬ್ಲಸ್ಟರ್ 6, ಡಬಲ್ ಸ್ಟಾಕ್ 8
- 2ನೇ ರೇಸ್: ನಾಟಿ ಕ್ರೂರುಥ್ 3, ಟೈಗರ್ ಬೇ 9, ಹಿಡನ್ ಡ್ರೀಮ್ಸ್ 2
- 3ನೇ ರೇಸ್: ರೀಗಲ್ ರಿಯಾಲಿಟಿ 4, ರಾಯಲ್ ಡೆಕ್ಕನ್ 5
- 4ನೇ ರೇಸ್: ಐರನ್ ಮಿರೇಜ್ 1, ಡೀಪ್ ರೆಸ್ಪೆಕ್ಟ್ 3, ಮೂನ್‌ವೀಲ್ 5
- 5ನೇ ರೇಸ್: ಸ್ಪಾರ್ಕ್ಲ್ 8, ಲೆಗಸಿ ಫೀಲ್ಡ್ 1, ಪೋರ್ಟಿಯಸ್ 7
- 6ನೇ ರೇಸ್: ಎಲಿಸಿಯಮ್ 6, ಹೇಜಲ್ 8, ಫಿನ್ನಿ 7

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 2, 3, 4, 5, 6; 1ನೇ ಟ್ರಿಬಲ್: 1, 2, 3; 2ನೇ ಟ್ರಿಬಲ್: 4, 5, 6

ಅತ್ಯುತ್ತಮ ಬೆಟ್: ಎಲಿಸಿಯಮ್

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಪರೀಕ್ಷಾ ವಿಭಾಗ, ತುಮಕೂರು-572 103,
ದೂರವಾಣಿ : 0816-2254546
No:TU/2025-26/SE0023 Dated: 16.05.2025
ಟೆಂಡರ್ ಪ್ರಕಟಣೆ (www.kppp.karnataka.gov.in ಮುಖಾಂತರ)

ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಮತ್ತು ಇತರೆ ಕಾರ್ಯಗಳಿಗೆ ವಿವಿಧ ಮಾದರಿಯ ವಾಹನಗಳನ್ನು ಬಾಡಿಗೆಗೆ ಪಡೆಯುವ ಸಂಬಂಧ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

www.kppp.karnataka.gov.in ಮುಖಾಂತರ ಹರಾಜಿನ ದಿನಾಂಕಗಳ ವಿವರಗಳು

ಟೆಂಡರ್ ಶೀರ್ಷಿಕೆ	ಪ್ರಾರಂಭ ದಿನಾಂಕ	ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
Short term Tender for Providing vehicles for Examination / other administrative and academic purposese.	16.05.2026	25.05.2026	26.05.2026 04-00pm

ಟೆಂಡರ್ ಮೌಲ್ಯ ಮತ್ತು ಇ.ಎಂ.ಡಿ ವಿವರಗಳನ್ನು www.kppp.karnataka.gov.in ವೆಬ್‌ಸೈಟ್ www.kppp.karnataka.gov.in ವೀಕ್ಷಿಸಿ, ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಸಂಪರ್ಕಿಸುವುದು.

ಸಹಿ/- ಕುಲಸಚಿವರು,(ಪರೀಕ್ಷಾಂಗ)
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇ-ಪ್ರೋ/2026-27 ದಿನಾಂಕ:14.05.2026
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ವಿಜಯಪುರ ಮಹಾನಗರಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

Tender	No of Works	Amount in Lakhs		ಟೆಂಡರ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ	ಟೆಂಡರ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರಿನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ	ಟೆಂಡರಿನ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ
		Min	Max	ಸಂಜೆ 5:00 ರವರೆಗೆ	ಸಂಜೆ 4:00 ರವರೆಗೆ	ಸಂಜೆ 4:30 ರ	
Work Tender	15	3.10	882.00	01.06.2026	02.06.2026	03.06.2026	ಕೆ.ಪಿ.ಪಿ. ಪೋರ್ಟಲ್ ರಂತೆ
Service Tender	07	93.00	119.50				
Rate for Quotation Tender	01	-	-				

ಅರ್ಹ ಗುತ್ತಿಗೆದಾರರು (kppp.karnataka.gov.in) ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ವಿಜಯಪುರ ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ರವರ ಕಚೇರಿಯಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ ಬದಲಾವಣೆ/ ತಿದ್ದುಪಡಿಗಳಿದ್ದಲ್ಲಿ (kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/98/ಕೆಎಸ್‌ಎಂಸಿಎ/2026-27

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ಮುಖ್ಯ ಅಭಿಯಂತರರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ" ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105,
ದೂ: 08472-220817, E-mail ID : kwbceklb14@gmail.com
ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಎಸ್.ಜಿ.ಪಿ ಎನ್.ಜಿ.ಆರ್/2026-27/169 ದಿನಾಂಕ: 16-05-2026
-: ಟೆಂಡರ್ ಆಹ್ವಾನಿಸುವ ಸೂಚನೆ :-

1) ಕಾಮಗಾರಿ ವಿವರ: ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರಡಿ ಸಿರುಗುಪ್ಪ ನಗರದ ಅದೋನಿ ರಸ್ತೆಯಲ್ಲಿರುವ ಹಾಲಿ ಇರುವ ಜಲಶುದ್ಧೀಕರಣ ಘಟಕದಿಂದ ಹಾಲಿ ಇರುವ ಜ್ಯಾಕ್‌ವೆಲ್ ವರೆಗೆ 406 ಮಿ.ಮೀ ವ್ಯಾಸದ x 5.6 ಮಿ.ಮೀ ದಪ್ಪದ ಎಮ್.ಎಸ್ ಕಚ್ಚಾ ನೀರಿನ ಕೊಳವೆ ಮಾರ್ಗ ಒದಗಿಸುವುದು ಹಾಗೂ ಅಳವಡಿಸುವ ಕಾಮಗಾರಿ (ಲಂಪಸಮ್ - ವೇರಿಯೇಷನ್ ಇರುವುದಿಲ್ಲ) **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/ 2026-27/ ಡಬ್ಲ್ಯೂಎಸ್/ವರ್ಕ _ಇಂಡೆಂಟ್507)**, 2) ಕಾಮಗಾರಿ ಅಂದಾಜು ಮೊತ್ತ: **ರೂ. 259.57 ಲಕ್ಷಗಳು** (ಜಿ.ಎಸ್.ಟಿ ಹೊರತುಪಡಿಸಿ), 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 3,89,000/-, 5) ಕಾಮಗಾರಿಯ ಅವಧಿ: 06 (ಆರು) ತಿಂಗಳು, 6) ಇ- ಪ್ರಕ್ಯೂರ್‌ಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: **20-05-2026 ಸಮಯ : 13:00 ಗಂಟೆಯ ನಂತರ**, 7) ಪೂರ್ವ ಟೆಂಡರ್ ಸಭೆ ದಿನಾಂಕ: **04-06-2026 ಸಮಯ 11:30 ಗಂಟೆಯವರೆಗೆ**, 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **17-06-2026 ಸಮಯ 17:30 ಗಂಟೆಯವರೆಗೆ**, 9) ಟೆಂಡರ್ ತೆರೆಯುವ ದಿನಾಂಕ: **19-06-2026 ಸಮಯ 11:00 ಗಂಟೆಯ ನಂತರ**, 10) ಹೆಚ್ಚಿನ ವಿವರಗಳಿಗೆ : ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105 ದೂ: 08472-220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/- ಮುಖ್ಯ ಅಭಿಯಂತರರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/130/ಕೆ.ಎಸ್.ಎಂ.ಸಿ.&ಎ/2026-27

ಉತ್ತರ ಮಧ್ಯ ರೈಲ್ವೆ
ಟೆಂಡರ್ ನಂ.: ಸಿಐಎನ್-2026-27-03 ದಿನಾಂಕ: 14.05.2026
ಇ-ಟೆಂಡರ್ ನೋಟಿಸ್

Dy.CE/Const.-II/ಉತ್ತರ ಮಧ್ಯ ರೈಲ್ವೆ/ಪ್ರಯಾಗ್‌ರಾಜ್ ಇವರು ಕೆಳಕಂಡ ಕಾಮಗಾರಿಗಳಿಗೆ ಭಾರತದ ರಾಷ್ಟ್ರಪತಿಗಳ ಪರವಾಗಿ 08.06.2026ರ 15.00 ಗಂಟೆವರೆಗೆ ನಿಗದಿತ ನಮೂನೆಯಲ್ಲಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ವಿವರಗಳು ಕೆಳಕಂಡಂತಿವೆ:

ಕಾಮಗಾರಿಯ ಹೆಸರು: ಪ್ರಯಾಗ್‌ರಾಜ್‌ನಲ್ಲಿ ಉತ್ತರ ಮಧ್ಯ ರೈಲ್ವೆಯ CAO/C & CAO/C/RSP ಅನ್ವಯ NCR ಯೋಜನೆಗಳ ಮೇಲ್ವಿಚಾರಣೆಗೆ ಯೋಜನಾ ಕಚೇರಿಯ ನಿರ್ಮಾಣ.

ಕಾಮಗಾರಿ ಅಂದಾಜು ವೆಚ್ಚ (ರೂ.): 239280611.28 | **ಮುಂಗಡ ಹಣ (ರೂ.):** 4785600.00

ಪೂರ್ಣಗೊಳಿಸುವ ಅವಧಿ: 18 ತಿಂಗಳು, **ಟೆಂಡರ್ ಮುಕ್ತಾಯದ ದಿನಾಂಕ: 08.06.2026ರ 15.00 ಗಂಟೆ, ಟೆಂಡರ್ ತೆರೆಯುವ ದಿನಾಂಕ: 08.06.2026ರ 15.30 ಗಂಟೆ, ಟೆಂಡರಿಂಗ್ ವಿಧ:** ಮುಕ್ತ ಟೆಂಡರ್ (ಎರಡು ಪ್ಯಾಕೆಟ್ ಸಿಸ್ಟಮ್). **ಗಮನಿಸಿ: 1.** ಮೇಲ್ಕಂಡ ಇ-ಟೆಂಡರ್‌ಗಳ ಸಂಪೂರ್ಣ ಮಾಹಿತಿ ಟೆಂಡರ್ ತೆರೆಯುವ **08.06.2026ರ 15.00** ಗಂಟೆವರೆಗೆ ವೆಬ್‌ಸೈಟ್ **www.ireps.gov.in** ನಲ್ಲಿ ಲಭ್ಯವಿದೆ. **2.** ಇ-ಬಿಡ್‌ಗಳ ರೂಪದಲ್ಲಿರುವುದನ್ನು ಹೊರತುಪಡಿಸಿ, ಇತರ ಬಿಡ್‌ಗಳನ್ನು ಮೇಲ್ಕಂಡ ಟೆಂಡರ್‌ಗಳ ಪರವಾಗಿ ಸ್ವೀಕರಿಸಲಾಗುವುದಿಲ್ಲ. ಈ ಉದ್ದೇಶಕ್ಕಾಗಿ, ಮಾರಾಟಗಾರರು **IREPS** ವೆಬ್‌ಸೈಟ್‌ನಲ್ಲಿ ಐಟಿ ಕಾಯ್ದೆ 2000ರಡಿ ಸಿಸಿಎ ನೀಡಿದ ಡಿಜಿಟಲ್ ಸಹಿ ಪ್ರಮಾಣಪತ್ರಗಳೊಂದಿಗೆ ನೋಂದಾಯಿಸಿಕೊಳ್ಳಬೇಕಾಗುತ್ತದೆ. **3.** ಇ-ಟೆಂಡರಿಂಗ್‌ಗೆ ಸಂಬಂಧಿಸಿದಂತೆ ಬಿಡ್ ಭದ್ರತಾ ಠೇವಣಿ ಮತ್ತು ಟೆಂಡರ್ ದಾಖಲೆ ವೆಚ್ಚ (ಟಿಡಿಸಿ) ಪಾವತಿಯನ್ನು ನೆಟ್ ಬ್ಯಾಂಕಿಂಗ್ ಅಥವಾ ಪೇಮೆಂಟ್ ಗೇಟ್‌ವೇ ಮೂಲಕ ಮಾತ್ರ ಸ್ವೀಕರಿಸಬೇಕು. **4.** ಹಣಕಾಸು ದರ ಪುಟದಲ್ಲಿ ನಮೂದಿಸಿದ ಮತ್ತು ಸರಿಯಾಗಿ ಡಿಜಿಟಲ್ ಸಹಿ ಮಾಡಿದ ದರಗಳನ್ನು ಪರಿಗಣಿಸಲಾಗುತ್ತದೆ. ದರಗಳು ಮತ್ತು ಯಾವುದೇ ಇತರೆ ರೂಪ/ಲೆಟರ್ ಹೆಡ್‌ನಲ್ಲಿ ಮಾರಾಟಗಾರರು ಲಗತ್ತಿಸಿದ್ದರೆ ಅದನ್ನು ತಕ್ಷಣವೇ ನಿರ್ಲಕ್ಷಿಸಲಾಗುತ್ತದೆ ಮತ್ತು ಪರಿಗಣಿಸಲಾಗುವುದಿಲ್ಲ. **5.** ಜಂಟಿ ಉದ್ಯಮವನ್ನು (ಜೆವಿ) 10 ಕೋಟಿಗಿಂತ ಹೆಚ್ಚಿನ ವೆಚ್ಚದ ಟೆಂಡರ್‌ಗೆ ಪರಿಗಣಿಸಲಾಗುತ್ತದೆ. **6.** ಲಗತ್ತಿಸಲಾದ ದಾಖಲೆಗಳ ಮೇಲೆ ಟೆಂಡರ್‌ದಾರರು ಸಹಿ ಮಾಡಬೇಕು. **7.** ಟೆಂಡರ್‌ದಾರರು ಎಲ್ಲಾ ಐಟಂಗಳಿಗೆ ಪ್ರಮಾಣಿತ ಸ್ವರೂಪದಲ್ಲಿ ಟೆಂಡರ್ ದಾಖಲೆಯಲ್ಲಿ ನೀಡಲಾದ ಪ್ರಮಾಣಪತ್ರವನ್ನು ಸಲ್ಲಿಸಬೇಕು, ತಪ್ಪಿದಲ್ಲಿ ಅಂತಹ ಟೆಂಡರ್ ಅನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅದನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುತ್ತದೆ. **8.** ಟೆಂಡರ್‌ದಾರರು ಸಲ್ಲಿಸಿದ ರುಜುವಾತುಗಳನ್ನು ಬೆಂಬಲಿಸುವ ದಾಖಲೆಗಳು/ಪ್ರಮಾಣಪತ್ರಗಳ ಪ್ರತಿಯ ಪ್ರತಿಯೊಂದು ಪುಟವನ್ನು ಟೆಂಡರ್‌ದಾರರು ಅಥವಾ ಟೆಂಡರಿಂಗ್ ಸಂಸ್ಥೆಯ ಅಧಿಕೃತ ಪ್ರತಿನಿಧಿ ಸ್ವಯಂ ದೃಢೀಕರಿಸಬೇಕು/ಡಿಜಿಟಲ್ ಸಹಿ ಮಾಡಬೇಕು. ಸ್ವಯಂ ದೃಢೀಕರಣವು ಸಹಿ, ಮುದ್ರೆ ಮತ್ತು ದಿನಾಂಕವನ್ನು (ಪ್ರತಿ ಪುಟದಲ್ಲಿ) ಒಳಗೊಂಡಿರಬೇಕು. "ನಿಗದಿತ ಅರ್ಹತಾ ಮಾನದಂಡಗಳನ್ನು ನಿಗದಿಪಡಿಸುವ ಹಕ್ಕನ್ನು ಬೆಂಬಲಿಸುವ ದಾಖಲೆಗಳು" ಎಂದು ಟೆಂಡರ್‌ದಾರರು ಸ್ಪಷ್ಟವಾಗಿ ಘೋಷಿಸಿದ ದಾಖಲೆಗಳನ್ನು ಮಾತ್ರ ಅವನ/ಅವಳ ಟೆಂಡರ್ ಮೌಲ್ಯಮಾಪನಕ್ಕಾಗಿ ಪರಿಗಣಿಸಲಾಗುತ್ತದೆ. ಟೆಂಡರ್‌ದಾರರು ಯಾವುದೇ ತಪ್ಪು ಮಾಹಿತಿ ಸಲ್ಲಿಸಿದ್ದಲ್ಲಿ, ಒಪ್ಪಂದವನ್ನು ರದ್ದುಗೊಳಿಸಲಾಗುತ್ತದೆ. ಮುಂಗಡ ಹಣ (ಇಎಂಡಿ), ಕಾರ್ಯಕ್ಷಮತೆ ಖಾತರಿ (ಪಿಜಿ) ಮತ್ತು ಒಪ್ಪಂದದ ಭದ್ರತಾ ಠೇವಣಿಯನ್ನು (ಎಸ್‌ಡಿ) ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಎರಡು (2) ವರ್ಷಗಳ ಕಾಲ ಇಡೀ ಭಾರತೀಯ ರೈಲ್ವೆಯ ಯಾವುದೇ ವ್ಯವಹಾರದಿಂದ ಏಜೆನ್ಸಿಯನ್ನು ನಿಷೇಧಿಸಲಾಗುತ್ತದೆ. **9.** ಸರ್ಕಾರಿ ಪ್ರಾಧಿಕಾರಿಗಳು ಕಾಲಕಾಲಕ್ಕೆ ಹೊರಡಿಸುವ ಜಿಎಸ್‌ಟಿ ಕಾಯ್ದೆ ಮತ್ತು ನಿಯಮಗಳು ಅನ್ವಯವಾಗುತ್ತವೆ. **10.** ಯಾವುದೇ ತೊಂದರೆ ಇದ್ದಲ್ಲಿ **IREPS** ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸಹಾಯವಾಣಿಯನ್ನು ಸಂಪರ್ಕಿಸಬಹುದು. **11.** ಟೆಂಡರ್ ಅನ್ನು ಆನ್‌ಲೈನ್‌ನಲ್ಲಿ **08.06.2026ರ 15.00** ಗಂಟೆವರೆಗೆ ಸಲ್ಲಿಸಬಹುದು ಮತ್ತು ಅದೇ ದಿನ **15.30** ಗಂಟೆಗೆ ತೆರೆಯಲಾಗುತ್ತದೆ. 1100/26(D)

North central railways www.ncr.indianrailways.gov.in @CPRONCR

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ
ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:18/2025-26 ದಿನಾಂಕ: 02.03.2026,
ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:18(1)/ 2025-26 ದಿನಾಂಕ: 19.04.2026
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆಪಿಪಿ ಪೋರ್ಟ್‌ಲ್ ಏಕ & ದ್ವಿ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟ್‌ಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **(https://kppp.karnataka.gov.in)** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) kppportal ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ಕೊನೆಯ ದಿನಾಂಕ: 19.05.2026 ರ 16.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20.05.2026ರಂದು 4.35 ನಂತರ. (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:62/ಕೆಎಸ್‌ಎಂಸಿಎ/2026-27

ಬಿ-ರೈಡ್
ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ
ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ)
Website: www.kride.in Email ID: gmprocurement@kride.in
ಇ-ಟೆಂಡರ್ ಪ್ರಕಟಣೆ

1) Tender Notice No.: Bi-RIDE/AKPT/DEPOT/BW/2026
CPP Tender ID: 2026_KRIDE_277012_1
ಬಿಎಸ್‌ಟಿಪಿ ಯೋಜನೆಯ ಅಕ್ಕುಪೇಟೆ ಡಿಪೋದಲ್ಲಿ ಪರಿಧಿಯ ಸುತ್ತಲೂ ಗಡಿ ಗೋಡೆಯ ನಿರ್ಮಾಣ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.06.2026 ಮಧ್ಯಾಹ್ನ 03.00 ಗಂಟೆ.**

2) Tender Notice No.: Bi-RIDE/BSTP/C2/PACKAGE-1/2026
CPP Tender ID: 2026_KRIDE_277197_1
ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ)ಯ ಮತ್ತಿಕೆರೆಯಲ್ಲಿ ಡಬಲ್ ಡೆಕ್ಕರ್ ವಯಾಡಕ್ಟ್ (ರೈಲು ಕಂ ರಸ್ತೆ ಮೇಲ್ಸೇತುವೆ), ಡಬಲ್ ಡೆಕ್ಕರ್ ಸ್ಟೇಷನ್ ಸೇರಿದಂತೆ 7.795 ಕಿ.ಮೀ ಉದ್ದಕ್ಕೆ ಎಲಿವೇಟೆಡ್ ವಯಾಡಕ್ಟ್ (ರ್‍ಯಾಂಪ್‌ಗಳನ್ನು ಒಳಗೊಂಡಂತೆ) ಮತ್ತು ಆರ್‌ಓಆರ್ ನಿರ್ಮಾಣ, ಸಬ್‌ಸ್ಟ್ರಕ್ಚರ್‌ವರೆಗೂ ಭಾಗದ ಕೆಲಸ - ಯಶವಂತಪುರದಲ್ಲಿ ಕಾರಿಡಾರ್-1ಕ್ಕೆ. ಬೆನ್ನಿಗೇನಹಳ್ಳಿ, ಹೆಬ್ಬಾಳ, ಶೆಟ್ಟಿಹಳ್ಳಿಯಲ್ಲಿ ಪ್ರವೇಶ/ನಿರ್ಗಮನ ಸ್ಟ್ರಕ್ಚರ್, ರಸ್ತೆ ಮೇಲ್ಸೇತುವೆಗೆ ರ್‍ಯಾಂಪ್, ವೈ-ಲೂಪ್ ರ್‍ಯಾಂಪ್, ಬಿಎಸ್‌ಟಿಪಿ ವಯಾಡಕ್ಟ್ ರ್‍ಯಾಂಪ್, ಎಫ್‌ಓಬಿ ಮಲ್ಟಿ ಮಾಡೆಲ್ ಇಂಟಿಗ್ರೇಷನ್ ಕೆಲಸ ಹಾಗೂ ಕಾರಿಡಾರ್-2ರ ಬೆನ್ನಿಗೇನಹಳ್ಳಿಯಿಂದ ಶೆಟ್ಟಿಹಳ್ಳಿ ನಡುವೆ ಎಲಿವೇಟೆಡ್ ಸೆಕ್ಷನ್‌ನಲ್ಲಿ ಇತರೆ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳು.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.06.2026 ಮಧ್ಯಾಹ್ನ 03.00 ಗಂಟೆ.**

3) Tender Notice No.: Bi-RIDE/BSTP/C4/PACKAGE-2/2026
CPP Tender ID: 2026_KRIDE_277246_1
ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ)ಯ ಕಾರಿಡಾರ್-4ರ ಹಿಂದಿನ ಗುತ್ತಿಗೆದಾರರಿಂದ ನಿರ್ವಹಿಸಲ್ಪಟ್ಟ ಕೆಲಸಗಳಿಗೆ ಅನ್ವಯವಾಗುವಲ್ಲೆಲ್ಲಾ ವಿನ್ಯಾಸ ಮತ್ತು ಸ್ಥಿರತೆ ಪರಿಶೀಲನೆಯ ದೃಢೀಕರಣವನ್ನು ಒಳಗೊಂಡಂತೆ (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ) ಹೀಲಲಿಗೆಯಿಂದ ಬೆಳ್ಳಂದೂರುವರೆಗೆ ಅಟ್-ಗ್ರೇಡ್ ಸೆಕ್ಷನ್‌ನಲ್ಲಿ 12.632 ಕಿಮೀ ಉದ್ದಕ್ಕೆ ಎಂಬ್ಯಾಕ್‌ಮೆಂಟ್‌ಗಳು/ ಕಟಿಂಗ್‌ಗಳು/ ಬ್ಲಾಂಕೆಟ್‌ಗಳು, ಎಂಐಬಿಗಳು, ಆರ್‌ಓಬಿಗಳು, ಆರ್‌ಯುಬಿಗಳು, ಇಆರ್‌ಎಸ್/ ರೀಟೈನಿಂಗ್ ಗೋಡೆ, ಚರಂಡಿಗಳು, ಗಡಿ ಗೋಡೆ, ಬೇಲಿ ಹಾಕುವ ಕೆಲಸಗಳು ಮತ್ತು ಇತರ ಸಂಬಂಧಿತ ಮೂಲಸೌಕರ್ಯ ಕೆಲಸಗಳಲ್ಲಿ ರಚನೆಯ ವಿನ್ಯಾಸ ಮತ್ತು ನಿರ್ಮಾಣ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.06.2026 ಮಧ್ಯಾಹ್ನ 03.00 ಗಂಟೆ.**

4) Tender Notice No.: Bi-RIDE/BSTP/C4/PACKAGE-1/2026
CPP Tender ID: 2026_KRIDE_277241_1
ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ)ಯ ಕಾರಿಡಾರ್-4ರ ಹಿಂದಿನ ಗುತ್ತಿಗೆದಾರರಿಂದ ನಿರ್ವಹಿಸಲ್ಪಟ್ಟ ಕೆಲಸಗಳಿಗೆ ಅನ್ವಯವಾಗುವಲ್ಲೆಲ್ಲಾ ವಿನ್ಯಾಸ ಮತ್ತು ಸ್ಥಿರತೆ ಪರಿಶೀಲನೆಯ ದೃಢೀಕರಣವನ್ನು ಒಳಗೊಂಡಂತೆ (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ) ಬೆನ್ನಿಗೇನಹಳ್ಳಿಯಿಂದ ಜಕ್ಕೂರುವರೆಗೆ ಅಟ್-ಗ್ರೇಡ್ ಸೆಕ್ಷನ್‌ನಲ್ಲಿ 6.259 ಕಿಮೀ ಉದ್ದಕ್ಕೆ ಎಂಬ್ಯಾಕ್‌ಮೆಂಟ್‌ಗಳು/ ಕಟಿಂಗ್‌ಗಳು/ ಬ್ಲಾಂಕೆಟ್‌ಗಳು, ಎಂಐಬಿಗಳು, ಆರ್‌ಯುಬಿಗಳು, ಎಂಜೆಬಿಗಳು, ಇಆರ್‌ಎಸ್/ರೀಟೈನಿಂಗ್ ಗೋಡೆ, ಚರಂಡಿಗಳು, ಗಡಿ ಗೋಡೆ, ಬೇಲಿ ಹಾಕುವ ಕೆಲಸಗಳು ಮತ್ತು ಇತರ ಸಂಬಂಧಿತ ಮೂಲಸೌಕರ್ಯ ಕೆಲಸಗಳಲ್ಲಿ ರಚನೆಯ ವಿನ್ಯಾಸ ಮತ್ತು ನಿರ್ಮಾಣ ಹಾಗೂ 3.681 ಕಿಮೀ ಉದ್ದಕ್ಕೆ ಎಲಿವೇಟೆಡ್ ವಯಾಡಕ್ಟ್ ಮತ್ತು ಇತರೆ ಕೆಲಸಗಳು.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.06.2026 ಮಧ್ಯಾಹ್ನ 03.30 ಗಂಟೆ.**

5) Tender Notice No.: BiRIDE/BSTP/C4LC/PACKAGE2/2026
CPP Tender ID: 766910: 2026_KRIDE_277283_1
ಹೀಲಲಿಗೆಯಿಂದ ರಾಜಾನುಕುಂಟೆಗೆ ಕಾರಿಡಾರ್-4 ರ ಉದ್ದಕ್ಕೂ ಲೆವೆಲ್ ಕ್ರಾಸಿಂಗ್‌ಗಳ (ಎಲ್‌ಸಿ) ಬದಲಿಗೆ ಸರ್ವಿಸ್ ರಸ್ತೆ ಮತ್ತು ಒಳಚರಂಡಿಗಳ ನಿರ್ಮಾಣದೊಂದಿಗೆ 2 ಸಂಖ್ಯೆ ರಸ್ತೆ ಮೇಲ್ಸೇತುವೆ (ಆರ್‌ಓಬಿ) ನಿರ್ಮಾಣ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.06.2026 ಸಂಜೆ 4.00 ಗಂಟೆ.**

6) Tender Notice No.: BiRIDE/BSTP/C4LC/PACKAGE1/2026
CPP Tender ID: 2026_KRIDE_277277_1
ಹೀಲಲಿಗೆಯಿಂದ ರಾಜಾನುಕುಂಟೆಗೆ ಕಾರಿಡಾರ್-4 ರ ಉದ್ದಕ್ಕೂ ಲೆವೆಲ್ ಕ್ರಾಸಿಂಗ್‌ಗಳ (ಎಲ್‌ಸಿ) ಬದಲಿಗೆ ಸರ್ವಿಸ್ ರಸ್ತೆ ಮತ್ತು ಒಳಚರಂಡಿಗಳ ನಿರ್ಮಾಣದೊಂದಿಗೆ 2 ಸಂಖ್ಯೆ ರಸ್ತೆ ಮೇಲ್ಸೇತುವೆ (ಆರ್‌ಓಬಿ) ಮತ್ತು 1 ರಸ್ತೆ ಕೆಳ ಸೇತುವೆ (ಆರ್‌ಯುಬಿ) ನಿರ್ಮಾಣ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.06.2026 ಮಧ್ಯಾಹ್ನ 03.00 ಗಂಟೆ.**

ವಿವರಗಳಿಗೆ **https://etenders.gov.in/eprocure/app** ಗೆ ಭೇಟಿ ಕೊಡಿ.
ಸಹಿ/- ಪ್ರಧಾನ ವ್ಯವಸ್ಥಾಪಕರು/ಪ್ರೊಕ್ಯೂರ್‌ಮೆಂಟ್
DIPR/CP/YC/682/2026-27
KridePrm Kride Bsrp kride_bsrp KRIDE,BSRP

ಪೊಲೀಸ್ ಅಧೀಕ್ಷಕರವರ ಕಛೇರಿ, ಠೇವಣಿ ವಂಚನೆ ವಿಭಾಗ, ಸಿಐಡಿ, ಬೆಂಗಳೂರು.
ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ **ಮೆ॥ ಜಾರ್‌ಗೋಲ್ಡ್ ರಿಟೈಲ್ ಪ್ರೈ ಲಿ** ಕಂಪನಿಯು ಸಾರ್ವಜನಿಕ ಗ್ರಾಹಕರಿಂದ ಡಿಜಿಟಲ್ ಅಪ್ಲಿಕೇಷನ್ ಮೂಲಕ ಸಾರ್ವಜನಿಕರಿಗೆ ಅತ್ಯಮೂಲ್ಯ ಲೋಹಗಳಲ್ಲಿ ಹೂಡಿಕೆ ಮಾಡುವ ಕುರಿತಂತೆ ಹಣವನ್ನು ಸಂಗ್ರಹಿಸಿದ್ದು, ಈ ಬಗ್ಗೆ ಯಾವುದೇ ನಿಯಂತ್ರಣ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಅಥವಾ ನೋಂದಾಯಿಸಿಕೊಳ್ಳದೆ ಅನಿಯಂತ್ರಿತ ರೀತಿಯಲ್ಲಿ ವ್ಯವಹಾರಗಳನ್ನು ನಡೆಸುತ್ತಿರುತ್ತಾರೆ. ಸದರಿ ಕಂಪನಿಯು ಸಾರ್ವಜನಿಕರಿಂದ ಠೇವಣಿಯನ್ನು ಸಂಗ್ರಹಿಸಿ ಅವರಿಗೆ ಹಿಂದಿರುಗಿಸದೆ ವಂಚನೆ ಮಾಡುವ ಸಂಭವವಿದ್ದು, ಈ ಬಗ್ಗೆ ಬೆಂಗಳೂರು ನಗರ ಕೋರಮಂಗಲ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ.25/2026 ರಲ್ಲಿ ಪ್ರಕರಣ ದಾಖಲಾಗಿ ಪ್ರಸ್ತುತ ಸಿ.ಐ.ಡಿ ಯಲ್ಲಿ ತನಿಖೆಯಲ್ಲಿರುತ್ತದೆ.

ಆದ್ದರಿಂದ, ಜಾರ್‌ಗೋಲ್ಡ್ ಕಂಪನಿಯಲ್ಲಿ ಹೂಡಿಕೆ ಮಾಡಿ ವಂಚನೆಗೊಳಗಾಗಿರುವ ಗ್ರಾಹಕರುಗಳು ಹೂಡಿಕೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಈ ಕೆಳಕಂಡ ತನಿಖಾಧಿಕಾರಿಗಳಿಗೆ ಹಾಜರುಪಡಿಸುವಂತೆ ಕೋರಿದೆ.

ಆರೋಪಿತ ಕಂಪನಿ ಮೆ॥ ಜಾರ್‌ಗೋಲ್ಡ್ ರಿಟೈಲ್ ಪ್ರೈ ಲಿ ಮತ್ತು ಸಹ ಕಂಪನಿಗಳ ಹಾಗೂ ಆರೋಪಿಗಳಾದ **ಮಿಸ್ಬಾ ಆಶ್ರಫ್, ಸಂದೇಶ್ ನಹಾರ್ ಮತ್ತು ನಿಶ್ಚಯ್ ಬಾಬು ಅರಕಲಗೂಡು** ಇವರುಗಳ ಹೆಸರಿನಲ್ಲಿರುವ ಚರಾಸ್ತಿ ಮತ್ತು ಸ್ಥಿರಾಸ್ಥಿಗಳನ್ನು ಗುರುತಿಸಿ ಕೆಪಿಐಡಿಎಫ್‌ಇ ಆ್ಯಕ್ಟ್-2004 ರಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಮೇಲ್ಕಂಡ ಆರೋಪಿಗಳ ಹೆಸರಿನಲ್ಲಿರುವ ಚರ ಮತ್ತು ಸ್ಥಿರಾಸ್ಥಿಗಳ ಬಗ್ಗೆ ಮಾಹಿತಿ ತಿಳಿದಿದ್ದಲ್ಲಿ, ಈ ಕೆಳಕಂಡ ಅಧಿಕಾರಿಗಳಿಗೆ ಮಾಹಿತಿ ನೀಡಲು ಕೋರಿದೆ. ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಿಸಲಾಗುವುದು.

ಸಹಿ/-ಪೊಲೀಸ್ ಇನ್ಸ್‌ಪೆಕ್ಟರ್, ಡಿ.ಎಫ್.ಐ ವಿಭಾಗ, ಸಿಐಡಿ, ಬೆಂಗಳೂರು, ದೂ.ಸಂಖ್ಯೆ: 080-22094567.

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-2 /2026-27/ 575 ದಿ:- 13.05.2026
ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	RESERVE FOR SC Category			RESERVE FOR 2-A Category	
1	PWD/2026-27/BR/WORK_INDENT35901	30.00	2	PWD/2026-27/RD/WORK_INDENT36092	25.00
	General Works				
3	PWD/2026-27/RD/WORK_INDENT35939	200.00	12	PWD/2023-24/SE0036	12.65
4	PWD/2025-26/EL/WORK_INDENT33306/CALL-2	250.00	13	PWD/2026-27/SE1213	4.23
5	PWD/2026-27/RD/WORK_INDENT36100	100.00	14	PWD/2026-27/SE1275	2.50
6	PWD/2026-27/RD/WORK_INDENT36091	50.00	15	PWD/2026-27/SE1276	1.50
7	PWD/2026-27/RD/WORK_INDENT36089	25.00	16	PWD/2026-27/SE1278	1.00
8	PWD/2026-27/BD/WORK_INDENT35873	190.00	17	PWD/2026-27/SE1279	3.00
9	PWD/2026-27/SE1272	1.69	18	PWD/2026-27/SE1280	2.00
10	PWD/2026-27/SE1269	2.96	19	PWD/2026-27/SE	4.20
11	PWD/2026-27/SE1241	11.30	20	PWD/2026-27/SE	4.50

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.Pre-Bid Meeting ದಿನಾಂಕ: **20.05.2026 (11.00 ಗಂಟೆಗೆ)**. 3.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **22.05.2026 (16.00 ಗಂಟೆಗೆ)**. 4.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **25.05.2026 (16.30 ಗಂಟೆಗೆ)**. 5.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ ದಿನಾಂಕ: **KPP Portal** ನಲ್ಲಿ ಇರುವಂತೆ

ವಿಷೇಶ ಸೂಚನೆ:- ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ , ಮರುಟೆಂಡರ್ ಅಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಇದ್ದಲ್ಲಿ ಗುತ್ತಿಗೆದಾರರು **KPP Portal** ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/80

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ. ತುಮಕೂರು.
ಸಂ:04/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಟೆಂಡರ್/ಸಇಂ/LAB/2025-26/242 **ದಿನಾಂಕ: 12.05.2026**
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ತುಮಕೂರು ಇವರು 2026-27ನೇ ಸಾಲಿಗೆ ಏಕ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಏಜೆನ್ಸಿ/ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯ Rural Drinking Water & Sanitation Department" Tumkur District Laboratory ಗೆ Supply of Instruments for Microbiolgy water testing laboratory ಪರಿಕರಣಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕಾಮಗಾರಿ ಮೊತ್ತ ರೂ.21.13 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.50,000/- ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : 21-05-2026 ಸಂಜೆ 5:00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 22-05-2026 ಸಂಜೆ 05.30 ಘಂಟೆಯ ನಂತರ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು
DIPR/TMK/74/KSMCA/2026-27

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲೂಕಿನ ಗುಂಡಗತ್ತಿ ಗ್ರಾಮದ ಮೂಗಪ್ಪರ ನಾಗಪ್ಪ ಅವರ ಮನೆಗೆ ಹೊದಿಸಿದ ಚಾವಣಿಯ ಶೀಟ್‌ಗಳು ಹಾರಿಹೋಗಿವೆ.

ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಕಾರಿಂಜೇಶ್ವರ ದೇವಸ್ಥಾನಕ್ಕೆ ಶನಿವಾರ ಸಂಜೆ ಸಿಡಿಲು ಬಡಿದು ಮೇಲ್ಭಾಗದಲ್ಲಿ ಹಾನಿಯಾಗಿದೆ.



ದ.ಕ. ಜಿಲ್ಲೆ ಬಂಟ್ವಾಳ ತಾಲೂಕಿನ ಇಳಿಯೂರು ಮಹಾವಿಷ್ಣು ಮೂರ್ತಿ ದೇವಸ್ಥಾನದ ಗರ್ಭಗುಡಿಯ ಮೇಲಿನ ಪ್ರಾಕಾರದ ಶಿಲಾಕಲ್ಲುಗಳು ಸಿಡಿಲಾಘಾತಕ್ಕೆ ಛಿದ್ರಗೊಂಡಿವೆ.

ಸಿಡಿಲಿಗೆ ಇಬ್ಬರ ಸಾವು | ಬೆಳೆಗಳಿಗೆ ಹಾನಿ | ಮುರಿದು ಬಿದ್ದ ಮರ, ಲೈಟು ಕಂಬಗಳು

ರಾಜ್ಯದ ಹಲವೆಡೆ ಬಿರುಗಾಳಿ, ಮಳೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಒಳನಾಡು, ಕರಾವಳಿ, ಮಲೆನಾಡು ಭಾಗದಲ್ಲಿ ಶುಕ್ರವಾರ ರಾತ್ರಿ ಮತ್ತು ಶನಿವಾರ ಬಿರುಗಾಳಿ, ಸಿಡಿಲು ಸಹಿತ ಮಳೆ ಸುರಿದಿದ್ದು, ವಿವಿಧ ಬೆಳೆ, ಮನೆಗಳಿಗೆ ಹಾನಿ ಆಗಿದೆ. ಮರ ಮತ್ತು ವಿದ್ಯುತ್ ಕಂಬಗಳು ಬಿದ್ದು, ಅಪಾರ ನಷ್ಟ ಸಂಭವಿಸಿದೆ. ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಿಡಿಲಿಗೆ ಇಬ್ಬರು ಬಲಿಯಾಗಿದ್ದಾರೆ.

ಚಿತ್ರದುರ್ಗ ಜಿಲ್ಲೆ ನಾಯಕನಹಟ್ಟಿಯಲ್ಲಿ ಗಾಳಿ, ಮಳೆಯಿಂದ 22 ವಿದ್ಯುತ್ ಕಂಬಗಳು ಉರುಳಿವೆ. ಬಿರುಗಾಳಿಗೆ ವೀಳ್ಯದೆಲೆ, ಬಾಳೆ ಬೆಳೆಗಳು ಹಾನಿಗೀಡಾಗಿವೆ. ಸಿಡಿಲಿನ ರಭಸಕ್ಕೆ ಹಲವು ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ. ಒಂದು ಮನೆಯ ಚಾವಣಿ ಹಾರಿಹೋಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಶುಕ್ರವಾರ ಸಂಜೆ ಸುರಿದ ಮಳೆಗೆ ಮನೆ ಮತ್ತು ಅಡಕೆ, ಬಾಳೆ, ತೆಂಗು, ಭತ್ತದ ಬೆಳೆಗಳಿಗೆ ಹಾನಿಯಾಗಿ ಸುಮಾರು 4.05 ಲಕ್ಷ ರೂ. ನಷ್ಟ ಸಂಭವಿಸಿದೆ. ಶನಿವಾರ ಸಂಜೆಯೂ ಕೂಡ ಗುಡುಗು ಸಿಡಿಲು ಸಹಿತ ಒಂದಷ್ಟು ಮಳೆ ಸುರಿದಿದೆ.

ಬಿರುಗಾಳಿ ಮಳೆಗೆ ಹರಿಹರ ತಾಲೂಕಿನಲ್ಲಿ ಒಂದು ಪಕ್ಕಾ ಮನೆಗೆ ಹಾನಿಯಾಗಿ 50 ಸಾವಿರ ರೂ. ನಷ್ಟ ಆಗಿದೆ. ದಾವಣಗೆರೆ ತಾಲೂಕಲ್ಲಿ 63 ಅಡಕೆ, 12 ತೆಂಗಿನ ಮರ ನೆಲಕ್ಕುರುಳಿ 1.30 ಲಕ್ಷ ರೂ. ನಷ್ಟವಾಗಿದೆ. ಹರಿಹರದಲ್ಲಿ 20 ಎಕರೆ ಭತ್ತಕ್ಕೆ ಹಾನಿಯಾಗಿ 1.50 ಲಕ್ಷ ರೂ., ಜಗಳೂರಲ್ಲಿ 3 ಎಕರೆ ಬೆಳೆಗೆ ಹಾನಿಯಾಗಿ 75 ಸಾವಿರ ರೂ. ನಷ್ಟವಾಗಿದೆ.

ಚಿಕ್ಕಮಗಳೂರು ತಾಲೂಕಿನ ಕೆಳಗೂರು ಸಮೀಪ ಮಳೆ ಗಾಳಿಗೆ ರಸ್ತೆಗೆ ಅಡ್ಡಲಾಗಿ ಮರ ಬಿದ್ದಿದ್ದರಿಂದ ಟ್ರಾಫಿಕ್ ಜಾಮ್ ಉಂಟಾಗಿರುವುದು.

ಧರೆಗುರುಳಿದ ಬಾಳೆ

ಕೊಪ್ಪಳ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶನಿವಾರ ಸಂಜೆ ಬಿರುಗಾಳಿಸಹಿತ ಮಳೆಯಾಗಿದ್ದು ಜನಜೀವನ ಅಸ್ತವ್ಯಸ್ತಗೊಂಡಿತು. ಮೆಳ್ಳಿಕೇರಿ ಗ್ರಾಮದಲ್ಲಿ 50 ಎಕರೆ ಪ್ರದೇಶದ ಬೆಳೆ ನಾಶವಾಗಿದೆ. ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದಲ್ಲಿ ಶುಕ್ರವಾರ ರಾತ್ರಿ ವೇಳೆಯಲ್ಲಿ ಸುರಿದ ಬಿರುಗಾಳಿ ಮಳೆಗೆ ಬಾಳೆ ತೋಟದ ಫಸಲು ನೆಲಕಚ್ಚಿ ಲಕ್ಷಾಂತರ ರೂ. ಮೌಲ್ಯದ ಬೆಳೆ ನಷ್ಟವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ನಗರದಲ್ಲಿ ಶನಿವಾರ ಸಂಜೆ ಭಾರಿ ಗಾಳಿಯೊಂದಿಗೆ ಕೆಲಕಾಲ ಮಳೆ ಸುರಿಯಿತು.

ಗುಡುಗು, ಗಾಳಿ ಸಹಿತ ಮಳೆ

ಬಳ್ಳಾರಿ: ನಗರದ ಸೇರಿ ಜಿಲ್ಲೆಯ ಕೆಲವೆಡೆ ಶನಿವಾರ ಸಂಜೆ ಉತ್ತಮ ಮಳೆ ಸುರಿಯಿತು. ನಗರದಲ್ಲಿ ಮಳೆ ಸುರಿದ ಪರಿಣಾಮ ರಸ್ತೆ, ಚರಂಡಿ ಹಾಗೂ ತಗ್ಗು ಪ್ರದೇಶಗಳಲ್ಲಿ ನೀರು ಹರಿಯಿತು. ಬಿರುಬಿಸಿಲಿನಿಂದ ಕಂಗೆಟ್ಟಿದ್ದ ಜನ, ಮಳೆಯಿಂದ ಸ್ವಲ್ಪ ನಿಟ್ಟುಸಿರುಬಿಟ್ಟರು.

ಸಿಡಿಲಿಗೆ ಮಹಿಳೆ ಸೇರಿ ರೈತ ಬಲಿ

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಸತ್ಯಗಾಲ ಗ್ರಾಮದಲ್ಲಿ ಶನಿವಾರ ಸಿಡಿಲು ಬಡಿದು ವಿನೋದಾ ಎಂಬ ಮಹಿಳೆ ಹಾಗೂ ಎರಡು ಹಸುಗಳು ಮೃತಪಟ್ಟಿವೆ.

ವಿನೋದಾ ತಮ್ಮ ಜಮೀನಿನಲ್ಲಿ ಕಟ್ಟಿ ಹಾಕಿದ್ದ ಹಸುಗಳನ್ನು ಕರೆತರಲು ಹೋಗಿದ್ದಾಗ ಸಿಡಿಲು ಬಡಿಯಿತು. ಇದರಿಂದ ಅವರೂ ಸೇರಿ ಎರಡು ಹಸುಗಳು ಮೃತಪಟ್ಟಿವೆ. ಅವರಿಗೆ ಪತಿ, ಇಬ್ಬರು ಪುತ್ರಿಯರು ಇದ್ದಾರೆ.

ಬಳ್ಳಾರಿ ತಾಲೂಕಿನ ದಾಸರನಾಗೇನಹಳ್ಳಿ ಗ್ರಾಮದಲ್ಲಿ ಶನಿವಾರ ಸಿಡಿಲು ಬಡಿದು ಗಾದಿಲಿಂಗಪ್ಪ (32) ಮೃತಪಟ್ಟಿದ್ದಾರೆ. ತೋಟದಲ್ಲಿ ಹಣ್ಣು ಕೀಳುತ್ತಿದ್ದ ಅವರಿಗೆ ಸಿಡಿಲು ಬಡಿದು ತೀವ್ರ ಅಸ್ವಸ್ಥರಾದರು.

ಕುಟುಂಬಸ್ಥರು ಮೋಕಾ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋದರೂ ಅವರು ಬದುಕುಳಿಯಲಿಲ್ಲ, ಮೃತರಿಗೆ ಪತ್ನಿ, ಇಬ್ಬರು ಪುತ್ರರು ಒಬ್ಬ ಪುತ್ರಿ ಇದ್ದಾರೆ. ದ.ಕ ಜಿಲ್ಲೆ ಮೂಡುಬಿದಿರೆ ಬಳಿಯ ಮಾರೂರು ಗ್ರಾಮದಲ್ಲಿ ಇಬ್ಬರಿಗೆ ಸಿಡಿಲು ಬಡಿದು ಗಾಯಗೊಂಡಿದ್ದಾರೆ.

ಕರಾವಳಿಯಲ್ಲಿ ಉತ್ತಮ ಮಳೆ

ಕರಾವಳಿಯಲ್ಲಿ ಬಹುತೇಕ ಕಡೆ ಶನಿವಾರ ಸಂಜೆ ಮಳೆಯಾಗಿದೆ. ಸುಳ್ಯದ ಬಹುತೇಕ ಕಡೆ ಉತ್ತಮ ಮಳೆಯಾದರೆ, ಮೂಡುಬಿದಿರೆ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ ಭಾಗದಲ್ಲಿ ಗುಡುಗು, ಸಿಡಿಲಿನಿಂದ ಕೂಡಿದ ಗಾಳಿ, ಮಳೆಯಾಗಿದೆ. ಬಂಟ್ವಾಳದಲ್ಲಿ 2ರಿಂದ 3 ಗಂಟೆ ಮಳೆ ಸುರಿದಿದೆ. ಮಂಗಳೂರು ನಗರ, ಕೂಳೂರು, ಮೂಲ್ಕಿ, ಸುರತ್ಕಲ್ ಭಾಗದಲ್ಲೂ ಮಳೆ ಸುರಿದಿದೆ.

ಮಲೆನಾಡಿನ ಹಲವೆಡೆ ಜೋರು ಮಳೆ

ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು ಶಿವಮೊಗ್ಗಗಳಲ್ಲಿ ಜೋರು ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು, ಮೂಡಿಗೆರೆ, ಬಣಕಲ್, ಗೋಣಿಬೀಡು, ಚಾರ್ಮಾಡಿ ತಪ್ಪಲಿನಲ್ಲಿ ಗುಡುಗು-ಸಿಡಿಲು ಸಹಿತ ವ್ಯಾಪಕವಾಗಿ ಸುರಿದ ಮಳೆಗೆ ಅಲ್ಲಲ್ಲಿ ರಸ್ತೆಗೆ ಮರಗಳು ಬಿದ್ದ ಪರಿಣಾಮ ಟ್ರಾಫಿಕ್ ಜಾಮ್ ಉಂಟಾಯಿತು. ಬಾಳೆಹೊನ್ನೂರು, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ, ಕಳಸ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಶಿವಮೊಗ್ಗ, ಸಾಗರ ತೀರ್ಥಹಳ್ಳಿ ತಾಲೂಕಿನ ವಿವಿಧ ಕಡೆಗಳಲ್ಲಿ ಶನಿವಾರ ಮಧ್ಯಾಹ್ನ ಧಾರಾಕಾರ ಮಳೆ ಸುರಿದಿದೆ. ಗಾಳಿಯ ರಭಸಕ್ಕೆ ತೋಟದಲ್ಲಿ ಅಡಕೆ ಮರಗಳು ತುಂಡಾಗಿ ಉರುಳಿವೆ. ತೀರ್ಥಹಳ್ಳಿಯಲ್ಲಿ ಮರದ ಕೊಂಬೆ ಉರುಳಿ ಕಾರು ತೀವ್ರ ಜಖಂಗೊಂಡಿದ್ದು, ತಾಯಿ, ಮಗು ಸ್ವಲ್ಪದರಲ್ಲಿ ಜೀವಾಪಾಯದಿಂದ ಪಾರಾಗಿದ್ದಾರೆ.

ನಾಗೇಶ್ ಪಾಣತ್ತಲೆ

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯ ಬಳಿ ಗ್ರೀನ್ ಬಾರ್ಬೆಟ್ ಪಕ್ಷಿ ತನ್ನ ಮರಿಗೆ ಗುಟುಕು ನೀಡುವ ದೃಶ್ಯ ಕ್ಯಾಮೆರಾ ಕಣ್ಣಲ್ಲಿ ಸೆರೆ.

ಟಯರ್ ಸ್ಫೋಟ | 36 ಪ್ರಯಾಣಿಕರು ಪಾರು

ಬೆಂಕಿ ದುರಂತ: ಬಸ್ ಭಸ್ಮ

■ **ವಿಕ ಸುದ್ದಿಲೋಕ** ಹಾಸನ

ತಾಲೂಕಿನ ಶಾಂತಿಗ್ರಾಮದ ಬಳಿ ಟಯರ್ ಸ್ಫೋಟಗೊಂಡು ಖಾಸಗಿ ಬಸ್ ಸಂಪೂರ್ಣ ಸುಟ್ಟು ಕರಕಲಾಗಿದೆ. ಚಾಲಕನ ಸಮಯ ಪ್ರಜ್ಞೆಯಿಂದ 36 ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಂಗಳೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಖಾಸಗಿ ಬಸ್‌ನಲ್ಲಿ ಮಕ್ಕಳು ಸೇರಿ ಒಟ್ಟು 36 ಪ್ರಯಾಣಿಕರಿದ್ದರು. ಶಾಂತಿಗ್ರಾಮ ಬಳಿ ಬಸ್‌ನ ಟಯರ್ ಸ್ಫೋಟಗೊಂಡು, ಬೆಂಕಿ ಕಾಣಿಸಿಕೊಂಡಿತು. ಎಚ್ಚೆತ್ತ ಚಾಲಕ ತಕ್ಷಣವೇ ರಸ್ತೆ ಬದಿಗೆ ಬಸ್ ನಿಲ್ಲಿಸಿ, ಎಲ್ಲ ಪ್ರಯಾಣಿಕರು ಕೆಳಗೆ ಇಳಿಸಿದರು. ಕೆಲ ಕ್ಷಣದಲ್ಲೇ ಬೆಂಕಿ ಇಡೀ ಬಸ್‌ಗೆ ಆವರಿಸಿ ಸಂಪೂರ್ಣ ಸುಟ್ಟು ಕರಕಲಾಯಿತು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ಪ್ರಯಾಣಿಕರು ತರಾತುರಿಯಲ್ಲಿ ಕೆಳಗಿಳಿದರೂ ಹಲವರ ಮೊಬೈಲ್‌ಗಳು ಹಾಗೂ ಬೆಲೆಬಾಳುವ ಲಗೇಜ್‌ಗಳು ಬಸ್‌ನೊಳಗೆ ಸುಟ್ಟುಹೋಗಿವೆ. ಪ್ರಯಾಣಿಕರನ್ನು ಪರ್ಯಾಯ ಬಸ್ ಮೂಲಕ ಬೆಂಗಳೂರಿಗೆ ಕಳುಹಿಸಿಕೊಡಲಾಯಿತು.

ಬಸ್ ಅತಿವೇಗದಿಂದ ಚಲಿಸುತ್ತಿದ್ದುದೇ ಟೈಯರ್ ಸ್ಫೋಟಗೊಳ್ಳಲು ಕಾರಣ ಎನ್ನಲಾಗಿದ್ದು, ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧರಿಗೆ ಶೇವಿಂಗ್ ಮಾಡಿದ ಉಪವಿಭಾಗಧಿಕಾರಿ!

■ **ವಿಕ ಸುದ್ದಿಲೋಕ**
ಕೆ.ಆರ್.ಪೇಟೆ (ಮಂಡ್ಯ)

ವೃದ್ಧಾಶ್ರಮಕ್ಕೆ ಭೇಟಿ ನೀಡಿ ಸಹಪಂಕ್ತಿ ಭೋಜನ

ಪಾಂಡವಪುರ ಉಪ ವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್ ಅವರು ಕೆ.ಆರ್.ಪೇಟೆ ಹೊರವಲಯದಲ್ಲಿರುವ ಮಾತೃಭೂಮಿ ವೃದ್ಧಾಶ್ರಮಕ್ಕೆ ಕುಟುಂಬ ಸಹಿತ ಭೇಟಿ ನೀಡಿ ಎಲ್ಲರ ಜತೆಯಲ್ಲಿ ಸಹಪಂಕ್ತಿ ಭೋಜನ ಸವಿದರು. ಅನಾರೋಗ್ಯ ಪೀಡಿತ ವೃದ್ಧರಿಗೆ ಶೇವಿಂಗ್ ಹಾಗೂ ಸ್ನಾನ ಮಾಡಿಸಿದರು.

''ಇತ್ತೀಚಿನ ದಿನಗಳಲ್ಲಿ ವೃದ್ಧರನ್ನು ಅನಾಥರನ್ನಾಗಿ ಮಾಡುತ್ತಿರುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಬದುಕಿರುವವರೆಗೂ ಅವರಿಂದ ಸೇವೆ ಮಾಡಿಸಿಕೊಂಡು ವೃದ್ಧಾಪ್ಯದಲ್ಲಿ ಮೋಸ ಮಾಡುತ್ತಿರುವವರಿಗೆ ದೇವರೇ ಬುದ್ಧಿ ಕೊಡಬೇಕು. ತಮ್ಮ ಕುಟುಂಬದ ಹಿರಿಯರನ್ನು ಜೋಪಾನ ಮಾಡದ ಮಕ್ಕಳು ಅವರು ಉಳಿಸಿರುವ ಆಸ್ತಿಗೆ ಹಕ್ಕನ್ನು ಪ್ರತಿಪಾದಿಸುತ್ತಿದ್ದಾರೆ. ಇಂಥವರಿಗೆ ಶ್ರವಣಕುಮಾರನ ಚರಿತ್ರೆ ಹೇಳಿಕೊಡಬೇಕಾಗಿದೆ,'' ಎಂದು ಶ್ರೀನಿವಾಸ್ ಹೇಳಿದರು.

ಬಳಿಕ ತಮ್ಮ ಪತ್ನಿ ತಯಾರಿಸಿ ತಂದಿದ್ದ ಅಡುಗೆಯನ್ನು ಅವರ ಜತೆಯಲ್ಲಿ ಕುಳಿತು ಊಟ ಮಾಡಿದರು. ''ನಿಮ್ಮೊಂದಿಗೆ ನಾವಿದ್ದೇವೆ, ಧೈರ್ಯವಾಗಿರಿ,'' ಎಂದು ಆತ್ಮವಿಶ್ವಾಸ ತುಂಬಿದರು.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ಹೊರವಲಯದಲ್ಲಿರುವ ಮಾತೃಭೂಮಿ ವೃದ್ಧಾಶ್ರಮಕ್ಕೆ ಕುಟುಂಬ ಸಮೇತ ಭೇಟಿ ನೀಡಿದ್ದ ಪಾಂಡವಪುರ ಉಪ ವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್ ಅವರು ವೃದ್ಧರೊಬ್ಬರಿಗೆ ಶೇವಿಂಗ್ ಮಾಡಿದರು.

ಚಾಲಕನ ಅಡ್ಡಗಟ್ಟಿ ₹27 ಲಕ್ಷ ದರೋಡೆ

ಮದ್ದೂರು (ಮಂಡ್ಯ): ಪಟ್ಟಣದ ಮೈಸೂರು- ಬೆಂಗಳೂರು ಹೆದ್ದಾರಿಯಲ್ಲಿ ಶುಕ್ರವಾರ ತಡರಾತ್ರಿ ಕಾರು ಚಾಲಕನನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು, 27 ಲಕ್ಷ ರೂ. ದೋಚಿ ಪರಾರಿಯಾಗಿರುವ ಕುರಿತು ದೂರು ದಾಖಲಾಗಿದೆ.

ಮೈಸೂರಿನ ಹಿಟಾಚಿ ಸಂಸ್ಥೆಯ ಚಾಲಕ ಗೋವಿಂದರಾಜು ಕಾರಿನಲ್ಲಿ 27 ಲಕ್ಷ ರೂ. ಹಣವನ್ನು ಬೆಂಗಳೂರಿನ ಕೇಂದ್ರ ಕಚೇರಿಗೆ ತೆಗೆದುಕೊಂಡು ಹೋಗುತ್ತಿದ್ದಾಗ ಹಿಂಬಾಲಿಸಿಕೊಂಡು ಬಂದ ದುಷ್ಕರ್ಮಿಗಳ ಗುಂಪು ಮದ್ದೂರು ಪಟ್ಟಣದ ಬಳಿ ಮಾರಕಾಸ್ತ್ರಗಳನ್ನು ತೋರಿಸಿ ಬೆದರಿಸಿ, ನಗದು ಕಸಿದುಕೊಂಡು ಪರಾರಿಯಾಯಿತು. ಗೋವಿಂದರಾಜು ಅವರು ಮದ್ದೂರು ಠಾಣೆಗೆ ದೂರು ನೀಡಿದರು. ದರೋಡೆಕೋರರ ಪತ್ತೆಗಾಗಿ ಪೊಲೀಸರು ತಂಡ ರಚನೆ ಮಾಡಿದ್ದಾರೆ.

ಎಸೆಸ್ಸೆಲ್ಸಿ ಮರು ಮೌಲ್ಯಮಾಪನ: ಇಬ್ಬರು ರಾಜ್ಯಕ್ಕೆ ಪ್ರಥಮ

ಶಿವಮೊಗ್ಗ/ಬೆಳಗಾವಿ: ಎಸೆಸ್ಸೆಲ್ಸಿ ಪರೀಕ್ಷೆ-1ರ ಮರು ಮೌಲ್ಯಮಾಪನದಲ್ಲಿ ಇಬ್ಬರು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಪಟ್ಟಣದ ವಾಗ್ದೇವಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಕೆ.ಎಸ್.ಅನಘ ಸಮಾಜ ವಿಜ್ಞಾನದಲ್ಲಿ 99 ಅಂಕ ಪಡೆದಿದ್ದಳು, ಮರು ಮೌಲ್ಯಮಾಪನದಲ್ಲಿ 100 ಅಂಕ ಬಂದಿದೆ. ಬೆಳಗಾವಿ ಜಿಲ್ಲೆಯ ಮೂಡಲಗಿ ಪಟ್ಟಣದ ಚೈತನ್ಯ ಆಶ್ರಮ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿ ವಿವೇಕ್ ಸುಳ್ಳನ್ನವರಗೆ ಫಲಿತಾಂಶ ಪ್ರಕಟವಾದಾಗ 624 ಅಂಕ ಬಂದಿತ್ತು. ಮರು ಮೌಲ್ಯಮಾಪನದಲ್ಲಿ ಒಂದು ಅಂಕ ಹೆಚ್ಚಾಗಿದೆ.

ಕೆ.ಎಸ್.ಅನಘ

ವಿವೇಕ್ ಸುಳ್ಳನ್ನವರ

ಚಿಕ್ಕಮಗಳೂರಿನ ಹಕ್ಕಿಮಕ್ಕಿ ಸಮೀಪ ಸೆರೆ | ಶಿವಮೊಗ್ಗ ಮೃಗಾಲಯಕ್ಕೆ ಕಾಡೆಮ್ಮೆ ರವಾನೆ

ಕಾಟಿ ಕಾರ್ಯಾಚರಣೆ ಯಶಸ್ವಿ

ವಿಕ ಸುದ್ದಿಲೋಕ ಚಿಕ್ಕಮಗಳೂರು

ರಾಜ್ಯದಲ್ಲಿಯೇ ಮೊದಲ ಬಾರಿಗೆ ಕಾಟಿ (ಕಾಡೆಮ್ಮೆ) ಸೆರೆ ಕಾರ್ಯಾಚರಣೆ ಆರಂಭಿಸಿದ ಅರಣ್ಯ ಇಲಾಖೆ, ಶನಿವಾರ ಮೂಡಿಗೆರೆ ಅರಣ್ಯ ಉಪವಿಭಾಗದ ಆಲ್ದೂರು ವಲಯದ ಹಕ್ಕಿಮಕ್ಕಿ ಸಮೀಪ ಒಂದು ಕಾಟಿಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಎರಡು ದಿನಗಳಿಂದ ಕೊಪ್ಪ ಅರಣ್ಯ ವಿಭಾಗದಲ್ಲಿ ಕಾರ್ಯಾಚರಣೆ ಆರಂಭಿಸಿದ್ದ ಅರಣ್ಯ ಇಲಾಖೆ ಅಧಿಕಾರಿಗಳು, ಶನಿವಾರ ಆಲ್ದೂರು ವಿಭಾಗಕ್ಕೆ ಕಾರ್ಯಾಚರಣೆ ನಡೆಸಿದರು. ಅರೆನೂರು ಸಮೀಪದ ಹಕ್ಕಿಮಕ್ಕಿ ಸಮೀಪ ಆಗಾಗ ಜಮೀನುಗಳಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿದ್ದ, ಕಾಟಿಗೆ 4 ಗಂಟೆ ಸುಮಾರಿಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಯಿತು. ವೈದ್ಯರಾದ ಡಾ. ರಮೇಶ್ ತಂಡ ಹಾಗೂ 100ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಮಳೆಯ ನಡುವೆಯೇ ಕಾರ್ಯಾಚರಣೆ ನಡೆಸಿದರು.

ಅರೇನೂರು ಸಮೀಪ ಸೆರೆಹಿಡಿದ ಕಾಟಿಯನ್ನು ಸ್ಥಳಾಂತರಿಸಿದ ಅರಣ್ಯ ಸಿಬ್ಬಂದಿ.

ಕಾಟಿ ಮರಳಿ ಕಾಡಿಗೆ: ಕೊಪ್ಪ ಅರಣ್ಯ ವಿಭಾಗದಲ್ಲಿ ಶುಕ್ರವಾರ ನಡೆದ ಕಾರ್ಯಾಚರಣೆಯಲ್ಲಿ ಕಾಟಿಗೆ ಅರವಳಿಕೆ ನೀಡಲಾಯಿತು. ಆದರೆ, ಭಾರಿ ತೂಕದ ಕಾಟಿಯನ್ನು ಇಳಿಜಾರು ಪ್ರದೇಶದಿಂದ ರಸ್ತೆಗೆ ಸಾಗಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಅದಕ್ಕೆ ಪ್ರಜ್ಞೆ ಬರುವ ಚುಚ್ಚುಮದ್ದು ನೀಡಿ ಕಾಡಿಗೆ ಬಿಡಲಾಗಿತ್ತು. ಇದಕ್ಕೆ ಪರಿಸರಾಸಕ್ತರು ವಿರೋಧ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ ಶನಿವಾರ ಮತ್ತೊಂದು ಕಾಟಿಯನ್ನು ಸೆರೆಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಮಧ್ಯಪ್ರದೇಶದ ಬಾಂಧವಗಡ ಹುಲಿ ಸಂರಕ್ಷಿತ ಪ್ರದೇಶಕ್ಕೆ ಕಳೆದ ವರ್ಷ ಜಿಲ್ಲೆಯ ಅಧಿಕಾರಿಗಳ ತಂಡ ಭೇಟಿ ನೀಡಿ ಕಾಟಿ ಸೆರೆ ಕಾರ್ಯಾಚರಣೆಯ ಬಗ್ಗೆ ಅಧ್ಯಯನ ನಡೆಸಿತ್ತು. ಚಿಕ್ಕಮಗಳೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಯಶ್‌ಪಾಲ್ ಕ್ಷೀರಸಾಗರ ಅವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಭೇಟಿ ನೀಡಿ ಸರಕಾರಕ್ಕೆ ವರದಿ ಸಲ್ಲಿಸಿತ್ತು. ಇದಕ್ಕೆ ರಾಜ್ಯ ಸರಕಾರ ಅನುಮೋದನೆ ನೀಡಿ ಜಿಲ್ಲೆಯ ಮಲೆನಾಡು ಭಾಗದಲ್ಲಿ ಉಪಟಳ ನೀಡುತ್ತಿದ್ದ ಮೂರು ಕಾಟಿಗಳ ಸೆರೆಗೆ ಆದೇಶ ನೀಡಿತ್ತು.

> ಕಾಟಿ ಸೆರೆ ಕಾರ್ಯಾಚರಣೆ ಯಶಸ್ವಿಯಾಗಿದೆ. 100ಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿ ಭಾಗಿಯಾಗಿದ್ದರು. ಸೆರೆ ಹಿಡಿದ ಕಾಟಿಯನ್ನು ಶಿವಮೊಗ್ಗ ಮೃಗಾಲಯಕ್ಕೆ ಸ್ಥಳಾಂತರ ಮಾಡಲಾಗುವುದು.
>
> **- ಯಶ್‌ಪಾಲ್ ಕ್ಷೀರಸಾಗರ**
> ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು

20ರಿಂದ ಸಂಗೀತೋತ್ಸವ

ಕೊಣನೂರು (ಹಾಸನ): ರಾಮನಾಥಪುರ ಹೋಬಳಿಯ ಸಂಗೀತ ಗ್ರಾಮ ರುದ್ರಪಟ್ಟಣದಲ್ಲಿ 23ನೇ ವಾರ್ಷಿಕ ಸಂಗೀತೋತ್ಸವ ಮೇ 20ರಿಂದ 24ರವರೆಗೆ ನಡೆಯಲಿದೆ. ''ಹೆಸರಾಂತ ಕಲಾವಿದರಿಂದ ಪ್ರತಿದಿನ ಭರತ ನಾಟ್ಯ, ವಿವಿಧ ವಾದ್ಯಗಳು ಮತ್ತು ಗಾಯನ ಸಂಗೀತ ಕಾರ್ಯಕ್ರಮಗಳು ನಡೆಯಲಿದೆ,'' ಎಂದು ಸಂಗೀತೋತ್ಸವ ಟ್ರಸ್ಟ್ ಸಮಿತಿ ಅಧ್ಯಕ್ಷ, ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ''ಮೇ 23ರಂದು ಸಂಜೆ 'ಜಗದಾನಂದಕಾರಕ ಮತ್ತು ಎಂದರೋ ಮಹಾನುಬಾವುಲು' ಕೃತಿಗಳ ಗೋಷ್ಠಿ ಗಾಯನ, ಮೃದಂಗ ವಿದ್ವಾಂಸ ಎ.ವಿ.ಆನಂದ್ ಅವರಿಗೆ ನಾಚಾರಮ್ಮ ಪ್ರಶಸ್ತಿ ಹಾಗೂ ಲಯಕಲಾ ಸ್ವರ್ಣಮಣಿ ಬಿರುದು ಪ್ರದಾನ ನಡೆಯಲಿದೆ,'' ಎಂದರು.

ಮಂತ್ರಾಲಯ ಮಠದ ಸಂಸ್ಕೃತ ವಿದ್ಯಾಪೀಠ: ಅರ್ಜಿ ಆಹ್ವಾನ

ರಾಯಚೂರು: ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಆಶ್ರಯದಲ್ಲಿ ನಡೆಯುತ್ತಿರುವ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ಹಾಗೂ ರಾಯಚೂರಿನ ಜವಾಹರ ನಗರದ ರಾಘವೇಂದ್ರ ಮಠದ ವಿದ್ಯಾಪೀಠದಲ್ಲಿ 2026-27ನೇ ಸಾಲಿನ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

''ಶತಮಾನದಿಂದ ನಡೆಯುತ್ತಿರುವ ವಿದ್ಯಾಪೀಠದಲ್ಲಿ 8 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. ವೇದ, ಸಾಹಿತ್ಯ, ವ್ಯಾಕರಣ, ತರ್ಕ, ವೇದಾಂತ, ಪೌರೋಹಿತ್ಯ ಹಾಗೂ ಜ್ಯೋತಿಷ್ಯ ಶಾಸ್ತ್ರಗಳ ಅಧ್ಯಯನದ ಜತೆಗೆ ಲೌಕಿಕ ಶಿಕ್ಷಣದ ಜತೆಗೆ ಅನ್ನ, ವಸ್ತ್ರ, ಪುಸ್ತಕ ಹಾಗೂ ವಸತಿ ವ್ಯವಸ್ಥೆ ಸಂಪೂರ್ಣ ಉಚಿತವಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ, ಕಾವ್ಯ, ಸಾಹಿತ್ಯ, ಬಿಎ, ಎಂಎ ಪರೀಕ್ಷೆಗಳನ್ನೂ ವಿದ್ಯಾಪೀಠದಲ್ಲಿ ನಡೆಸಲಾಗುವುದು. ಇಲ್ಲಿನ ವಿದ್ಯಾರ್ಥಿಗಳಿಗೆ ಮಠದಿಂದಲೇ ಹಣಕಾಸಿನ ನೆರವು, ಹಾಗೂ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ. ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರ ಅನುಗ್ರಹದಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮಠದ ಕಾಣಿಕೆಯಿಂದ ಶೇ. 20ರಷ್ಟು ಖರ್ಚು ಮಾಡಲಾಗುತ್ತಿದೆ,'' ಎಂದು ವಿದ್ಯಾಪೀಠದ ಪ್ರಾಂಶುಪಾಲ ಡಾ.ಎನ್.ವಾದಿರಾಜಾಚಾರ್ಯ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

''ಜೂನ್ 15ರಿಂದ ವಿದ್ಯಾಪೀಠದ ತರಗತಿಗಳು ಆರಂಭವಾಗಲಿವೆ. ಆಸಕ್ತರು ಮಂತ್ರಾಲಯ ಮಠವನ್ನು ಸಂಪರ್ಕಿಸಬಹುದು,'' ಎಂದು ತಿಳಿಸಿದರು.

ಆ್ಯಂಬುಲೆನ್ಸ್‌ನಲ್ಲೇ ಶವವಿಟ್ಟು ಪ್ರತಿಭಟನೆ

ವೈದ್ಯಕೀಯ ನಿರ್ಲಕ್ಷ್ಯದಿಂದ ಬಾಲಕ ಸಾವು, ಆರೋಪ

ಕುಂದಗೋಳ (ಧಾರವಾಡ): ವಿದ್ಯುತ್ ಸ್ಪರ್ಶದಿಂದ ಬಾಲಕನೊಬ್ಬ ಸಾವನ್ನಪ್ಪಿದ ಘಟನೆ ತಾಲೂಕಿನ ಗುಡಗೇರಿಯಲ್ಲಿ ಶನಿವಾರ ನಡೆದಿದ್ದು ಬಾಲಕನಿಗೆ ಸಕಾಲಿಕವಾಗಿ ಪ್ರಾಥಮಿಕ ಚಿಕಿತ್ಸೆ ದೊರೆತಿಲ್ಲ ಮತ್ತು ಆಸ್ಪತ್ರೆಗೆ ಸಾಗಿಸುವಾಗ ಆಂಬ್ಯುಲೆನ್ಸ್‌ನಲ್ಲಿ ಜೀವರಕ್ಷಕ ಸೌಲಭ್ಯ ಇರಲಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಮತ್ತು ಆತನ ಸಂಬಂಧಿಕರು ಶವವಿಟ್ಟು ಪ್ರತಿಭಟನೆ ನಡೆಸಿದರು.

ಕಾರ್ತಿಕ್ ಮಹಾಂತೇಶ ಪೂಜಾರ್ (7) ಮೃತ ಬಾಲಕ. ಈತ ಗ್ರಾಮದ ಮೈಲಾರಲಿಂಗೇಶ್ವರ ದೇವಸ್ಥಾನ ಬಳಿ ಆಡಲು ಹೋದಾಗ ವಿದ್ಯುತ್ ಸ್ಪರ್ಶವಾಗಿತ್ತು. ಬಾಲಕನನ್ನು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಕರೆತಂದಾಗ ಸೂಕ್ತ ಚಿಕಿತ್ಸೆ ಸಿಗದೇ ಹಾಗೂ ಆ್ಯಂಬುಲೆನ್ಸ್‌ನಲ್ಲಿ ಅಗತ್ಯ ಜೀವರಕ್ಷಕ ಸೌಲಭ್ಯಗಳು ಇರದ ಕಾರಣ ಬಾಲಕ ಮೃತಪಟ್ಟಿದ್ದಾನೆ ಎಂದು ಆಕ್ರೋಶಗೊಂಡ ಗ್ರಾಮಸ್ಥರು ಹಾಗೂ ಮೃತನ ಸಂಬಂಧಿಕರು ಆ್ಯಂಬುಲೆನ್ಸ್‌ನಲ್ಲಿಯೇ ಶವವಿಟ್ಟು ಪ್ರತಿಭಟಿಸಿದರು.

ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ವೈದ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕೆಂದು ಪಟ್ಟು ಹಿಡಿದರು. ಮೃತರ ಬಾಲಕನ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ರಸ್ತೆ ತಡೆ ನಡೆಸಿದರು.

ಸ್ಥಳಕ್ಕೆ ಆಗಮಿಸಿದ ಉಪವಿಭಾಗಾಧಿಕಾರಿ ಶಾಲಂ ಹುಸೇನ್, ''ಮುಖ್ಯಮಂತ್ರಿಗಳ ವಿಶೇಷ ಪರಿಹಾರ ನಿಧಿಯಲ್ಲಿ ಪರಿಹಾರ ಕಲ್ಪಿಸಲಾಗುವುದು. ಘಟನೆಗೆ ಸಂಬಂಧಪಟ್ಟ ವೈದ್ಯರು ಹಾಗೂ ಸಿಬ್ಬಂದಿ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಮೇ 18ರಂದು ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಸಭೆ ನಡೆಸಿ ಸೂಕ್ತ ಪರಿಹಾರ ನೀಡಲಾಗುವುದು,'' ಎಂದು ಭರವಸೆ ನೀಡಿದ ಬಳಿಕೆ ಪ್ರತಿಭಟನೆ ಹಿಂಪಡೆದರು.

ವಿದ್ಯುತ್ ತಗುಲಿ ಇಬ್ಬರ ಸಾವು

ಶಿರಾಳಕೊಪ್ಪ (ಶಿವಮೊಗ್ಗ): ಪಟ್ಟಣ ಮತ್ತು ಉಡುಗಣಿಯಲ್ಲಿ ಶನಿವಾರ ಸಂಭವಿಸಿದ ಪ್ರತ್ಯೇಕ ವಿದ್ಯುತ್ ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಸೌವನೂರು ತಾಲೂಕು ಮಾದಪುರದ ವಾಸಿ ಮೌಲಾಲಿ ಉಡುಗಣಿ ಮೊರಾರ್ಜಿ ಶಾಲೆಯಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡುವಾಗ ವಿದ್ಯುತ್ ತಗುಲಿ ಸ್ಥಳದಲ್ಲೇ ಸಾವಿಗೀಡಾದರು.

ಮತ್ತೊಂದು ಪ್ರಕರಣದಲ್ಲಿ ಪಟ್ಟಣದ ಸುಪ್ರಭಾತ ಹೋಟೆಲ್ ಹಿಂಭಾಗ ಶನಿವಾರ ರಾತ್ರಿ ಮುಖ್ಯ ವಿದ್ಯುತ್ ತಂತಿ ಸರಿಪಡಿಸುವಾಗ ವಿದ್ಯುತ್ ತಗುಲಿ ಮೆಸ್ಕಾಂ ಪವರ್‌ಮೆನ್ ಶಿವಕುಮಾರ್ ಚಕ್ರಸಾಲಿ (34) ಸ್ಥಳದಲ್ಲೆ ಮೃತಪಟ್ಟಿದ್ದಾರೆ.

ಕಾರ್ಮಿಕ ಕಚೇರಿ ಮೇಲೆ ಲೋಕಾ ದಾಳಿ

ವಿಕ ಸುದ್ದಿಲೋಕ ವಿಜಯಪುರ

ನಗರದ ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ಶುಕ್ರವಾರ ಮತ್ತು ಶನಿವಾರ ದಾಳಿ ನಡೆಸಿದ ವೇಳೆ ವಿತರಣೆಯಾದ ಸ್ಮಾರ್ಟ್‌ಕಾರ್ಡ್‌ಗಳು , ಬಾಕಿ ಉಳಿದ ಅರ್ಜಿಗಳ ವಿಲೇವಾರಿ ಮತ್ತು 1.10 ಕೋಟಿ ರೂ. ಕಾರ್ಮಿಕರಿಗೆ ವಿತರಿಸದೆ ಬಾಕಿ ಉಳಿಸಿಕೊಂಡಿರುವುದು ಪತ್ತೆಯಾಗಿದೆ.

ಅವ್ಯವಹಾರ ನಡೆದ ಬಗ್ಗೆ ವ್ಯಾಪಕ ದೂರುಗಳು ಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಸ್ವಯಂ ದೂರು ದಾಖಲಿಸಿಕೊಂಡು ಕಚೇರಿ ಶೋಧನೆಗೆ ವಾರಂಟ್ ಹೊರಡಿಸಿದ್ದರು. ಅದರನ್ವಯ ಲೋಕಾಯುಕ್ತ ಎಸ್ಪಿ ಟಿ.ಮಲ್ಲೇಶ ಮಾರ್ಗದರ್ಶನದಲ್ಲಿ ಮೇ 15 ಮತ್ತು 16ರಂದು ಶೋಧ ನಡೆಸಲಾಯಿತು.

''44 ಸಾವಿರ ಸ್ಮಾರ್ಟ್ ಕಾರ್ಡ್‌ಗಳನ್ನು ಕಾರ್ಮಿಕರಿಗೆ ವಿತರಿಸದಿರುವುದು, 1,233 ಅರ್ಜಿ ವಿಲೇವಾರಿ ಮಾಡದಿರುವುದು, ಬಾಲಕಾರ್ಮಿಕರ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳದಿರುವುದು, ಕಾರ್ಮಿಕರಿಗೆ ನೀಡಬೇಕಿದ್ದ 1.10 ಕೋಟಿ ರೂ. ಅನ್ನು ಹಲವು ವರ್ಷಗಳಿಂದ ಉಳಿಸಿಕೊಂಡಿದ್ದು ಪತ್ತೆಯಾಗಿದೆ,'' ಎಂದು ಲೋಕಾಯುಕ್ತ ಎಸ್ಪಿ ಟಿ.ಮಲ್ಲೇಶ ತಿಳಿಸಿದ್ದಾರೆ.

ವಿತರಣೆಯಾಗದ 1.10 ಕೋಟಿ ರೂ., ಸ್ಮಾರ್ಟ್ ಕಾರ್ಡ್ ಪತ್ತೆ

ವಿಜಯಪುರದ ಜಿಲ್ಲಾ ಕಾರ್ಮಿಕ ಅಧಿಕಾರಿ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ದಾಖಲೆ ಪರಿಶೀಲಿಸಿದರು.

ರಸ್ತೆ ಅಪಘಾತ: ಮೂವರ ಮರಣ

ನರಗುಂದ (ಗದಗ): ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಹೂಲಿಕಟ್ಟಿ-ಹಳಕಟ್ಟಿ ಗ್ರಾಮದ ಸೇತುವೆ ಬಳಿ ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ಬೈಕ್‌ಗೆ ವಾಹನ ಡಿಕ್ಕಿ ಹೊಡೆದು ಮೂವರು ಸಾವಿಗೀಡಾದರು.

ಹರಕೆ ತೀರಿಸಲು ತೆರಳಿದ್ದಾಗ ಅವಘಡ

ನರಗುಂದದ ದಂಡಾಪುರ ಕುರುಬಗೇರಿ ಓಣಿಯ ನಿಂಗಪ್ಪ ನೀಲಪ್ಪ ಮಾಟರಂಗಿ (25), ಪ್ರಶಾಂತ ಹನುಮಂತಪ್ಪ ಬಾರಕೇರ (24) ಸ್ಥಳದಲ್ಲೇ ಮೃತಪಟ್ಟರೆ, ಲೋಕೇಶ ಶಂಕ್ರಪ್ಪ ಅರಭೂತನವರ (24) ಆಸ್ಪತ್ರೆಯಲ್ಲಿ ಸಾವಿಗೀಡಾದವರು. ಈ ಮೂವರು ದೇವರ ಕಾರ್ಯ ಮುಗಿಸಿ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಮರಳುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ.

ಸವದತ್ತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನರಗುಂದದ ಮಹಾಂತೇಶ ಸವದತ್ತಿ ಎಂಬುವರು ಸವದತ್ತಿ ತಾಲೂಕಿನ ಶ್ರೀಯಕ್ಕೇರಿ ಕರಿಯಮ್ಮ ದೇವಿಗೆ ಹರಕೆ ತೀರಿಸಲು ತೆರಳಿದ್ದರು. ಬಡಾವಣೆಯ ಹಿರಿಯರು ದೊಡ್ಡ ವಾಹನದಲ್ಲಿ ತೆರಳಿದರೆ ಕೆಲವರು ಬೈಕ್‌ನಲ್ಲಿ ತೆರಳಿದ್ದರು.

ಕೃಷಿ ವಿಜ್ಞಾನ ಕೋರ್ಸ್‌ಗಳ ಪರೀಕ್ಷೆಯಲ್ಲಿ ಅಕ್ರಮ, ಆರೋಪ

ವಿಕ ಸುದ್ದಿಲೋಕ ಹಿರಿಯೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಕೃಷಿ ವಿಜ್ಞಾನ ಕೋರ್ಸ್‌ಗಳ ಪ್ರಾಯೋಗಿಕ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಆರೋಪ ಕೇಳಿ ಬಂದಿದೆ.

ಕೆಳದಿ ಶಿವಪ್ಪ ನಾಯಕ ವಿವಿ ತಂಡದಿಂದ ತನಿಖೆ

ಹಿರಿಯೂರಲ್ಲಿ ಪರೀಕೆ ಬರೆದ ಎಲ್ಲರಿಗೂ 200/200!

ಶಿವಮೊಗ್ಗ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ಮಹಾವಿದ್ಯಾಲಯದ ತನಿಖಾ ತಂಡ ಹಿರಿಯೂರಿನ ಬಬ್ಬೂರು ಫಾರಂ ತೋಟಗಾರಿಕೆ ವಿದ್ಯಾಲಯಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿದೆ.

ಮೇ 10ರಂದು ಕೃಷಿ ವಿಜ್ಞಾನ ಕೋರ್ಸ್‌ಗಳ ಆಯ್ಕೆಗಾಗಿ ರಾಜ್ಯಾದ್ಯಂತ 17 ಪರೀಕ್ಷಾ ಕೇಂದ್ರಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆದಿತ್ತು. ಫಲಿತಾಂಶ ಹೊರಬಿದ್ದಿದ್ದು, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪರೀಕ್ಷಾ ಕೇಂದ್ರವೊಂದರಲ್ಲೇ ಬರೋಬ್ಬರಿ 74 ವಿದ್ಯಾರ್ಥಿಗಳು 200ಕ್ಕೆ 200 ಪೂರ್ಣ ಅಂಕ ಪಡೆದುಕೊಂಡಿದ್ದಾರೆ. ಆದರೆ, ರಾಜ್ಯದ ಇನ್ನುಳಿದ 16 ಪರೀಕ್ಷಾ ಕೇಂದ್ರಗಳ 24 ಮಂದಿ ವಿದ್ಯಾರ್ಥಿಗಳು ಮಾತ್ರ ಪೂರ್ಣ ಅಂಕಗಳಿಸಲು ಸಾಧ್ಯವಾಗಿದೆ. ಒಂದೇ ಕೇಂದ್ರದಲ್ಲಿ ಇಷ್ಟೊಂದು ವಿದ್ಯಾರ್ಥಿಗಳು ಶೇ. ನೂರರಷ್ಟು ಅಂಕ ಬಂದಿರುವುದು ಅನುಮಾನಕ್ಕೆ ಕಾರಣವಾಗಿದೆ. ಪರೀಕ್ಷೆ ರದ್ದುಪಡಿಸಿ ಮರುಪರೀಕ್ಷೆ ನಡೆಸಬೇಕು, ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ವಿದ್ಯಾರ್ಥಿಗಳು ಪೋಷಕರು ಒತ್ತಾಯಿಸಿದ್ದಾರೆ.

ರೈತರು ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ಕೃಷಿ ವಿಜ್ಞಾನ ಕೋರ್ಸ್‌ಗಳಲ್ಲಿ ಶೇ.50ರಷ್ಟು ಸೀಟು ಮೀಸಲಿಡಲಾಗಿದೆ. ಇವುಗಳ ಹಂಚಿಕೆಗಾಗಿಯೇ ಈ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ತೋಟಗಾರಿಕೆ, ಕೃಷಿ, ಹೈನುಗಾರಿಕೆಗೆ ಸಂಬಂಧಿಸಿದ ವಿವಿಧ ಬಿತ್ತನೆ ಬೀಜಗಳು, ಗಿಡಗಳು ಹಾಗೂ ಕೃಷಿ ಯಂತ್ರೋಪಕರಣಗಳಿರುತ್ತವೆ, ಅಭ್ಯರ್ಥಿಗಳು ಅವುಗಳನ್ನು ಭೌತಿಕವಾಗಿ ಗುರುತಿಸಿ ಉತ್ತರ ಬರೆಯಬೇಕು. ಪ್ರತಿಯೊಂದು ಕೇಂದ್ರಕ್ಕೂ ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ.

> ನಮ್ಮ ಪರೀಕ್ಷಾ ಕೇಂದ್ರದ ಮೂರು ಹಾಲ್‌ನಲ್ಲಿ 5 ಹಂತದಲ್ಲಿ ಪರೀಕ್ಷೆ ನಡೆಸಿದ್ದು, ಪ್ರತಿ ಹಂತ ಸಿಸಿಟಿವಿ ರೇಕಾರ್ಡ್ ಮಾಡಲಾಗಿದೆ. ಸೂಕ್ತ ಭದ್ರತೆಯಲ್ಲಿ ಪರೀಕ್ಷೆ ನಡೆದಿದೆ. ಪರಿಶೀಲನೆ ತಂಡಕ್ಕೂ ಎಲ್ಲ ಮಾಹಿತಿ ನೀಡಿದ್ದೇವೆ.
>
> **-ಡಾ.ಸುರೇಶ್ ಡಿ. ಏಕಬೋಟೆ**
> ಡೀನ್ ತೋಟಗಾರಿಕೆ ಮಹಾವಿದ್ಯಾಲಯ

> ನಾನು ಈ ಪರೀಕ್ಷೆಯಲ್ಲಿ 200ಕ್ಕೆ 200 ಅಂಕಗಳಿಸಿದ್ದೇನೆ. ಪರೀಕ್ಷೆ ತುಂಬಾ ಕಟ್ಟುನಿಟ್ಟಿನಿಂದ ನಡೆಯಿತು. ಕೃಷಿಯಲ್ಲಿ ವ್ಯಾಸಂಗ ಮಾಡಬೇಕೆಂದು ಸಾಕಷ್ಟು ಓದಿ ಉತ್ತಮ ಅಂಕಗಳಿಸಿದ್ದೇನೆ. ಯಾವುದೇ ನಕಲು, ಸೋರಿಕೆ ಆಗಿಲ್ಲ.
>
> **-ಜಿ.ಎಸ್. ಪುನೀತ್** ಪರೀಕ್ಷೆ ಬರೆದ ಅಭ್ಯರ್ಥಿ

ಬಳ್ಳಾರಿಯಲ್ಲಿ ಯುವಕ ಕೆರೆ ಪಾಲು

ಬಳ್ಳಾರಿ: ನಗರದ ಯುವಕ ಮಹಮ್ಮದ್ (22) ಅಲ್ಲೀಪುರ ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮಹಮ್ಮದ್ ಆರೇಳು ಸ್ನೇಹಿತರೊಂದಿಗೆ ಅಲ್ಲೀಪುರ ಕೆರೆಗೆ ಈಜಾಡಲು ತೆರಳಿದ್ದರು. ಈ ವೇಳೆ ಅವರು ಮುಳುಗಿ ಕೊನೆಯುಸಿರೆಳೆದಿದ್ದಾರೆ. ಸಂಜೆಯವರೆಗೆ ಪ್ರಯತ್ನಿಸಿದರೂ ದೇಹ ಪತ್ತೆಯಾಗಿರಲಿಲ್ಲ. ಶನಿವಾರ ಮಧ್ಯಾಹ್ನ ಯುವಕನ ಶವವನ್ನು ಕೆರೆಯಿಂದ ಹೊರತೆಗೆಯಲಾಯಿತು. ಬಳ್ಳಾರಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಯಾಂಟರ್ ಪಲ್ಟಿ, 5 ವರ್ಷದ ಬಾಲಕ ಸಾವು

ತೀರ್ಥಹಳ್ಳಿ (ಶಿವಮೊಗ್ಗ): ತಾಲೂಕಿನ ಕೋಣಂದೂರು ಸಮೀಪದ ಹುಲ್ಲತ್ತಿ ರಸ್ತೆಯಲ್ಲಿ ಶನಿವಾರ ಚಾಲಕನ ನಿಯಂತ್ರಣ ತಪ್ಪಿ ಕ್ಯಾಂಟರ್ ಪಲ್ಟಿಯಾಗಿ ಹರಿಹರದ ಸಯ್ಯದ್ ಮಹಮದ್ ಶಾಕೀಬ್(5) ಸ್ಥಳದಲ್ಲೇ ಮೃತಪಟ್ಟಿದ್ದಾನೆ. 25ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

25 ಜನರಿಗೆ ಗಾಯ, ಐವರ ಸ್ಥಿತಿ ಗಂಭೀರ

ದಾವಣಗೆರೆ ಜಿಲ್ಲೆ ಹರಿಹರದ 30ಕ್ಕೂ ಹೆಚ್ಚು ಜನರ ತಂಡ ಕ್ಯಾಂಟರ್‌ನಲ್ಲಿ ಹಣಗೆರೆಕಟ್ಟೆ ದರ್ಗಾಕ್ಕೆ ಭೇಟಿ ನೀಡಿ ಆರಗ ಸಮೀಪದ ಪೀರನಗುಡ್ಡ ದರ್ಗಾದ ಕಡೆಗೆ ಪ್ರಯಾಣಿಸುತ್ತಿದ್ದರು. ಈ ವೇಳೆ ಹುಲ್ಲತ್ತಿ ಬಳಿ ಚಾಲಕನ ನಿಯಂತ್ರಣ ತಪ್ಪಿ ಕ್ಯಾಂಟರ್ ರಸ್ತೆಗೆ ಉರುಳಿದೆ.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಐವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ. 20 ಜನರನ್ನು ಪಟ್ಟಣದ ಜೆಸಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ತೀರ್ಥಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ 2026ರ ಹಂಗಾಮ

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಬೆಂಗಳೂರು	12	8	4	0	16	+1.053
ಗುಜರಾತ್	13	8	5	0	16	+0.400
ಹೈದರಾಬಾದ್	12	7	5	0	14	+0.331
ಪಂಜಾಬ್	12	6	5	1	13	+0.355
ರಾಜಸ್ಥಾನ	11	6	5	0	12	+0.082
ಚೆನ್ನೈ	12	6	6	0	12	+0.027
ಕೋಲ್ಕೊತಾ	12	5	6	1	11	-0.038
ಡೆಲ್ಲಿ	12	5	7	0	10	-0.993
ಮುಂಬಯಿ	12	4	8	0	08	-0.504
ಲಖನೌ	12	4	8	0	08	-0.701

553 ರನ್
ಸಾಯಿ ಸುದರ್ಶನ್
ಗುಜರಾತ್ ಟೈಟನ್ಸ್

22 ವಿಕೆಟ್
ಭುವನೇಶ್ವರ್ ಕುಮಾರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು

ಔಟ್ of ಸಿಲಬಸ್

ಚಿಟ್ ಸಂಭ್ರಮ ನಿಷೇಧಕ್ಕೆ ಆಗ್ರಹ

ಸಿಎಸ್‌ಕೆ ವಿರುದ್ಧದ ಪಂದ್ಯದಲ್ಲಿ ಲಖನೌ ಸೂಪರ್‌ಜಯಂಟ್ಸ್ ಬೌಲರ್ ಆಕಾಶ್ ಸಿಂಗ್ ವಿಕೆಟ್ ಪಡೆದಾಗ ತಮ್ಮ ಜೇಬಿನಿಂದ ಕಾಗದದ ತುಣುಕು (ಚಿಟ್) ತೆಗೆದು ಸಂಭ್ರಮಿಸಿದ್ದರು. ಇದನ್ನು ಭಾರತದ ಮಾಜಿ ಕ್ರಿಕೆಟಿಗ ಅಂಬಟಿ ರಾಯುಡು ತೀವ್ರವಾಗಿ ಟೀಕಿಸಿದ್ದು, ''ಚಿಟ್ ಸೆಲೆಬ್ರೇಷನನ್ನು ನಿಷೇಧಿಸಬೇಕು,'' ಎಂದು ಬಿಸಿಸಿಐಗೆ ಆಗ್ರಹಿಸಿದ್ದಾರೆ. ಆಕಾಶ್ ಸಿಂಗ್ ಅವರ ಈ ಸಂಭ್ರಮಾಚರಣೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದರೂ, ರಾಯುಡು ಸೇರಿದಂತೆ ಹಲವು ಮಾಜಿ ಕ್ರಿಕೆಟಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ''ಪಂದ್ಯದ ವೇಳೆ ಮೈದಾನದಲ್ಲಿ ಆಟಗಾರರು ಇಂತಹ ಸಂದೇಶಗಳನ್ನು ಸಾರುವುದು ಮೂರ್ಖತನ. ಇವುಗಳಿಗೆ ಅವಕಾಶ ನೀಡಬಾರದು,'' ಎಂದು ರಾಯುಡು ಅಭಿಪ್ರಾಯಪಟ್ಟಿದ್ದಾರೆ.

ಕೊಹ್ಲಿ ಮಾತಿನ ಪಂಚ್

ಕೆಕೆಆರ್ ವಿರುದ್ಧದ ಪಂದ್ಯದ ವೇಳೆ ಕೆಕೆಆರ್ ಆಟಗಾರ ಮನೀಶ್ ಪಾಂಡೆ ಜೊತೆ ಕೊಹ್ಲಿ ನಡೆಸಿದ ತಮಾಷೆಯ ಸಂಭಾಷಣೆ ಸ್ಟಂಪ್ ಮೈಕ್‌ನಲ್ಲಿ ಸೆರೆಯಾಗಿದ್ದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ 60 ಎಸೆತಗಳಲ್ಲಿ ಅಜೇಯ 105 ರನ್ ಸಿಡಿಸಿ ಫಾರ್ಮ್‌ಗೆ ಮರಳಿದರು. 'ಈಗ ನಾನು ಭಾರತ ತಂಡಕ್ಕಾಗಿ ಆಡುತ್ತಿಲ್ಲ, ನೋಡ್ತಾ ಇರು, ನಾನು ಹೊಡೆಯುವ ಎಲ್ಲಾ ಅಸಾಂಪ್ರದಾಯಿಕ ಶಾಟ್‌ಗಳೂ ಯಶಸ್ವಿಯಾಗುತ್ತವೆ,'' ಎಂದು ಕೊಹ್ಲಿ, ಮನೀಶ್ ಪಾಂಡೆ ಜೊತೆ ಹಾಸ್ಯ ಚಟಾಕಿ ಹಾರಿಸಿದರು.

ಇಂದು ಸೋಲಿನ ಸುಳಿಯಲ್ಲಿ ಸಿಲುಕಿರುವ ಪಂಜಾಬ್ ಕಿಂಗ್ಸ್ ವಿರುದ್ಧ ಸೆಣಸು

ಪ್ಲೇ-ಆಫ್ ಪ್ರವೇಶಕ್ಕೆ ಆರ್‌ಸಿಬಿ ಸಜ್ಜು

ಧರ್ಮಶಾಲಾ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಭಾನುವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ದುರ್ಬಲ ಬೌಲಿಂಗ್ ಪಡೆಯ ಸವಾಲನ್ನು ಮೀರಿ ಪ್ಲೇ-ಆಫ್ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಗುರಿ ಹೊಂದಿದೆ.

ವಿಹಂಗಮ ನೋಟದ ಧರ್ಮಶಾಲಾ ಕ್ರೀಡಾಂಗಣದಲ್ಲಿ ನಿಗದಿಯಾಗಿರುವ ಏಕೈಕ ಹಗಲು ಪಂದ್ಯ ಇದಾಗಿದ್ದು, ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿ ಮಿಂಚಿರುವ ವಿರಾಟ್ ಕೊಹ್ಲಿ ಅವರೇ ಈ ಪಂದ್ಯದ ಪ್ರಮುಖ ಆಕರ್ಷಣೆ' ಯಾಗಿದ್ದಾರೆ. ಶ್ರೇಯಸ್ ಅಯ್ಯರ್ ನೇತೃತ್ವದ ಪಂಜಾಬ್ ಕಿಂಗ್ಸ್ ತಂಡಕ್ಕೆ ಆರನೇ ಸೋಲು ಎದುರಾದರೆ ಅದು ಪ್ಲೇ-ಆಫ್ ರೇಸ್‌ನಿಂದ ಅಧಿಕೃತವಾಗಿ ಹೊರಬೀಳಲಿದೆ. ಹಿನ್ನೆಲೆಯಲ್ಲಿರುವ ದೌಲಾಧರ್ ಪರ್ವತ ಶ್ರೇಣಿಯ ಸೊಬಗಿನ ನಡುವೆ ವಿರಾಟ್ ಕೊಹ್ಲಿ ಅವರ ಬ್ಯಾಟಿಂಗ್ ವೈಭವವನ್ನು ಕಣ್ತುಂಬಿಕೊಳ್ಳಲು ದೇಶಾದ್ಯಂತ ಅಪಾರ ಸಂಖ್ಯೆಯ ಅಭಿಮಾನಿಗಳು ಈಗಾಗಲೇ ಧರ್ಮಶಾಲಾಗೆ ಧಾವಿಸಿದ್ದಾರೆ. ಇದರಿಂದಾಗಿ ನಗರದ ಸೀಮಿತ ಮೂಲಸೌಕರ್ಯಗಳ ಮೇಲೆ ಭಾರಿ ಒತ್ತಡ ಉಂಟಾಗಿರುವ ಬಗ್ಗೆಯೂ ವರದಿಗಳು ಕೇಳಿಬಂದಿವೆ.

ಕಿಂಗ್ಸ್ ಬೌಲಿಂಗ್ ವೈಫಲ್ಯ

ಧರ್ಮಶಾಲಾ ಮೈದಾನದಲ್ಲಿ ನಡೆದ ಎರಡೂ ಪಂದ್ಯಗಳಲ್ಲಿ ಕೊನೆಯ 5 ಓವರ್‌ಗಳನ್ನು ನಿಯಂತ್ರಿಸಲು ವಿಫಲವಾದ ಪಂಜಾಬ್ ಕಿಂಗ್ಸ್, 210 ಮತ್ತು 200 ರನ್‌ಗಳ ಬೃಹತ್ ಮೊತ್ತವನ್ನು ರಕ್ಷಿಸಿಕೊಳ್ಳಲು ವಿಫಲವಾಗಿದೆ. ವಾಸ್ತವವಾಗಿ, ಟಿ20 ಇತಿಹಾಸದಲ್ಲೇ 200 ಪ್ಲಸ್ ರನ್ ಗಳಿಸಿದ ನಂತರವೂ ಅತಿ ಹೆಚ್ಚು ಪಂದ್ಯಗಳನ್ನು (10) ಸೋತ ದಾಖಲೆ ಪಂಜಾಬ್ ಹೆಸರಲ್ಲಿದೆ. ಟೂರ್ನಿಯುದ್ದಕ್ಕೂ ದುಬಾರಿಯಾಗಿ ಪರಿಣಮಿಸಿರುವ ಕ್ಸೇವಿಯರ್ ಬಾರ್ಟ್ಲೆಟ್ ಮತ್ತು ಮಾರ್ಕೊ ಜಾನ್ಸೆನ್ ಅವರಂಥ ಆಟಗಾರರ ಬದಲಿಗೆ ತಂಡವು ಬೌಲಿಂಗ್ ಸಂಯೋಜನೆಯನ್ನು ಪುನರ್ ರಚಿಸಬೇಕಾದ ಒತ್ತಡದಲ್ಲಿದೆ.

ಸಮತೋಲನದ ಗುರಿ

ಅರ್ಷದೀಪ್ ಸಿಂಗ್ ಹಿಂದಿನ ಪಂದ್ಯದಲ್ಲಿ ಕನಿಷ್ಠ ರನ್ ನೀಡಿ ತಮ್ಮ ಎಕಾನಮಿ ರೇಟ್‌ಅನ್ನು 10ರ ಒಳಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಮತ್ತೊಂದೆಡೆ, ಆಟದ ಸೀಸನ್‌ನ ಮೊದಲ ಪಂದ್ಯದಲ್ಲೇ ಅಜ್ಮತುಲ್ಲಾ ಒಮರ್ಜಾಯಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ತಕ್ಷಣದ ಪ್ರಭಾವ ಬೀರಿದ್ದಾರೆ. ಮಧ್ಯಮ ಮತ್ತು ಡೆತ್ ಓವರ್‌ಗಳಲ್ಲಿ ಅಗತ್ಯವಿರುವ ನಿಯಂತ್ರಣವನ್ನು ಸಾಧಿಸಲು, ತಂಡದಿಂದ ಹೊರಗುಳಿದಿರುವ ವೈಶಾಖ್ ವಿಜಯ್‌ಕುಮಾರ್ ಅವರನ್ನು ತಂಡವು ಮತ್ತೊಮ್ಮೆ ಕಣಕ್ಕಿಳಿಸುವ ಸಾಧ್ಯತೆಯಿದೆ. ಒಟ್ಟಾರೆಯಾಗಿ ಉತ್ತಮ ಪ್ರದರ್ಶನ ನೀಡುತ್ತಿರುವ ಬ್ಯಾಟಿಂಗ್ ವಿಭಾಗವು ಕಳೆದ ಕೆಲವು ಪಂದ್ಯಗಳಿಂದ ಪೂರ್ಣ ಪ್ರಮಾಣದಲ್ಲಿ ಫಾರ್ಮ್‌ನಲ್ಲಿಲ್ಲ, ಆದರೆ ಬೌಲಿಂಗ್ ವಿಭಾಗದ ವೈಫಲ್ಯ ತಂಡವನ್ನು ಚಿಂತೆಗೀಡುಮಾಡಿದೆ.

ಪಂದ್ಯ: ಎಚ್‌ಪಿಸಿಎ ಕ್ರೀಡಾಂಗಣ, ಧರ್ಮಶಾಲಾ
ಸಮಯ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಡೆಲ್ಲಿ VS ರಾಜಸ್ಥಾನ

ಭಾನುವಾರ ಡಬಲ್ ಹೆಡರ್‌ನ ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್- ರಾಜಸ್ಥಾನ ರಾಯಲ್ಸ್ ಎದುರಾಗುತ್ತಿವೆ.
ಪಂದ್ಯ: ಅರುಣ್ ಜೇಟ್ಲಿ ಕ್ರೀಡಾಂಗಣ, ಹೊಸದಿಲ್ಲಿ
ಸಮಯ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ರಜತ್ ಪಾಟಿದಾರ್ (ನಾಯಕ), ಟಿಮ್ ಡೇವಿಡ್, ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲಿಪ್ ಸಾಲ್ಟ್, ಜಿತೇಶ್ ಶರ್ಮಾ, ಜಾಕೋಬ್ ಬೆಥೆಲ್, ಕೃನಾಲ್ ಪಾಂಡ್ಯ, ರೊಮಾರಿಯೋ ಶೆಫರ್ಡ್, ಅಭಿನಂದನ್ ಸಿಂಗ್, ಜೋಶ್ ಹೇಜಲ್‌ವುಡ್, ರಸಿಖ್ ಸಲಾಮ್ ದಾರ್, ಭುವನೇಶ್ವರ್ ಕುಮಾರ್, ಸುಯಶ್ ಶರ್ಮಾ, ಸ್ವಪ್ನಿಲ್ ಸಿಂಗ್, ನುವಾನ್ ತುಷಾರ, ವೆಂಕಟೇಶ್ ಅಯ್ಯರ್, ಜಾಕೋಬ್ ಡಫಿ, ಮಂಗೇಶ್ ಯಾದವ್, ಜೋರ್ಡಾನ್ ಕಾಕ್ಸ್, ವಿಕ್ಕಿ ಓಸ್ತ್ವಾಲ್, ವಿಹಾನ್ ಮಲ್ಹೋತ್ರಾ, ಕನಿಷ್ಕ್ ಚೌಹಾಣ್, ಸಾತ್ವಿಕ್ ದೇಶ್ವಾಲ್.

ಪಂಜಾಬ್ ಕಿಂಗ್ಸ್: ಶ್ರೇಯಸ್ ಅಯ್ಯರ್ (ನಾಯಕ), ಪ್ರಿಯಾಂಶ್ ಆರ್ಯ, ಪ್ರಭ್‌ಸಿಮ್ರನ್ ಸಿಂಗ್, ಮಿಚೆಲ್ ಓವನ್, ವಿಷ್ಣು ವಿನೋದ್, ನೇಹಲ್ ವಧೇರಾ, ಅಜ್ಮತುಲ್ಲಾ ಒಮರ್ಜಾಯಿ, ಮಾರ್ಕೊ ಜಾನ್ಸೆನ್, ಮುಶೀರ್‌ಖಾನ್, ಶಶಾಂಕ್ ಸಿಂಗ್, ಮಾರ್ಕಸ್ ಸ್ಟೋಯಿನಿಸ್, ಸೂರ್ಯಾಂಶ್, ಅರ್ಷದೀಪ್ ಸಿಂಗ್, ಕ್ಸೇವಿಯರ್ ಬಾರ್ಟ್ಲೆಟ್, ಯಜುವೇಂದ್ರ ಚಹಾಲ್, ಲಾಕಿ ಫರ್ಗುಸನ್, ಹರ್‌ಪ್ರೀತ್ ಬ್ರಾರ್, ವೈಶಾಕ್ ವಿಜಯ್‌ಕುಮಾರ್, ಕೂಪರ್ ಕೊನೆಲ್ಲಿ, ಬೆನ್ ದ್ವಾರ್ಶುಯಿಸ್, ಪೈಲಾ ಅವಿನಾಶ್, ಯಶ್ ಠಾಕೂರ್, ಹರ್ನೂರ್‌ಸಿಂಗ್, ಪ್ರವೀಣ್ ದುಬೆ, ವಿಶಾಲ್ ನಿಶದ್.

ಕೋಲ್ಕೊತಾಗೆ ಗೆಲುವು

ಫಿನ್ ಅಲೆನ್, ರಘುವಂಶಿ ಸ್ಫೋಟಕ ಬ್ಯಾಟಿಂಗ್

ಫಿನ್ ಅಲೆನ್

ಕೋಲ್ಕೊತಾ: ಫಿನ್ ಅಲೆನ್ (35 ಎಸೆತಗಳಲ್ಲಿ 93 ರನ್), ಅಂಗ್‌ಕ್ರಿಷ್ ರಘುವಂಶಿ ಭರ್ಜರಿ ಬ್ಯಾಟಿಂಗ್ ಹಾಗೂ ಬೌಲರ್‌ಗಳ ಸಂಘಟಿತ ಪ್ರದರ್ಶನದ ನೆರವಿನಿಂದ ಕೋಲ್ಕೊತಾ ನೈಟ್ ರೈಡರ್ಸ್, ಗುಜರಾತ್ ಟೈಟನ್ಸ್ ವಿರುದ್ಧ 29 ರನ್ ಗೆಲುವು ಸಾಧಿಸಿದೆ. ಕೆಕೆಆರ್ ನೀಡಿದ 248 ರನ್ ಗುರಿಯನ್ನು ಬೆನ್ನಟ್ಟಿದ ಟೈಟನ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 218 ರನ್ ಗಳಿಸಲಷ್ಟೇ ಶಕ್ತವಾಯಿತು. ಗುಜರಾತ್ ಪರ ಶುಬ್ಮನ್, ಬಟ್ಲರ್ ಹೊರತುಪಡಿಸಿದರೆ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಕಂಡುಬರಲಿಲ್ಲ.

ನ್ಯೂಜಿಲೆಂಡ್‌ನ ಈ ಸ್ಫೋಟಕ ಆರಂಭಿಕ ಆಟಗಾರ ಅಲೆನ್ ಫಿನ್ 14 ಮತ್ತು 33 ರನ್ ಗಳಿಸಿದ್ದಾಗ ಗುಜರಾತ್ ಫೀಲ್ಡರ್‌ಗಳು ಕ್ಯಾಚ್ ಕೈಬಿಟ್ಟರು. ಈ ತಪ್ಪುಗಳಿಗೆ ಭಾರಿ ದಂಡ ತೆತ್ತ ಜಿಟಿ ಬೌಲರ್‌ಗಳನ್ನು ಅಲೆನ್ ಮನಬಂದಂತೆ ದಂಡಿಸಿದರು. ತಮ್ಮ ಮನಮೋಹಕ ಇನಿಂಗ್ಸ್‌ನಲ್ಲಿ 10 ಸಿಕ್ಸರ್ ಹಾಗೂ 4 ಬೌಂಡರಿಗಳನ್ನು ಸಿಡಿಸಿದ ಅಲೆನ್, ಸಿಕ್ಸ್- ಬೌಂಡರಿಗಳ ಮೂಲಕವೇ 76 ರನ್ ಗಳಿಸಿದರು. ಟಾಸ್ ಗೆದ್ದ ಗುಜರಾತ್ ಟೈಟನ್ಸ್ ನಾಯಕ ಶುಬ್ಮನ್ ಗಿಲ್ ಮೊದಲು ಬೌಲಿಂಗ್ ಆಯ್ದುಕೊಂಡರು. ಮೊದಲಾರ್ಧದಲ್ಲಿ ಅಲೆನ್ ಅಬ್ಬರಿಸಿದರೆ, ದ್ವಿತೀಯಾರ್ಧದಲ್ಲಿ ಅಂಗ್‌ಕ್ರಿಷ್ ರಘುವಂಶಿ (82*) ಮತ್ತು ಕ್ಯಾಮರೂನ್ ಗ್ರೀನ್ (52*) ಅಜೇಯ ಅರ್ಧಶತಕಗಳ ಮೂಲಕ ರನ್ ವೇಗ ಕಾಯ್ದುಕೊಂಡರು. ಇವರಿಬ್ಬರೂ ಆಟಗಾರರು ಮೂರನೇ ವಿಕೆಟ್‌ಗೆ ಕೇವಲ 53 ಎಸೆತಗಳಲ್ಲಿ 108 ರನ್‌ಗಳ ಜತೆಯಾಟ ನಿಭಾಯಿಸಿದರು. ಎದುರಾಳಿಗಳಿಗೆ ಕಡಿವಾಣ ಹಾಕಲಾಗದೆ ಜಿಟಿ ಬೌಲರ್‌ಗಳು ಹೈರಾಣಾದರು.

ಸಂಕ್ಷಿಪ್ತ ಸ್ಕೋರ್

ಕೋಲ್ಕೊತಾ ನೈಟ್‌ರೈಡರ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗೆ 247 (ಫಿನ್ ಅಲೆನ್ 93, ಅಂಗ್‌ಕ್ರಿಷ್ ರಘುವಂಶಿ 82*, ಕ್ಯಾಮರೂನ್ ಗ್ರೀನ್ 52*; ಸಾಯಿ ಕಿಶೋರ್ 38ಕ್ಕೆ 1, ಮೊಹಮ್ಮದ್ ಸಿರಾಜ್ 50ಕ್ಕೆ 1) **ಗುಜರಾತ್ ಟೈಟನ್ಸ್:** 20 ಓವರ್‌ಗಳಲ್ಲಿ 4 ವಿಕೆಟ್‌ಗೆ 218 (ಶುಬ್ಮನ್ ಗಿಲ್ 85, ಜೋಸ್ ಬಟ್ಲರ್ 57; ಸುನಿಲ್ ನರೈನ್ 29ಕ್ಕೆ 2, ಸೌರಭ್ ದುಬೆ 23ಕ್ಕೆ 1).

ಐಪಿಎಲ್ ಮಾಧ್ಯಮ ಹಕ್ಕುಗಳ ಮೌಲ್ಯ ಹೆಚ್ಚಳ ಸಾಧ್ಯತೆ

ಹೊಸದಿಲ್ಲಿ: ಪ್ರಸ್ತುತ ಐಪಿಎಲ್ ಮಾಧ್ಯಮ ಹಕ್ಕುಗಳ ಮೌಲ್ಯ 48,000 ಕೋಟಿ ರೂ.ಗಳಾಗಿದ್ದು, ಮುಂದಿನ ಹರಾಜು ಪ್ರಕ್ರಿಯೆಯಲ್ಲಿ ಇದು ಶೇ.20ರಿಂದ 30ರಷ್ಟು ಹೆಚ್ಚಾಗಬಹುದು,'' ಎಂದು ಪಂಜಾಬ್ ಕಿಂಗ್ಸ್ ಸಹ-ಮಾಲೀಕ ಮೋಹಿತ್ ಬರ್ಮನ್ ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚೆಗೆ ರಾಜಸ್ಥಾನ ರಾಯಲ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಗಳು ಹೊಸ ಹೂಡಿಕೆದಾರರಿಂದ ತಲಾ ಸುಮಾರು 2 ಶತಕೋಟಿ ಡಾಲರ್‌ನಷ್ಟು ದೊಡ್ಡ ಮೊತ್ತದ ಬಿಡ್‌ಗಳನ್ನು ಆಕರ್ಷಿಸಿವೆ. ಈ ಬೆಳವಣಿಗೆಯು

ರಾಯಲ್ಸ್ ಮಾಲೀಕರ ಅಭಿಮತ

ಮುಂದಿನ ಸಾಲಿನ ಮಾಧ್ಯಮ ಹಕ್ಕುಗಳ ಮೇಲೆ ಧನಾತ್ಮಕ ಪರಿಣಾಮ ಬೀರಲಿದೆ ಎಂದು ಬರ್ಮನ್ ಹೇಳಿದ್ದಾರೆ. ಪ್ರಸ್ತುತ (2023-2027) ಮಾಧ್ಯಮ ಹಕ್ಕುಗಳು ಭಾರಿ ಮೊತ್ತಕ್ಕೆ ಮಾರಾಟವಾಗಿದ್ದವು. ಮುಂಬರುವ ದಿನಗಳಲ್ಲಿ ಟಿವಿ ಹಕ್ಕುಗಳ ಮೌಲ್ಯದಲ್ಲಿ ಕೊಂಚ ಕುಸಿತ ಕಂಡುಬಂದರೂ, ಡಿಜಿಟಲ್ ಹಕ್ಕುಗಳ ಮೌಲ್ಯವು ಗಣನೀಯವಾಗಿ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಐಪಿಎಲ್ ಫೈನಲ್ ವೇಳೆ ಅಹಮದಾಬಾದ್‌ನಲ್ಲಿ ಐಸಿಸಿ ಸಭೆ

ನಖ್ವಿ ಹಾಜರಿ ಅನುಮಾನ

ಹೊಸದಿಲ್ಲಿ: ಐಪಿಎಲ್ ಫೈನಲ್ ನಡೆಯಲಿರುವ ಮೇ 31ರಂದೇ ಅಹಮದಾಬಾದ್‌ನಲ್ಲಿ ಐಸಿಸಿ ಸಭೆ ಆಯೋಜನೆಯಾಗಿದೆ. ಸಭೆ ಮೇ 30 ಮತ್ತು 31 ರಂದು ನಿಗದಿಯಾಗಿದ್ದು ಜಗತ್ತಿನ ಪ್ರಮುಖ ಕ್ರಿಕೆಟ್ ಮಂಡಳಿಗಳ ಮುಖ್ಯಸ್ಥರನ್ನು ಆಹ್ವಾನಿಸಲಾಗಿದೆ. ಪಾಕ್ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಖ್ವಿಯವರಿಗೂ ಆಹ್ವಾನ ತಲುಪಿರುವುದಾಗಿ ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಭಾರತ ಮತ್ತು ಪಾಕಿಸ್ತಾನ ನಡುವೆ ಏರ್ಪಟ್ಟಿರುವ ರಾಜತಾಂತ್ರಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ನಖ್ವಿ ಹಾಜರಿ ಅನುಮಾನ ಮೂಡಿಸಿದೆ. ಅವರು ಭಾರತಕ್ಕೆ ಪ್ರಯಾಣಿಸಲು ತಮ್ಮ ಪಾಕ್ ಸರಕಾರದ ಅನುಮತಿ ಪಡೆಯುವುದು ಮತ್ತು ಅಹಮದಾಬಾದ್‌ಗೆ ಬರುವುದು ಅಸಂಭವ ಎನ್ನಲಾಗಿದೆ. ಈ ಸಭೆಯು ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಕತಾರ್‌ನಲ್ಲಿ ನಡೆಯಬೇಕಿತ್ತು. ಆದರೆ ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ಇದನ್ನು ಭಾರತಕ್ಕೆ ಸ್ಥಳಾಂತರಿಸಲಾಗಿದೆ. ಏಷ್ಯಾ ಕ್ರಿಕೆಟ್ ಸಮಿತಿಯ ಅಧ್ಯಕ್ಷರೂ ಆಗಿರುವ ಮೊಹ್ಸಿನ್ ನಖ್ವಿ 2025ರಲ್ಲಿ ನಡೆದ ಏಷ್ಯಾ ಕಪ್ ಟ್ರೋಫಿಯನ್ನು ವಿಜೇತ ತಂಡ ಭಾರತಕ್ಕೆ ಹಸ್ತಾಂತರಿಸದೆ ವಿವಾದಕ್ಕೆ ಕಾರಣರಾಗಿದ್ದರು. ''ಭಾರತಕ್ಕೆ ಟ್ರೋಫಿ ಬೇಕೆಂದರೆ ದುಬೈನಲ್ಲಿರುವ ಕಚೇರಿಗೆ ಬಂದು ಸ್ವೀಕರಿಸಬಹುದು,'' ಎಂದು ಅವರು ಆ ಸಂದರ್ಭದಲ್ಲಿ ಹೇಳಿದ್ದರು. ಏಷ್ಯಾ ಕಪ್ ಟ್ರೋಫಿ ಇಂದಿಗೂ ದುಬೈನಲ್ಲಿರುವ ನಖ್ವಿಯವರ ಕಚೇರಿಯಲ್ಲಿ ಇರಿಸಲಾಗಿದೆ.

ಅಭಿನಂದನ ಗ್ರಂಥಕ್ಕೆ ಸಾಂಸ್ಕೃತಿಕ ಸ್ಪರ್ಶ



ನೆಲೆ: ಡಾ.ಚನ್ನಪ್ಪ ಕಟ್ಟಿ ಅಭಿನಂದನ ಗ್ರಂಥ; ಪ್ರಧಾನ ಸಂ: ಡಾ.ಎಂ.ಎಂ.ಪಡಶೆಟ್ಟಿ, ಪ್ರ: ನೆಲೆ ಪ್ರಕಾಶನ ಸಂಸ್ಥೆ, ಸಿಂದಗಿ ಪುಟ: 756; ಬೆಲೆ: 1000 ರೂ.

ಅಭಿನಂದನ ಗ್ರಂಥವೆಂದರೆ ಯಾರೋ ಒಬ್ಬ ವ್ಯಕ್ತಿಯ ಬದುಕು-ಬರಹಕ್ಕೆ ಸೀಮಿತವಲ್ಲ, ಆ ವ್ಯಕ್ತಿಯ ಉಗ್ಗಡಣೆಯೂ ಅಲ್ಲ, ಅದಕ್ಕೂ ಮೀರಿದ ಲೋಕದೃಷ್ಟಿಯೊಂದನ್ನು ಹೊಂದಿರಬೇಕು ಎಂಬುದಕ್ಕೆ ನಿದರ್ಶನವೆನಿಸುವ ಗ್ರಂಥ 'ನೆಲೆ'. ಡಾ.ಚನ್ನಪ್ಪ ಕಟ್ಟಿ ಅವರಿಗೆ ಮೇ 1ರಂದು 70 ವರ್ಷ ತುಂಬಿದಾಗ ಅವರಿಗೆ ಸಲ್ಲಿಸಿದ ಅಭಿನಂದನ ಗ್ರಂಥವಿದು.

ಬಿಎಂಶ್ರೀ ಅವರಿಂದ ತೊಡಗಿ ಕುವೆಂಪು, ಗೋಕಾಕ್, ಯು.ಆರ್.ಅನಂತಮೂರ್ತಿ ಮೊದಲಾಗಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತ ಗೊಳಿಸಿದವರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರ ಕೊಡುಗೆ ದೊಡ್ಡದು. ಆ ಸಾಲಿಗೆ ಸೇರಿದವರು ಡಾ.ಚನ್ನಪ್ಪ ಕಟ್ಟಿ. ಕಾವ್ಯ, ಕಥೆ, ವಿಮರ್ಶೆ, ಜೀವನ ಚರಿತ್ರೆ, ಸಂಶೋಧನೆ, ಅನುವಾದ, ಸಂಪಾದನೆ... ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು. ಅವರಿಗೆ ಸಮರ್ಪಿಸಿದ ಈ ಗ್ರಂಥದಲ್ಲಿ ಕಟ್ಟಿಯವರ ಬದುಕು, ಬರಹಗಳ ವಿವರಗಳಷ್ಟೇ ಅಲ್ಲದೆ ಕನ್ನಡ ಕಥನ ಪರಂಪರೆಯ ಅವಲೋಕನ ಮಾಡಿರುವುದು ವಿಶೇಷ.

756 ಪುಟಗಳ ಈ ಬೃಹತ್ ಕೃತಿಯಲ್ಲಿ ಐದು ವಿಭಾಗಗಳಿವೆ. ಮೊದಲ ವಿಭಾಗ 'ನೆನಪು ಹಾಯಿ ದೋಣಿ'. ಇದರಲ್ಲಿ ಡಾ.ಚನ್ನಪ್ಪ ಕಟ್ಟಿ ಅವರ ಬಾಲ್ಯ, ಓದು, ವೃತ್ತಿ, ಪ್ರವೃತ್ತಿ, ಕುಟುಂಬ ಇತ್ಯಾದಿ ವಿವರಗಳಿವೆ. ಈ ವಿವರಗಳನ್ನು ಸ್ವತಃ ಅವರೇ ಬರೆದಿದ್ದಾರೆ. ಎರಡನೆಯ ವಿಭಾಗ 'ಒಡಲ ನುಡಿ'. ಕಟ್ಟಿಯವರ ಆಪ್ತೇಷ್ಟರು ಅವರ ವ್ಯಕ್ತಿತ್ವವನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಎರಡೂ ಭಾಗಗಳಲ್ಲಿ ಬರೀ ಕಟ್ಟಿಯವರಿಲ್ಲ, ಉತ್ತರ ಕರ್ನಾಟಕ ಭಾಗದ ಎರಡು-ಮೂರು ದಶಕಗಳ ಸಾಹಿತ್ಯ- ಸಾಂಸ್ಕೃತಿಕ ಚಿತ್ರಣವೂ ಆಂಶಿಕವಾಗಿ ಚಿತ್ರಿತವಾಗಿದೆ.

ಮೂರನೆಯ ಭಾಗ ಚನ್ನಪ್ಪ ಕಟ್ಟಿಯವರ 'ಸಾಹಿತ್ಯಾಭಿವ್ಯಕ್ತಿಯ ನೆಲೆಗಳು'. ಅವರ ಸಾಹಿತ್ಯ ಕೃಷಿಯನ್ನು ವಿವಿಧ ವಿಮರ್ಶಕರು ಇಲ್ಲಿ ವಿಮರ್ಶಿಸಿದ್ದಾರೆ. ನಾಲ್ಕನೆಯ ಭಾಗ 'ಕನ್ನಡ ಸಣ್ಣ ಕತೆಗಳಲ್ಲಿ ಮಹಿಳಾ ಸಂವೇದನೆ'. ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ ಮತ್ತು ದಲಿತ ಬಂಡಾಯ ಚಳವಳಿಗಳ ಕಾಲಘಟ್ಟದಲ್ಲಿ ರಚನೆಯಾದ 77 ಪ್ರಾತಿನಿಧಿಕ ಕಥೆಗಾರರ ಕಥೆಗಳನ್ನು ಆರಿಸಿ ಅವುಗಳಲ್ಲಿ ಮಹಿಳಾ ಸಂವೇದನೆಯ ರೀತಿಯನ್ನು ವಿವಿಧ ಲೇಖಕರು ಇಲ್ಲಿ ವಿಶ್ಲೇಷಿಸಿದ್ದಾರೆ. ಕನ್ನಡ ಕಥನ ಪರಂಪರೆಯಲ್ಲಿ ಮಹಿಳಾ ಅಸ್ಮಿತೆಯ ಬಗೆಯನ್ನು ಅಭ್ಯಸಿಸುವವರಿಗೆ ಈ ಭಾಗ ಉತ್ತಮ ಆಕರ. ಐದನೆಯ ಭಾಗ 'ಲೋಕ ಸಂಪರ್ಕ ಜಾಲ', ಚನ್ನಪ್ಪ ಕಟ್ಟಿಯವರು ಕೋವಿಡ್ ಸಂದರ್ಭದಲ್ಲಿ ನಡೆಸಿದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ವಿವರ. ಈ ಬೃಹತ್ ಸಾಹಿತ್ಯ ಗ್ರಂಥಕ್ಕಾಗಿ 159 ಜನ ಲೇಖಕರು ಬರಹಗಳನ್ನು ನೀಡಿದ್ದಾರೆ. ಇಷ್ಟೆಲ್ಲ ಲೇಖಕರಿಂದ ಬರೆಯಿಸಿಕೊಳ್ಳುವುದೆಂದರೆ ಸುಲಭದ ಕೆಲಸವಲ್ಲ. ಇದಕ್ಕಾಗಿ, ಡಾ.ಎಂ.ಎಂ.ಪಡಶೆಟ್ಟಿಯವರ ನೇತೃತ್ವದ ತಂಡ ಮೂರು ವರ್ಷ ಕೆಲಸ ಮಾಡಿದೆ. ಡಾ.ಶ್ರೀರಾಮ ಇಟ್ಟಣ್ಣವರ ಗೌರವ ಸಂಪಾದಕರು. ಸಾಹಿತಿಯೊಬ್ಬರ ಬದುಕಿನ ಸಂದರ್ಭವನ್ನು ಬೃಹತ್ ಕೃತಿಯಾಗಿ ಶಿಸ್ತುಬದ್ಧವಾಗಿ ಸಂಪಾದಿಸಿ, ಸಾಂಸ್ಕೃತಿಕ ನೋಟದೊಂದಿಗೆ ಹೇಗೆ ಪ್ರಸ್ತುತಪಡಿಸಬಹುದು ಎಂಬುದಕ್ಕೆ ಈ ಕೃತಿ ಉದಾಹರಣೆ. ■

ನ್ಯೂ ಬುಕ್

ಕನ್ನಡಕ್ಕೆ ಬಂತು ಮರಾಠಿ ಪಾರ್ಟಿ



ಪಾರ್ಟಿ; ಲೇ: ಮಹೇಶ್ ಎಲಕುಂಚವಾರ್ ಅನು: ಪ್ರಸಾದ್ ಕುಂದೂರು ಪ್ರ: ಅಭಿರುಚಿ ಪ್ರಕಾಶನ, ಮೈಸೂರು ಪುಟ: 112; ಬೆಲೆ: 120 ರೂ.

ಮರಾಠಿ ರಂಗಭೂಮಿ ಭಾರತೀಯ ರಂಗಕ್ಷೇತ್ರದಲ್ಲೇ ಅತಿಹೆಚ್ಚು ವೈವಿಧ್ಯಮಯ ಪ್ರಯೋಗಗಳನ್ನು ಕಾಣುವ ರಂಗ. 70ರ ದಶಕದಲ್ಲಿ ಅಲ್ಲಿ ಪ್ರಯೋಗಗೊಂಡು ಪ್ರಸಿದ್ಧವಾದ ನಾಟಕ 'ಪಾರ್ಟಿ' ಈಗ ಕನ್ನಡಕ್ಕೆ ಬಂದಿದೆ. ಮರಾಠಿಯ ಪ್ರಸಿದ್ಧ ನಾಟಕಕಾರ ಮಹೇಶ್ ಎಲಕುಂಚವಾರ್ ಅವರ ಈ ನಾಟಕವನ್ನು ರಂಗಕರ್ಮಿ ಪ್ರಸಾದ್ ಕುಂದೂರು ಕನ್ನಡಕ್ಕೆ ಅನುವಾದಿಸಿದ್ದಾರೆ. ವಾಡಾ ಚಿರೇಬಂದಿ, ಮಗ್ನಾ ತಾಳ್ಯಾ ಕಾಠಿ, ಯುಗಾಂತ, ಗರ್ಬೋ, ಹೋಳಿ, ಪಾರ್ಟಿ ಮೊದಲಾದ ನಾಟಕಗಳ ಮೂಲಕ ಸ್ವಾತಂತ್ರ್ಯೋತ್ತರ ಭಾರತೀಯ ರಂಗಭೂಮಿಯಲ್ಲಿ ತನ್ನ ಛಾಪನ್ನೊತ್ತಿದವರು ಮಹೇಶ್ ಎಲಕುಂಚವಾರ್. ಅವರ 'ವಾಡಾ ಚಿರೇಬಂದಿ' ಕನ್ನಡಕ್ಕೆ 'ಚಿರಬಂದಿ ವಾಡೆ'ಯಾಗಿ ಬಂದಿದ್ದು ಈಗಾಗಲೇ ಹಲವು ಪ್ರಯೋಗಗಳನ್ನು ಕಂಡಿದೆ. 'ಪಾರ್ಟಿ' ಕನ್ನಡಕ್ಕೆ ಬರುತ್ತಿರುವ ಅವರ ಎರಡನೆಯ ನಾಟಕ. ಸಾಹಿತಿ ದಿವಾಕರ ಬಾರ್ವೆ ಅವರಿಗೆ ದೊರೆತ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಯ ಸಂಭ್ರಮಾಚರಣೆಗೆ ದಮಯಂತಿ ಆಯೋಜಿಸಿರುವ 'ಪಾರ್ಟಿ'ಯಲ್ಲಿ ಮನುಷ್ಯ ಸ್ವಭಾವಗಳ ಪದರುಗಳು ವಿಡಂಬನಾತ್ಮಕವಾಗಿ ತೆರೆದುಕೊಳ್ಳುತ್ತಾ ಹೋಗುತ್ತವೆ. ಈ ಪಾರ್ಟಿಯಲ್ಲಿ ಸೇರಿರುವವರೆಲ್ಲ ಸಾಂಸ್ಕೃತಿಕ ಲೋಕದ ಖ್ಯಾತನಾಮರು. ಆದರೆ, ಪ್ರತಿಯೊಬ್ಬರೂ ಹೊರಗೆ ಹೊಂದಿರುವ ಇಮೇಜ್‌ನಂತೆ ಒಳಗೆ ಇಲ್ಲ. ಇದು ಅವರ ಸಂಭಾಷಣೆಗಳಲ್ಲಿ ಬಹಿರಂಗಗೊಳ್ಳುತ್ತಾ ಹೋಗುತ್ತದೆ. ಕೇಂದ್ರ ಸಚಿವರ ಪುತ್ರಿಯಾದ ದಮಯಂತಿ ವಿಧವೆ, ಒಬ್ಬ ವೈದ್ಯರೊಂದಿಗೆ ಸಂಬಂಧ ಹೊಂದಿದವಳು. ಬಂಧಗಳ ನಡುವಣ ಸಂಕೀರ್ಣತೆಗಳನ್ನು ಈ ಪಾತ್ರ ಪ್ರತಿನಿಧಿಸುತ್ತದೆ. ಖ್ಯಾತ ಸಾಹಿತಿ ದಿವಾಕರ್ ಬಾರ್ವೆ ಒಳಗಡೆ ಪೊಳ್ಳಾಗಿದ್ದರೂ ಹೊರಗೆ ಘನವಾಗಿರಲು ಪ್ರಯತ್ನಿಸುವವನು. ಮೋಹಿನಿಯು ಬಾರ್ವೆಯನ್ನು ಪ್ರೀತಿಸುತ್ತಾ ಅವರಿಂದ ನಿ ರ್ ಲ ಕ್ಷಿ ತ' ಳಾ ದ' ವ' ಳ' ು. ದಮಯಂತಿಯ ಮಗಳು ಸೋನಾ ವಿವಾಹವಾಗದೇ ಮಗು ಹೊಂದಿದವಳು. ಇದಲ್ಲದೆ 'ಅಮೃತ್' ವೇದಿಕೆಗೆ ಬಾರದಿದ್ದರೂ ನಾಟಕದ ತುಂಬ ಪಾತ್ರಗಳನ್ನು ಪ್ರಭಾವಿಸುವ ಆದರ್ಶಯುತ ಪಾತ್ರ.

ಈ ನಾಟಕ ರಚಿತವಾದುದು 1976ರಲ್ಲೇ ಆದರೂ ಇಂದಿಗೂ ಪ್ರಸ್ತುತ. ಜಾಗತೀಕರಣ, ಮಾರುಕಟ್ಟೆ ಕೇಂದ್ರಿತ ಆರ್ಥಿಕತೆ, ನಗರೀಕರಣಗಳ ಸಂದರ್ಭದಲ್ಲಿ ಬೌದ್ಧಿಕ ವಲಯದ ಹೊರಲೋಕಕ್ಕೆ ಬದಲಾದಂತೆ ಕಂಡರೂ ಒಳಗಿನ ನೈತಿಕ ಬದ್ಧತೆ ಕ್ರಮೇಣ ದುರ್ಬಲವಾಗುತ್ತಿರುವ ಚಿತ್ರಣ ಅಂದಿನಂತೆ ಇಂದಿಗೂ ಸಲ್ಲುತ್ತದೆ. ಚುರುಕಾದ, ವಿಡಂಬನಾತ್ಮಕ ಸಂಭಾಷಣೆಗಳಿಂದ ಕೂಡಿರುವ ನಾಟಕ ಓದಲೂ ಸರಾಗ, ಖುಷಿ ನೀಡುತ್ತದೆ. ಅನುವಾದವೂ ಕನ್ನಡದ್ದೇ ಎಂಬಷ್ಟು ಸಹಜ. ಕಥೆಗಾರ ಜಯಂತ ಕಾಯ್ಕಿಣಿ ಈ ಕೃತಿಯನ್ನು ಮೆಚ್ಚಿರುವುದು ಹೀಗೆ: 'ಮಹೇಶ್ ಎಲಕುಂಚವಾರ್ ಅವರ ಪಾರ್ಟಿ, ಹೇಗೆ ನಮ್ಮ ಕಾಲದ ಮಹತ್ವದ ನಾಟಕಗಳಲ್ಲಿ ಒಂದೋ, ಹಾಗೆಯೇ ಈ ಅನುವಾದ ಕೃತಿ ಕೂಡ ನಾನು ಓದಿರುವ ಉತ್ಕೃಷ್ಟ ತರ್ಜುಮೆಗಳಲ್ಲಿ ಒಂದು.' ಒಟ್ಟಿನಲ್ಲಿ ಕನ್ನಡಕ್ಕೆ ಒಂದು ಒಳ್ಳೆಯ ರಂಗಕೃತಿ ಬಂದಿದೆ, ಪ್ರಯೋಗಗಳಾಗಬೇಕಿವೆ ಅಷ್ಟೆ. ■

ಪುಸ್ತಕ ಟಿಪ್ಪಣಿ

ನದಿ ನೀರಿನ ಕಥೆ



ರಾಜ್ಯಗಳ ಪುನಾರಚನೆ ಆದಾಗ, ಗಡಿಗಳಲ್ಲಿ ಹರಿವ ಒಂದೇ ನದಿ ವಿವಿಧ ರಾಜ್ಯಗಳಲ್ಲಿ ಹಂಚಿಹೋಗಿತ್ತು. ಗಡಿ ಹಂಚಿಕೊಂಡ ರಾಜ್ಯಗಳು ತಮ್ಮ ಪಾಲಿನ ನೀರು ಬಳಸಿದರೂ ಕರ್ನಾಟಕದ ಪಾಲಿನ ನೀರು ದಾಖಲೆಗಳಲ್ಲಿ ಮಾತ್ರ ಲಭ್ಯ. ಇಂತಹ ಹಲವು ನದಿ ನೀರಿನ ಕಥೆ ಮತ್ತು ವ್ಯಥೆ ತಿಳಿಸಿಕೊಡುವ ಪ್ರಯತ್ನವೇ 'ಕರ್ನಾಟಕ ನದಿಗಳ ಕಥೆ-ವ್ಯಥೆ' ಪುಸ್ತಕ. **ಕರ್ನಾಟಕದ ನದಿಗಳ ಕಥೆ-ವ್ಯಥೆ; ಲೇ: ಡಾ. ಕೃಷ್ಣ ಕೃಷ್ಣ ಕೊಲ್ಹಾರ ಕುಲಕರ್ಣಿ; ಪ್ರ: ಸಮನ್ವಿತ, ಬೆಂಗಳೂರು; ಪುಟ: 220; ಬೆಲೆ: 220 ರೂ.** ■

ವ್ಯವಸ್ಥೆಯ ವಿರುದ್ಧದ ಹೋರಾಟ

ಈಗಾಗಲೇ 'ರೌದ್ರಾವರಣಂ' ಹಾಗೂ 'ಕಾಡ್ಗಿಚ್ಚು' ಕಾದಂಬರಿ ಓದಿದವರಿಗೆ ಈ ಸರಣಿಯ ಮೂರನೇ ಕಾದಂಬರಿ 'ಆಕ್ರಮಣ'ವನ್ನು ಕೊಟ್ಟಿದ್ದಾರೆ ಅನಂತ್ ಕುಣಿಗಲ್. ವ್ಯವಸ್ಥೆಯ ಬಗ್ಗೆ ಜನರಿಗೆ ಇರುವ ಅಸಹನೆಯೇ ಇದರ ಮೂಲದ್ರವ್ಯ. ಮುಖ್ಯಪಾತ್ರ ರ್‍ಯಾಂಬೊ ತನ್ನ ಸಮಯ, ಹಣ, ಶಕ್ತಿ ಬಳಸಿ ಏನು ಮಾಡುತ್ತಾನೆ ಎಂದು ತಿಳಿಯಲು ಈ ಕಾದಂಬರಿ ಓದಬೇಕು. **ಆಕ್ರಮಣ; ಲೇ: ಅನಂತ ಕುಣಿಗಲ್; ಪ್ರ: ಅವ್ವ ಪುಸ್ತಕಾಲಯ, ಕುಣಿಗಲ್; ಪುಟ: 144; ಬೆಲೆ: 150 ರೂ.** ■

ಎಂಟು ದಶಕಗಳ ನೆನಪು



ವೈಚಾರಿಕ 45 ಬರಹಗಳ ಸಂಕಲನ 'ರೇಷ್ಮಿ ಕೌದಿ'ಯಲ್ಲಿ ಸುಮಾರು ಎಂಟು ದಶಕಗಳ ನೆನಪುಗಳಿವೆ. ಓದುತ್ತಾ ಹೋದಂತೆ ಕಾಲವೂ ನಮ್ಮ ಜತೆಗೆ ನಡೆಯುತ್ತದೆ. ಹಳೆಯ ಕಾಲದ ಪ್ರಾಮಾಣಿಕ ಬದುಕು, ಅಪೇಕ್ಷೆ ಇಲ್ಲದ ಶುದ್ಧ ಪ್ರೀತಿ, ರೀತಿ ರಿವಾಜುಗಳು ಕಣ್ಣೆದುರು ಸುಳಿಯುತ್ತವೆ. ಜಾತಿ, ಮತಗಳು ಅಂದಿನ ಸಮಾಜದಲ್ಲಿ ಹುತ್ತಗಟ್ಟಿರಲಿಲ್ಲ ಎಂಬುದು ವೇದ್ಯವಾಗುತ್ತದೆ. **ರೇಷ್ಮಿ ಕೌದಿ; ಲೇ: ವಿರೂಪಾಕ್ಷ ಕೋರಗಲ್; ಪ್ರ: ಪ್ರಗತಿಪರ ವೇದಿಕೆ ಪ್ರಕಾಶನ, ಹಾವೇರಿ; ಪುಟ: 164; ಬೆಲೆ: 150 ರೂ.** ■

ಜೀವನ ಪ್ರೀತಿಯ ಬರಹಗಳು



ವಸು ವತ್ಸಲೆ ಅವರ 'ಮನಸೇ ಥ್ಯಾಂಕ್ಯೂ' ಕೃತಿಯಲ್ಲಿ ಬರುವ ಬಹುತೇಕ ಅಧ್ಯಾಯಗಳು ಸಾರ್ಥಕ ಬದುಕಿಗೆ ಬೇಕಿರುವ ಪ್ರಾಥಮಿಕ ಸೂತ್ರಗಳಂತಿವೆ. ಮುನ್ನುಡಿಯಲ್ಲಿ ಪ್ರಸಾದ್ ನಾಯ್ಕ್ ಅವರು ಹೇಳುವಂತೆ, 'ಓದುಗರಿಗೆ ಈ ಪುಸ್ತಕ ಒಂದೊಳ್ಳೆಯ ಲೈಫ್ ಆಗಬಹುದು'. ಇಲ್ಲಿರುವ 18 ಬರಹಗಳು ಜೀವನ ಪ್ರೀತಿಯನ್ನು ಹುಟ್ಟಿಸುವಂಥವು. **ಮನಸೇ ಥ್ಯಾಂಕ್ಯೂ; ಲೇ: ವಸು ವತ್ಸಲೆ; ಪ್ರ: ಅವ್ಯಕ್ತ ಪ್ರಕಾಶನ, ಬೆಂ.; ಪುಟ: 184; ಬೆಲೆ: 240 ರೂ.** ■

ವಿಜಯಬಂಧ - 7948



ಎಡದಿಂದ ಬಲಕ್ಕೆ

1 ಕಲ್ಪದ ಕೊನೆಯಲ್ಲಿ ಉಂಟಾಗುವ ಪ್ರಪಂಚದ ನಾಶ 3
3 ಕಾರು ತೆಗೆದುಕೊಂಡನೆಂದು ಹಬ್ಬಿಸಿದ ಗಾಳಿಸುದ್ದಿ 3
6 ಅವರ ತಪಸ್ಸಿಗೆ ಮೆಚ್ಚಿ ಶಿವ ನೀಡಿದ ಅನುಗ್ರಹ 2
8 ಚತುರ ಹೊಂದಿದ ಚಲಿಸುವ ಆಸ್ತಿ 2
10 ಅನಾದಿ ಕಾಲದಿಂದ ನುಡಿಸುತ್ತಾ ಬರುತ್ತಿರುವ ವಾದ್ಯ 3
11 ಓ ಈಗ ಹರಿದಿದೆ ನೋಡಿ ಈ ಪ್ರವಾಹ 2
12 ಸಂಧಾನ ಮಾಡಿಕೊಳ್ಳಲು ಒಂದು ರೀತಿ 3
14 ಹರಟೆ ಹೊಡೆಯುವಾಗ ಸಿಕ್ಕ ತೆಂಗಿನ ಚಿಪ್ಪು 3
16 ತರಗತಿಯಲ್ಲಿನ ವ್ಯತ್ಯಾಸ 3
18 ಹವನ ಮಾಡುತ್ತಿರುವಾಗಲೇ ನಡೆದ ಕೊಲೆ 3
20 ಗಮನವಿರಿಸಿ ನೋಡಿದರೆ ಕಾಣುವ ಪುತ್ರ 2
21 ಸಾರವನ್ನೆಲ್ಲ ಹೀರಿಕೊಂಡ ಸಮುದ್ರ 3
22 ಭಾಗವಿಟ್ಟು ನೋಡಿದರೆ ಗುಹೆ ಪ್ರವೇಶವಾಯಿತು 2
24 ಶಕುಂತಲಳನ್ನು ಕಂಡು ಬಂದ ರಾಮಪುತ್ರ 2
26 ಪುನಃ ನಸುಕಿನಲ್ಲಿ ಕಂಡ ಸ್ವಪ್ನ 3
27 ಮೃದುವಾಗಿ ಮಾತನಾಡಿದ ಮಗ 3

ಮೇಲಿನಿಂದ ಕೆಳಕ್ಕೆ

1 ಪಂಚ ಭಾಗಗಳನ್ನು ಹೊಂದಿದ ಲೋಕ 3
2 ಅವಯುವಕ್ಕೆ ಸಂತಸ ತಂದ ಜವೆಗೋಧಿ 2
4 ಹೆಣ್ಣು ನಡೆಯುವ ಅಂಗಕ್ಕೆ ಧರಿಸಿದ ಆಭರಣ 4
5 ನಗ ಹೊಂದಿದ ಈತ ಪಾಪರಹಿತನು 3
7 ರಸದ ರುಚಿ ನೋಡಿದ ನಾಲಗೆ 3
9 ಹರವಿ ಹೊತ್ತು ಬಂದ ಸೂರ್ಯ 2
11 ಮಾವಿನಹಣ್ಣಿನ ಒಳಗಿನ ಗಟ್ಟಿ ಭಾಗ 2
13 ಬಲವಂತ ಮಾಡಿದಾಗ ಅವಸರ ತೋರು 3
15 ಸರಪಂಚರೆಲ್ಲ ಸೇರಿ ತಯಾರಿಸಿದ ಬಗೆ 3
16 ಅಂಗಡಿಯಲ್ಲಿ ಸಿಕ್ಕ ಅವಯುವ 2
17 ವ್ಯವಸಾಯದ ಪೂಜೆಗೆ ಮಾಡಿದ ಬಾಳೆ ಬೆಲ್ಲದ ಮಿಶ್ರಣ 4
18 ಅರಳಿದಾಗ ಸೊಗಸಾಗಿ ಕಂಡ ಹತ್ತಿ 3
19 ಜನಗಣದಲ್ಲಿ ತುಂಬಿರುವ ಆಭರಣ 2
20 ಮರ ನೋಡಿ ವಾಪಸ್ ಬಂದಾಗ ತಂದ ಉಸುಕು 3
23 ನವಿರಾಗಿ ಮೂಡಿದ ಮೃದುತನ 3
25 ಶಮಂತ ಬಂದು ಹೋದ ಸಂಖ್ಯೆ ನೂರು 2

ವಿಜಯಬಂಧ | 7947

ಎಡದಿಂದ ಬಲಕ್ಕೆ: 2.ವಶೀಕರಣ 4.ಅನುಮಾನ 5.ದರಿ 6.ಸನಿಹ 8.ಆಲಿಕೆ 10.ಕಲರವ 11.ನವ್ಯಕವಿ 13.ಕರಡಿ 15.ವರದಿ 17.ತಾವು 18.ಕುತೂಹಲ 20.ಹಳೆಯಕಾಲ.
ಮೇಲಿನಿಂದ ಕೆಳಕ್ಕೆ: 1.ಥಾನು 2.ವನಮಾಲಿ 3.ರಜನಿ 4.ಅಂಬಲ 7.ಹರವಿ 8.ಆವಕ 9.ಕೆನಡಿ 10.ಕಡವ 12.ಕರತಾಲ 14.ರವಿಕುಲ 16.ರಗಳೆ 19.ಹಗ್ಗ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಮಕರ, ಮೀನ ಈ ರಾಶಿಯವರಿಗೆ ಶುಕ್ರ ದಶ ಯೋಗ

ಮೇಷ: ವಿದ್ಯಾರ್ಥಿಗಳು ಅಧ್ಯಯನಶೀಲರಾಗಿರುವುದು ಯಶಸ್ಸಿಗೆ ಅನುಕೂಲವಾಗುತ್ತದೆ. ಮಾರಾಟ ಪ್ರತಿನಿಧಿಗಳಿಗೆ ಕಮಿಷನ್ ಸಿಗಲಿದೆ. ಶ್ರೀಸತ್ಯನಾರಾಯಣ ಸೇವೆಯಿಂದ ಆರ್ಥಿಕ ಮುಗ್ಗಟ್ಟು ನಿವಾರಣೆಯಾಗುವುದು. **ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಕೆಂಪು**
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ವೃತ್ತಿ ಬದುಕಿನಲ್ಲಿ ಸಂಕೋಚದ ಪ್ರವೃತ್ತಿಯಿಂದ ಲಾಭಗಳಿಲ್ಲದೆ ಅಧಿಕವಾದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ನಿರುದ್ಯೋಗದ ಸಮಸ್ಯೆ ಸ್ನೇಹಿತನ ಪ್ರಯತ್ನ ಬಲದಿಂದ ದೂರವಾಗಲಿದೆ. **ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಕೇಸರಿ**
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಅಧಿಕಾರ ಪ್ರಾಪ್ತಿಯಲ್ಲಿ ಅಡೆತಡೆ ಸಂಭವವಿರುವುದು. ನಿಮ್ಮ ಕೈ ಮೀರಿದ ಕೆಲಸಗಳ ಬಗ್ಗೆ ಪುನಃ ಯೋಚಿಸುವುದು ಸರಿಯಲ್ಲ. ರಾಜಕೀಯ ವ್ಯಕ್ತಿಗಳ ಸಹಾಯದಿಂದ ಕಾರ್ಯಗಳನ್ನು ನಡೆಸಿಕೊಳ್ಳಬಹುದು. **ಅದೃಷ್ಟ ಸಂಖ್ಯೆ 5, ಅದೃಷ್ಟ ಬಣ್ಣ ಕಿತ್ತಳೆ**
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದಲ್ಲಿ ಸಮಸ್ಯೆಗಳ ಪರಿಹಾರವನ್ನು ಶಾಶ್ವತವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುವುದು. ಸರಕಾರಿ ಕಾಮಗಾರಿ ಕೆಲಸಗಳು ದೊರೆತು ಆರ್ಥಿಕ ಅಭಿವೃದ್ಧಿಯನ್ನು ಹೊಂದುವಿರಿ. **ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ನೀಲಿ**
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಬರಹಗಾರರಿಗೆ ವೃತ್ತಿಯಲ್ಲಿ ಅಡಚಣೆ ಉಂಟಾಗಬಹುದು. ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ. **ಅದೃಷ್ಟ ಸಂಖ್ಯೆ 4, ಅದೃಷ್ಟ ಬಣ್ಣ ಗುಲಾಬಿ**
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಘೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಆಫೀಸಿನ ವಿಷಯದಂತೆ ಮನೆಯ ವಿಚಾರಗಳ ಕಡೆಗೂ ಗಮನ ಹರಿಸುವುದು ಒಳ್ಳೆಯದು. ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಸಿಗುವ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. **ಅದೃಷ್ಟ ಸಂಖ್ಯೆ 7, ಅದೃಷ್ಟ ಬಣ್ಣ ಕಪ್ಪು**
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ. ಯಾವ ಕೆಲಸದಲ್ಲೂ ಅಡೆತಡೆಗಳು ಇರದು. ವಾದ-ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ. **ಅದೃಷ್ಟ ಸಂಖ್ಯೆ 9, ಅದೃಷ್ಟ ಬಣ್ಣ ನೀಲಿ**
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಗೃಹ ನಿರ್ಮಾಣದ ಕೆಲಸವನ್ನು ಆರಂಭಿಸಲು ಸೂಕ್ತ ಸಮಯ. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳ ಇರಲಿದೆ. ದೇವರ ದಯೆಯಿಂದ ಕುಟುಂಬದಲ್ಲಿ ಸಾಮರಸ್ಯ ಅಧಿಕವಾಗಿ ಇರುತ್ತದೆ. **ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಹಳದಿ**
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ದುಃಖ ಸ್ಥಿತಿಯಿಂದ ಹೊರ ಬರುವ ಸಾಮರ್ಥ್ಯ ನಿಮ್ಮಲ್ಲಿದೆ. ಯಾವ ಪರಿಸ್ಥಿತಿಗೂ ಹೆದರುವ ಅವಶ್ಯಕತೆ ಇರುವುದಿಲ್ಲ. ಕೆಲಸಗಳಲ್ಲಿ ಅಭಿವೃದ್ಧಿ ಕಾಣುವಿರಿ. ತಾಳ್ಮೆ ಈ ದಿನದ ಮೂಲ ಮಂತ್ರವಾಗಿರಲಿ. **ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಹಸಿರು**
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತಾರಾಷಾಢ 1ನೇ ಪಾದ

ಮಕರ: ತೀರ್ಮಾನಗಳು ಇನ್ನೊಬ್ಬರ ಮನಸ್ಸಿಗೆ ಅಥವಾ ಭಾವನೆಗೆ ನೋವಾಗದಂತಿರಲಿ. ವೈದ್ಯಕೀಯ ವಿದ್ಯಾರ್ಥಿಗಳು ಓದಿನಲ್ಲಿ ಪರಿಶ್ರಮ ವಹಿಸಬೇಕಾಗುತ್ತದೆ. ಇನ್ನೊಬ್ಬರಿಗೆ ತಿಳಿವಳಿಕೆ ಹೇಳುವ ಕೆಲಸವನ್ನು ಮಾಡದಿರಿ. **ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ಕೆಂಪು**
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಸ್ಥಗಿತಗೊಂಡ ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗುವುದು. ಹಳೆಯ ವಿಷಯಗಳನ್ನು ನೆನಪಿಸಿಕೊಂಡು ದುಃಖಪಡುವುದು ಸರಿಯಲ್ಲ. **ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಬಿಳಿ**
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ನಿಮ್ಮ ತಪ್ಪುಗಳ ಬಗ್ಗೆ ಬೇರೆಯವರು ಹೇಳುವ ಮೊದಲು ನೀವೇ ಸರಿಪಡಿಸಿಕೊಳ್ಳಿ. ಕುಟುಂಬದ ಸದಸ್ಯರ ಹಿತಾಸಕ್ತಿಗೆ ಆದ್ಯತೆ ಇರಲಿ. ಹಾಲು ಉತ್ಪನ್ನ ಮಾರಾಟಗಾರರಿಗೆ ಲಾಭ ಆಗಲಿದೆ. **ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಸುವರ್ಣ**
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಮೇ 17

ವಿಕ ಈ ದಿನ ವಿಶೇಷ

ದೂರಸಂಪರ್ಕ ದಿನ

ವಿಶ್ವ ದೂರಸಂಪರ್ಕ ಹಾಗೂ ಮಾಹಿತಿ ಸೊಸೈಟಿಯ ದಿನ. ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಅಂತಾರಾಷ್ಟ್ರೀಯ ಟೆಲಿಗ್ರಾಫ್ ಒಕ್ಕೂಟವನ್ನು (ಐಟಿಯು) 1865ರ ಮೇ 17ರಂದು ಸ್ಥಾಪಿಸಲಾಯಿತು. ಮೊದಲ ಅಂತಾರಾಷ್ಟ್ರೀಯ ಟೆಲಿಗ್ರಾಫ್ ಸಮಾವೇಶಕ್ಕೆ ಅಲ್ಲಿ ಸಹಿ ಹಾಕಲಾಯಿತು. ಇದು ಸ್ಥಾಪನೆಯಾದ ನೆನಪಿನಲ್ಲಿ ಪ್ರತಿವರ್ಷ ಮೇ 17ರಂದು ವಿಶ್ವ ದೂರಸಂಪರ್ಕ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ.

ಜನುಮ ದಿನ
ಪಂಕಜ್ ಉದಾಸ್

- ಗುಜರಾತ್ ಮೂಲದ ಗಾಯಕ ಪಂಕಜ್ ಉದಾಸ್ ಅವರು 1951 ರ ಮೇ 17ರಂದು ಜೆಟ್‌ಪುರ್‌ದಲ್ಲಿ ಜನಿಸಿದರು. ಗಝಲ್ ಹಾಗೂ ಜಾನಪದ ಶೈಲಿಯ ಹಾಡುಗಳಿಗೆ ಹೆಸರಾದ ಗಾಯಕ. ಹಿಂದಿ ಚಿತ್ರಗೀತೆಗಳನ್ನು ಹಾಡಿ ಜನಮನ ಸೂರೆಗೊಂಡಿದ್ದಾರೆ. 1908ರಲ್ಲಿ ಹೊರಬಂದ ಮೊದಲ ಆಲ್ಬಂ ಆಹಟ್ ಪ್ರಸಿದ್ಧಿ ನೀಡಿತು. 1986ರಲ್ಲಿ ಬಿಡುಗಡೆಯಾದ ನಾಮ್ ಚಿತ್ರದ ಇವರು ಹಾಡಿದ ಚಿಟ್ಟಿ ಆಯೀ ಹೈ (ಪತ್ರ ಬಂದಿದೆ) ಎಂಬ ಹಾಡು ಈಗಲೂ ಪ್ರಸಿದ್ಧ ಗೀತೆಯಾಗಿದೆ. 2006ರಲ್ಲಿ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಪಂಕಜ್ ಅವರು ಕಿಚ್ಚ ಸುದೀಪ್ ನಟನೆಯ ಕನ್ನಡ ಸಿನಿಮಾ ಸ್ಪರ್ಶದಲ್ಲಿ 'ಚಂದಕ್ಕಿಂತ ಚಂದಕ್ಕಿಂತ ನೀನೇ ಸುಂದರ...' ಗೀತೆಯ ಮೂಲಕ ಕನ್ನಡಿಗರಿಗೂ ಆಪ್ತರಾದರು.

'ನೀಟ್ ಬದಲು ಸಿಇಟಿ ಮಾದರಿ ಉತ್ತಮ'

■ ವಿಕ ಸುದ್ದಿಲೋಕ ಬೆಂಗಳೂರು

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆ ಬದಲು ರಾಜ್ಯದಲ್ಲಿ ಮಾದರಿಯಾಗಿರುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಅಳವಡಿಸಲು ಕೇಂದ್ರ ಸರಕಾರಕ್ಕೆ ಹಲವಾರು ಬಾರಿ ಮನವಿ ಮಾಡಿದರೂ ಸ್ಪಂದಿಸಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ದೂರಿದರು.

ವಿಕಾಸಸೌಧದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಇತ್ತೀಚೆಗೆ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದು, ವೈದ್ಯರಾಗಬೇಕೆಂಬ ಕನಸು ಹೊತ್ತಿರುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೇಂದ್ರ ಸರಕಾರ ಕೊಳ್ಳಿ ಇಟ್ಟಿದೆ. ಇದರಲ್ಲಿ ಕೇಂದ್ರ ಸರಕಾರದ ವೈಫಲ್ಯತೆ ಎದ್ದು ಕಾಣುತ್ತಿದೆ,'' ಎಂದು ಹರಿಹಾಯ್ದರು.

''ಪ್ರತಿ ವರ್ಷವೂ ನೀಟ್ ಪರೀಕ್ಷೆ ವೇಳೆ ಗೊಂದಲಗಳು ಆಗುತ್ತಲೇ ಇವೆ. ಈ ಬಾರಿ ಆಗಿರುವ ಅನಾಹುತಕ್ಕೆ ಸಂಬಂಧಪಟ್ಟ ಸಚಿವರು ರಾಜೀನಾಮೆ ನೀಡಬೇಕು. ನ್ಯಾಯಾಲಯದ ನಿರ್ದೇಶದಲ್ಲಿಯೇ ತನಿಖೆ ನಡೆಯಬೇಕು,'' ಎಂದು ಆಗ್ರಹಿಸಿದರು.

''ನೀಟ್ ಪರೀಕ್ಷೆಯನ್ನು ಯದ್ವಾತದ್ವಾ ನಡೆಸುತ್ತಿರುವ ಕೇಂದ್ರ ಸರಕಾರದ ಮೇಲೆ ನಂಬಿಕೆ ಇಲ್ಲದಂತಾಗಿದೆ. ಈಗ ಹಗರಣದ ತನಿಖೆ ನಡೆಸುತ್ತಿರುವ ಸಿಬಿಐ ಮೇಲೂ ನಮಗೆ ನಂಬಿಕೆ ಇಲ್ಲ,'' ಎಂದು ಆಕ್ರೋಶ ವ್ಯಕ್ತಪಡಿಸಿದರು. ''ಎಂಬಿಬಿಎಸ್ ಸೀಟು ಮಾರಿಕೊಳ್ಳಲು ಈ ರೀತಿ ಹಗರಣ ನಡೆಸಲಾಗುತ್ತಿದೆ. ಒಟ್ಟಾರೆ ಪ್ರಕರಣದ ಹಿಂದೆ ಪ್ರಭಾವಿಗಳ ಕೈವಾಡವಿರುವ ಗುಮಾನಿ ಇದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಬಿಜೆಪಿಗರು ನಿಸ್ಸೀಮರು,'' ಎಂದು ಕಿಡಿಕಾರಿದರು.

ಎನ್‌ಟಿಎ ಭಾಗವಾಗಿದ್ದ ಪ್ರಾಧ್ಯಾಪಕಿ ಮನೀಷಾ ಮಂಧಾರೆ ಕೈವಾಡ ಬಯಲು | ವಿಚಾರಣೆ ಬಳಿಕ ಸಿಬಿಐ ಅಧಿಕಾರಿಗಳಿಂದ ಬಂಧನ
ಸಚಿವ ಪ್ರಧಾನ್ ರಾಜೀನಾಮೆಗೆ ಪ್ರತಿಪಕ್ಷಗಳ ಒತ್ತಾಯ | ಪ್ರಧಾನಿ ಮೋದಿ ಮೌನಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿ

ನೀಟ್ ಅಕ್ರಮ: ಕಿಂಗ್‌ಪಿನ್ ಪ್ರಾಧ್ಯಾಪಕಿ ಸೆರೆ

ಹೊಸದಿಲ್ಲಿ: ವೈದ್ಯಕೀಯ ಕೋರ್ಸ್ ಪ್ರವೇಶ ಪರೀಕ್ಷೆ 'ನೀಟ್ ಯುಜಿ-26' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಮತ್ತೊಬ್ಬ ಮಾಸ್ಟರ್‌ಮೈಂಡ್ ಆರೋಪಿಯನ್ನು ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಶನಿವಾರ ಬಂಧಿಸಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ರೂಪಿಸುವ ಪ್ರಶ್ನೆಪತ್ರಿಕೆ ರಚನೆಯ ಭಾಗವಾಗಿದ್ದ ಪುಣೆ ಮೂಲದ ಸಸ್ಯಶಾಸ್ತ್ರ ಪ್ರಾಧ್ಯಾಪಕಿ ಮನೀಷಾ ಗುರುನಾಥ್ ಮಂಧಾರೆಯನ್ನು ಬಂಧಿಸಲಾಗಿದೆ.

ನೀಟ್-26ರ ಪರೀಕ್ಷೆಯ ಜೀವಶಾಸ್ತ್ರ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಮನೀಷಾ ಮಂಧಾರೆ ಪಾತ್ರವಿರುವ ಶಂಕೆಯಲ್ಲಿ ಬಂಧಿಸಲಾಗಿದೆ. ಪ್ರಕರಣದಲ್ಲಿ ಬಂಧಿಯಾಗಿರುವ ಮತ್ತೊಬ್ಬ ಕಿಂಗ್‌ಪಿನ್ ಪಿ.ವಿ. ಕುಲಕರ್ಣಿ ನೀಡಿದ ಮಾಹಿತಿ ಆಧರಿಸಿ ಪ್ರಾಧ್ಯಾಪಕಿ ಮನೀಷಾ ಮಂಧಾರೆಯನ್ನು ಶನಿವಾರ ಬೆಳಗ್ಗೆ ವಶಕ್ಕೆ ತೆಗೆದುಕೊಂಡು ಸಿಬಿಐ ಅಧಿಕಾರಿಗಳು ಸುದೀರ್ಘ ವಿಚಾರಣೆ ನಡೆಸಿದರು. ಸೋರಿಕೆ ಪ್ರಕರಣ ಸಂಬಂಧ ಬಂಧಿತರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ.

ಯಾರೂ ಈ ಮನೀಷಾ?: ಪುಣೆಯ ಮಾಡರ್ನ್ ಕಾಲೇಜಿನ ಪ್ರಾಧ್ಯಾಪಕಿಯಾದ ಮನೀಷಾ ಮಂಧಾರೆ ಅವರು ಕಳೆದ ಐದು ವರ್ಷದಿಂದ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಪ್ರಶ್ನೆಪತ್ರಿಕೆ ರಚನೆಯ ಭಾಗವಾಗಿದ್ದರು. ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ವಿಷಯದ ಪ್ರಶ್ನೆಗಳ ರಚನೆಗೆ ನೆರವಾಗಿದ್ದರು. ಮನೀಷಾ ಮಂಧಾರೆ ಅವರು ತಾವೇ ನಡೆಸುತ್ತಿದ್ದ ಕೋಚಿಂಗ್ ಸೆಂಟರ್‌ಗೆ ಸೇರಿದ್ದ ವಿದ್ಯಾರ್ಥಿಗಳಿಗಾಗಿ ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡಿದ್ದಾರೆ ಎಂದು ಸಿಬಿಐ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ''ಲಕ್ಷಾಂತರ ರೂ. ಹಣ ಪಡೆದು ಪರೀಕ್ಷೆಗೂ ಮೊದಲೇ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದರು. ಪ್ರಕರಣದ ಮತ್ತೊಬ್ಬ ಆರೋಪಿ ಮನೀಷಾ ವಾಗ್ಮೋರೆ ಅವರು ಮನೀಷಾ ಮಂಧಾರೆಗೆ ಸಹಕಾರ ನೀಡಿದ್ದಾರೆ,'' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯುವ ಕಾಂಗ್ರೆಸ್ ಪ್ರತಿಭಟನೆ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ದಿಲ್ಲಿ, ಮುಂಬಯಿ ಸೇರಿದಂತೆ ದೇಶದ ವಿವಿಧೆಡೆ ಶನಿವಾರ ಪ್ರತಿಭಟನೆ ನಡೆಸಿದರು. ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿದರು. ದಿಲ್ಲಿಯಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಸಚಿವ ಪ್ರಧಾನ್ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಸಚಿವರ ನಿವಾಸದತ್ತ ಸಾಗಲು ಯತ್ನಿಸಿದ ಕೈ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಸಚಿವ ಪ್ರಧಾನ್ ವಜಾಗೆ ರಾಹುಲ್ ಆಗ್ರಹ

''ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಹೊಣೆ ಹೊರಿಸಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು,'' ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ.

''ಶಿಕ್ಷಣ ಸಚಿವರು 22 ಲಕ್ಷ ವಿದ್ಯಾರ್ಥಿಗಳಿಗೆ ದ್ರೋಹ ಬಗೆದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮಾತ್ರ ಎಲ್ಲವನ್ನೂ ನೋಡಿಕೊಂಡು ಮೌನವಾಗಿದ್ದಾರೆ. ಸೋರಿಕೆ ಹೊಣೆ ಹೊತ್ತುಕೊಳ್ಳಿ, ಇಲ್ಲವೇ ಪ್ರಧಾನ್ ಅವರನ್ನು ಸಂಪುಟದಿಂದ ವಜಾಗೊಳಿಸಿ,'' ಎಂದು ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

2 ಸೆಟ್ ಪ್ರಶ್ನೆಪತ್ರಿಕೆ ಸೋರಿಕೆ

ಸಿಬಿಐ ತನಿಖೆಯಲ್ಲಿ ನೀಟ್ ಯುಜಿ-26ರ ಸಂಬಂಧಿಸಿದ ಎರಡು ಸೆಟ್ ಪ್ರಶ್ನೆಪತ್ರಿಕೆ ಸೋರಿಕೆ ಮಾಡಲಾಗಿದೆ ಎಂಬ ಅಂಶ ಬಯಲಾಗಿದೆ. ಒಂದು ಕೈಬರಹದಲ್ಲಿದ್ದರೆ ಮತ್ತೊಂದು ಟೈಪ್ ಮಾಡಲಾದ ರೂಪದ ಪ್ರಶ್ನೆಪತ್ರಿಕೆಯಾಗಿದೆ. ಎನ್‌ಟಿಎ ಜತೆ ನಂಟು ಹೊಂದಿದ್ದ ಪ್ರಾಧ್ಯಾಪಕರಾದ ಕುಲಕರ್ಣಿ ಹಾಗೂ ಮಂಧಾರೆ ಅವರೇ ಸೋರಿಕೆಯ ಕಿಂಗ್‌ಪಿನ್‌ಗಳು ಎಂಬುದು ತಿಳಿದು ಬಂದಿದೆ. ಎನ್‌ಟಿಎ ಪ್ರಶ್ನೆಪತ್ರಿಕೆಯ ಭಾಗವಾಗಿದ್ದ ಇಬ್ಬರು ಉಪನ್ಯಾಸಕರ ಬಂಧನದ ಬಳಿಕ ಪರೀಕ್ಷಾ ಏಜೆನ್ಸಿಯ ಹಿರಿಯ ಅಧಿಕಾರಿಗಳು, ಸಿಬ್ಬಂದಿ ಮೇಲೆಯೇ ಅನುಮಾನ ಹೆಚ್ಚಾಗಿದೆ.

ಗುವಾಹಟಿಯಲ್ಲಿ ವಿದ್ಯಾರ್ಥಿನಿಯ ಪ್ರತಿಭಟನೆ

ಕ್ಲೀನ್ ಕರೋ ನೀಟ್

ಟೈಮ್ಸ್ ನೆಟ್‌ವರ್ಕ್ ಅಭಿಯಾನ ಆರಂಭ

ಹೊಸದಿಲ್ಲಿ: ದೇಶದಲ್ಲಿ ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವು ಸಂಚಲನ ಮೂಡಿಸಿದೆ. ಪರೀಕ್ಷೆ ನಡೆಸುವ ಪ್ರಕ್ರಿಯೆಗಳ ಕುರಿತು ಜನ ಅನುಮಾನ ವ್ಯಕ್ತಪಡಿಸುವಂತಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳು ಆತಂಕಕ್ಕೀಡಾಗಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ದಿ ಟೈಮ್ಸ್ ಗ್ರೂಪ್‌ನ ಟೈಮ್ಸ್ ನೆಟ್‌ವರ್ಕ್ ವಿಭಾಗವು 'ಕ್ಲೀನ್ ಕರೋ ನೀಟ್' (ನೀಟ್ ಸ್ವಚ್ಛಗೊಳಿಸಿ) ಅಭಿಯಾನ ಆರಂಭಿಸಿದೆ.

ಟೈಮ್ಸ್ ನೆಟ್‌ವರ್ಕ್‌ನ ಹಿಂದಿ, ಟೈಮ್ಸ್ ನೌ ಕನ್ನಡ ಸೇರಿ ದೇಶದ ಹಲವು ಪ್ರಾದೇಶಿಕ ಭಾಷೆಗಳಲ್ಲಿ ಕೂಡ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಮೇ 15ರಿಂದ ಅಭಿಯಾನ ಆರಂಭಿಸಲಾಗಿದೆ. ದೇಶದ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಪೋಷಕರ ಪರವಾಗಿ ಧ್ವನಿ ಎತ್ತುವುದು ಅಭಿಯಾನದ ಉದ್ದೇಶವಾಗಿದೆ. ನೀಟ್ ಪರೀಕ್ಷಾ ವಿಧಾನದ ಸುಧಾರಣೆ, ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಯ ಬೇಡಿಕೆ, ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ನೀಡುವುದು ಅಭಿಯಾನದ ಗುರಿಯಾಗಿದೆ.

ಟೈಮ್ಸ್ ನೆಟ್‌ವರ್ಕ್ ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ವರದಿಗಳನ್ನು ಪ್ರಕಟಿಸುವ ಜತೆಗೆ ಪರೀಕ್ಷೆಗಾಗಿ ವರ್ಷಗಟ್ಟಲೆ ತಯಾರಿ ನಡೆಸಿರುವ ವಿದ್ಯಾರ್ಥಿಗಳ ಹೋರಾಟವನ್ನೂ ಜನತೆಗೆ ತಿಳಿಸಲಾಗುತ್ತದೆ. ಈಗಾಗಲೇ ಜೂನ್ 21ಕ್ಕೆ ನೀಟ್ ಮರುಪರೀಕ್ಷೆ ನಿಗದಿಪಡಿಸಲಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಮತ್ತೆ ಪರೀಕ್ಷೆಗೆ ಸಿದ್ಧರಾಗುವ ಒತ್ತಡ ಉಂಟಾಗಿದೆ. ಇದರ ಭಾಗವಾಗಿಯೇ, ಶಿಕ್ಷಣ ತಜ್ಞರು, ಮನಃಶಾಸ್ತ್ರಜ್ಞರು, ವೃತ್ತಿ ಸಮಾಲೋಚಕರು, ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ವೃತ್ತಿಪರರಿಂದ ವಿದ್ಯಾರ್ಥಿಗಳಿಗೆ ಸಲಹೆ-ಸೂಚನೆ ನೀಡಲು ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳು ಕೂಡ ಇನ್‌ಸ್ಟಾಗ್ರಾಂ, ಯೂಟ್ಯೂಬ್ ಮೂಲಕ ಚರ್ಚೆ, ಸಂವಾದದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ. ಅಭಿಯಾನದ ಅಂಗವಾಗಿ, 'ನೀಟ್ ಮರುಪರೀಕ್ಷೆ ಸಹಾಯ ಕೇಂದ್ರ'ವನ್ನು ಕೂಡ ಆಯೋಜಿಸಲಾಗುತ್ತದೆ.

ವಾದ್ರಾಗೆ ಜಾಮೀನು ಮಂಜೂರು

ಹೊಸದಿಲ್ಲಿ: ಶಿಖೋಪುರ್ ಭೂ ವ್ಯವಹಾರಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರೌಸ್ ಅವೆನ್ಯೂ ನ್ಯಾಯಾಲಯ ರಾಬರ್ಟ್ ವಾದ್ರಾ ಅವರಿಗೆ ಜಾಮೀನು ಮಂಜೂರು ಮಾಡಿದೆ.

ಶನಿವಾರ ನ್ಯಾಯಾಲಯಕ್ಕೆ ಹಾಜರಾದ ನಂತರ ಹೊರಬಂದು ಸುದ್ದಿಗಾರರ ಜತೆಗೆ ಮಾತನಾಡಿದ ವಾದ್ರಾ, ''ನನಗೆ ಮುಚ್ಚಿಡಲು ಏನೂ ಇಲ್ಲ, ಜಾರಿ ನಿರ್ದೇಶನಾಲಯವು (ಇ.ಡಿ) ಸರಕಾರದ ಸೂಚನೆಗೆ ತಕ್ಕಂತೆ ಕಾರ್ಯನಿರ್ವಹಿಸುತ್ತಿದೆ. ನ್ಯಾಯಾಂಗದ ಮೇಲೆ ನನಗೆ ನಂಬಿಕೆ ಇದೆ. ಇ.ಡಿ ಸರಕಾರದ ಸೂಚನೆಗಳ ಮೇರೆಗೆ ನಡೆಯುತ್ತಲೇ ಇರುತ್ತದೆ ಎಂಬುದು ನನಗೆ ಗೊತ್ತು. ನಾನು ಯಾವಾಗಲೂ ಇಲ್ಲೇ ಇರುತ್ತೇನೆ ಮತ್ತು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತೇನೆ,'' ಎಂದು ವಾದ್ರಾ ಹೇಳಿದರು.

ತಮ್ಮನ್ನು ತಾವು 'ಭಯವಿಲ್ಲದವರು' ಎಂದು ಕರೆದುಕೊಂಡ ವಾದ್ರಾ, ಕಾನೂನು ಪ್ರಕ್ರಿಯೆಗಳನ್ನು ಎದುರಿಸಲು ಸಿದ್ಧರಾಗಿರುವುದಾಗಿ ಮತ್ತು ಪ್ರಕರಣ ಮುಂದುವರಿದಂತೆ ಎಲ್ಲಾ ಕಾರ್ಯವಿಧಾನದ ಅಗತ್ಯತೆಗಳನ್ನು ಪಾಲಿಸುವುದಾಗಿ ತಿಳಿಸಿದರು.

ವಾದ್ರಾ ಪರವಾಗಿ ಹಿರಿಯ ವಕೀಲ ದೇವದತ್ ಕಾಮತ್, ವಕೀಲರಾದ ಪ್ರತೀಕ್ ಚಡ್ಡಾ ಮತ್ತು ಅಕ್ಷತ್ ಗುಪ್ತಾ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಹೈಕೋರ್ಟ್‌ನಲ್ಲಿ ವಾದ್ರಾ ಪರ ಹಾಜರಾಗಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು, ''ಆರೋಪಿತ ಅಪರಾಧಗಳು 2008 ಮತ್ತು 2012ರ ನಡುವಿನ ಅವಧಿಗೆ ಸೇರಿವೆ. ಆದರೆ, ಈ ಕೆಲವು ಅಪರಾಧಗಳನ್ನು ನಂತರದ ದಿನಗಳಲ್ಲಿ ಪಿಎಂಎಲ್‌ಎ ಕಾಯಿದೆಯ ವ್ಯಾಪ್ತಿಗೆ ಸೇರಿಸಲಾಗಿದೆ,'' ಎಂದು ವಾದಿಸಿದರು.

ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ

ಹೊಸದಿಲ್ಲಿ: ನಿರುದ್ಯೋಗಿ ಯುವಕರು ಜಿರಳೆಗಳಂತೆ ಎಂಬ ನನ್ನ ಹೇಳಿಕೆಯನ್ನು ಕೆಲ ಮಾಧ್ಯಮಗಳು ತಪ್ಪಾಗಿ ಬಿಂಬಿಸಿವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಸ್ಪಷ್ಟನೆ ನೀಡಿದ್ದಾರೆ.

''ಸಣ್ಣ ಪ್ರಕರಣವೊಂದರ ವಿಚಾರಣೆಯ ಸಂದರ್ಭದಲ್ಲಿ ನಾನು ಮಾಡಿದ ಮೌಖಿಕ ಅವಲೋಕನಗಳನ್ನು ಮಾಧ್ಯಮಗಳ ಒಂದು ವರ್ಗವು ತಪ್ಪಾಗಿ ಉಲ್ಲೇಖಿಸಿರುವುದನ್ನು ಓದಿ ನೋವಾಗಿದೆ. ನಾನು ನಿರ್ದಿಷ್ಟವಾಗಿ ಟೀಕಿಸಿದ್ದು ನಕಲಿ ಮತ್ತು ಬೋಗಸ್ ಪದವಿಗಳ ಸಹಾಯದಿಂದ ವಕೀಲರಾಗಿ (ಕಾನೂನು ಕ್ಷೇತ್ರ) ವೃತ್ತಿಗಳನ್ನು ಪ್ರವೇಶಿಸಿದವರನ್ನು ಮಾತ್ರ. ಇಂತಹುದೇ ವ್ಯಕ್ತಿಗಳು ಮಾಧ್ಯಮ, ಸಾಮಾಜಿಕ ಮಾಧ್ಯಮ ಮತ್ತು ಇತರ ಉದಾತ್ತ ವೃತ್ತಿ ರಂಗಗಳಿಗೂ ನುಸುಳಿದ್ದಾರೆ. ಆದ್ದರಿಂದ ಅವರು ಪರಾವಲಂಬಿಗಳಂತೆ ಇದ್ದಾರೆ. ನಾನು ನಮ್ಮ ದೇಶದ ಯುವಕರನ್ನು ಟೀಕಿಸಿದ್ದೇನೆ ಎಂದು ಬಿಂಬಿಸುವುದು ಸಂಪೂರ್ಣವಾಗಿ ಆಧಾರ ರಹಿತ,'' ಎಂದು ಸಿಜೆಐ ಸೂರ್ಯ ಕಾಂತ್ ತಮ್ಮ ಸ್ಪಷ್ಟನೆಯಲ್ಲಿ ತಿಳಿಸಿದ್ದಾರೆ.